ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 16 ಗುರುವಾರ 2023

ಸಂಪುಟ: 43 | ಸಂಚಿಕೆ: 299 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

'ಸ್ಟಾರ್ ಆಫ್ ಮೈಸೂರ್' ಹುಟ್ಟುಹಬ್ಬದ ಸಂಭ್ರಮ



'ಮೈಸೂರು ಮಿತ್ರ'ನ ಸೋದರ 'ಸ್ಟಾರ್ ಆಫ್ ಮೈಸೂರ್'ಗೆ ಇಂದು 46ನೇ ಹುಟ್ಟುಹಬ್ಬದ ಸಂಭ್ರಮ. ಇದರ ಅಂಗವಾಗಿ 56 ಪುಟಗಳ ವರ್ಣರಂಜಿತ ವಿಶೇಷಾಂಕ ಓದುಗರ ಕೈಸೇರುತ್ತಿದೆ.

ಮಾ.1ರಿಂದ ಬಿಜೆಪಿ ರಥಯಾತ್ರೆ

ಬೆಂಗಳೂರು, ಫೆ. 15 (ಕೆಎಂಶಿ)– ಮಾರ್ಚ್ 1ರಿಂದ ಬಿಜೆಪಿ ರಥಯಾತ್ರೆ ಆರಂಭವಾಗಲಿದೆ. ಇದು ಚುನಾವಣಾ ಸಮರದ ಸಮಯ. ನಾವೆಲ್ಲರೂ ದಣಿವರಿಯದೆ ಕೆಲಸ ಮಾಡಬೇಕಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಕಾಂಗ್ರೆಸ್ 'ಟೆಂಡರ್ ಬಾಂಬ್'

- ಬಿಜೆಪಿ ವಿರುದ್ಧ ಭಾರೀ ಭ್ರಷ್ಟಾಚಾರ ಆರೋಪ
- ತರಾತುರಿಯಲ್ಲಿ ಟೆಂಡರ್ ಮೊತ್ತ ಹಲವು ಪಟ್ಟು ಹೆಚ್ಚಳ
- 40% ಲೂಟಿಯ ಮುಂದುವರೆದ ಭಾಗ
- ಬಿಜೆಪಿ ಶಾಸಕ ಗೂಳಿಹಟ್ಟಿ ಶೇಖರ್ ಪತ್ರವೇ 'ಕೈ'ಗೆ ಬ್ರಹ್ಮಾಸ್ತ್ರ

ಬೆಂಗಳೂರು, ಫೆ. 15 (ಕೆಎಂಶಿ)– ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಆಡಳಿತಾರೂಢ ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್ ನಡುವೆ ಭ್ರಷ್ಟಾಚಾರದ ಆರೋಪ ಮತ್ತು ಪ್ರತ್ಯಾರೋಪ ಪ್ರತಿಧ್ವನಿಸಿದೆ.



ಇಂದಿಲ್ಲಿ ತುರ್ತು ಪತ್ರಿಕಾಗೋಷ್ಠಿ ನಡೆಸಿದ ಕಾಂಗ್ರೆಸ್ ನಾಯಕರು ಪಕ್ಷ ಅಧಿಕಾರಕ್ಕೆ ಬಂದರೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಹಗರಣಗಳ ತನಿಖೆಗೆ ಆಯೋಗ ರಚಿಸುವುದಲ್ಲದೆ, ಎಲ್ಲ ಟೆಂಡರ್‌ಗಳನ್ನು ರದ್ದು ಮಾಡುತ್ತೇವೆ ಎಂದು ಘೋಷಿಸಿದ್ದಾರೆ. ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲ, ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ವಿಧಾನಸಭಾ ಚುನಾವಣೆ ಹತ್ತಿರ ಬರುತ್ತಿದ್ದಂತೆ ರಾಜ್ಯದಲ್ಲಿ ವಸೂಲಿ ಹೆಚ್ಚಿದೆ. ಇದನ್ನು ಸುಮ್ಮನೇ ಬಿಡುವುದಿಲ್ಲ ಎಂದರು. ಈ ಅಕ್ರಮ ಅವ್ಯವಹಾರದಲ್ಲಿ ಪಾಲುದಾರರಾಗಿರುವ ಅಧಿಕಾರಿಗಳು, ಗುತ್ತಿಗೆದಾರರು ಹಾಗೂ ರಾಜಕಾರಣಿಗಳನ್ನು ಸುಮ್ಮನೆ ಬಿಡುವುದಿಲ್ಲ ಎಂದರು.

ವಿಧಾನಸಭಾ ಚುನಾವಣಾ ನೀತಿ ಸಂಹಿತೆ ಜಾರಿಗೊಳ್ಳುವ ಮುನ್ನವೇ ಎಲ್ಲಾ ಇಲಾಖೆಗಳಲ್ಲಿ ತರಾತುರಿಯಲ್ಲಿ ಟೆಂಡರ್ ಕರೆಯುತ್ತಿದ್ದಾರೆ. ಕೆಲವು ಟೆಂಡರ್ ಅನ್ನು ಒಂದಕ್ಕೆ ಎರಡರಷ್ಟು ದುಬಾರಿಯಲ್ಲಿ ನೀಡಿ, ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರಕ್ಕೆ ಎಡೆಮಾಡಿ ಕೊಡುತ್ತಿದ್ದಾರೆ. ಬಿಜೆಪಿ ಆಡಳಿತದಲ್ಲಿ ಯಾರಿಗೆ ಸಚಿವ ಸ್ಥಾನ ದೊರೆತಿಲ್ಲವೋ ಅಂತಹವರು ಹಣ ಮಾಡಿಕೊಳ್ಳಲು ಈ ಟೆಂಡರ್ ಮೂಲಕ ರಹದಾರಿ ಮಾಡಿಕೊಟ್ಟಿದ್ದಾರೆ ಎಂದು ದೂರಿದರು. ಈ ಸರ್ಕಾರ ರಾಜ್ಯದ ಬೊಕ್ಕಸವನ್ನು ಯದ್ವಾತದ್ವಾ ಲೂಟಿ ಮಾಡಲು ಆರಂಭ ಮಾಡಿದೆ. ಶಾಸಕರಿಗೆ ದುಡ್ಡು ಮಾಡಿಕೊಡಲು ತರಾತುರಿಯಲ್ಲಿ ಕೆಬಿಜೆಎಲ್‌ನಲ್ಲಿ, ವಿಶ್ವೇಶ್ವರಯ್ಯ ನೀರಾವರಿ ನಿಗಮದಲ್ಲಿ, ಕರ್ನಾಟಕ ನೀರಾವರಿ ನಿಗಮದಲ್ಲಿ ಸಭೆಯನ್ನು ಕರೆದು ಯೋಜನೆಗಳಿಗೆ ಅನುಮೋದನೆ ಪಡೆಯಲಾಗುತ್ತಿದೆ. ಇದರಲ್ಲಿ ಪಾರದರ್ಶಕತೆ ಇಲ್ಲ. ಟೆಂಡರ್ ಹಣವನ್ನು ಕೂಡ ಎರಡು, ಮೂರು ಪಟ್ಟು ಹೆಚ್ಚಿಗೆ ಮಾಡಿಕೊಂಡಿದ್ದಾರೆ.ಇದು 40 ಪರ್ಸೆಂಟ್ ಕಮಿಷನ್‌ನ ಮುಂದುವರೆದ ಭಾಗ ಎಂದು ದೂರಿದರು. ಜನರ ತೆರಿಗೆ ಹಣವನ್ನು ರಕ್ಷಣೆ ಮಾಡಬೇಕಾಗಿರುವುದು ನಮ್ಮೆಲ್ಲರ ಜವಾಬ್ದಾರಿ. ಆದರೆ ಇವರು ಟೆಂಡರ್ ಹಣವನ್ನು ಹೆಚ್ಚು ಮಾಡಿದ್ದಾರೆ, ಯಾರು ಹೆಚ್ಚು ಕಮಿಷನ್ ನೀಡುತ್ತಾರೋ ಅವರಿಗೆ ಕಾಮಗಾರಿ ಕೊಡುತ್ತಿದ್ದಾರೆ. ತಮಗೆ ಬೇಕಾದ ಗುತ್ತಿಗೆದಾರರನ್ನು ಹುಡುಕಿ ಕೆಲಸ ನೀಡುತ್ತಿದ್ದಾರೆ.ಹೀಗೆ ಮಾಡಿ ಕಮಿಷನ್ ವಸೂಲಿ ಮಾಡಿಕೊಳ್ಳುತ್ತಿದ್ದಾರೆ. ಲೋಕೋಪಯೋಗಿ, ನೀರಾವರಿ, ಬಿಬಿಎಂಪಿ, ಗ್ರಾಮೀಣಾಭಿವೃದ್ಧಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಸುಮಾರು 20,000 ಕೋಟಿ ರೂ ಬಾಕಿ ಬಿಲ್ ಇದೆ. ಹತ್ತು ಪರ್ಸೆಂಟ್ ಕಮಿಷನ್ ಕೊಟ್ಟವರಿಗೆ ದುಡ್ಡು ಕೊಡುವ ಕೆಲಸ ನಡೆಯುತ್ತಿದೆ. ಇದು ಮುಖ್ಯಮಂತ್ರಿ ಕಚೇರಿಯಿಂದಲೇ ಆರಂಭವಾಗಿದ್ದು ಇದನ್ನು ತಡೆಗಟ್ಟಬೇಕಾದದ್ದು ಅಗತ್ಯ. ಇದನ್ನು ಸದನದಲ್ಲಿ ಕೂಡ ಪ್ರಸ್ತಾಪ ಮಾಡುತ್ತೇವೆ ಎಂದರು.

ಸರ್ಕಾರಕ್ಕೆ, ಗುತ್ತಿಗೆದಾರರಿಗೆ, ಅಧಿಕಾರಿಗಳಿಗೆ ಮಾಧ್ಯಮಗಳ ಮೂಲಕ ಎಚ್ಚರಿಕೆ ನೀಡುತ್ತಿದ್ದೇವೆ. ಕಾನೂನುಬಾಹಿರವಾಗಿ ಈ ರೀತಿ ಮಾಡಿದರೆ ನೀವು ಸಿಕ್ಕಿಹಾಕಿಕೊಳ್ಳುತ್ತೀರಿ. ಈ ವಿಚಾರವನ್ನು ತಾರ್ಕಿಕ ಅಂತ್ಯ ಕಾಣಿಸುವವರೆಗೆ ನಾವು ಬಿಡುವುದಿಲ್ಲ. ನ್ಯಾಯಾಲಯದಲ್ಲಿ ಇವರ ವಿರುದ್ಧ ನಾವು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ದಾಖಲಿಸುತ್ತೇವೆ ಎಂದು ಎಚ್ಚರಿಸಿದರು. ರಾಜ್ಯದಲ್ಲಿ ಕಾಂಗ್ರೆಸ್ ಪರವಾದ ಗಾಳಿ ಬೀಸಲು ಆರಂಭವಾಗಿದೆ, ಹೀಗಾಗಿ ಮತ್ತೆ ನಾವು ಅಧಿಕಾರಕ್ಕೆ ಬಂದೇ ಬರುತ್ತೇವೆ. ನಾವು ತನಿಖಾ ಆಯೋಗ ರಚನೆ ಮಾಡಿ ಎಲ್ಲವನ್ನೂ ತನಿಖೆ ಮಾಡಿಸಿ, ಯಾರ ಮೇಲೆ ಭ್ರಷ್ಟಾಚಾರದ ▶ 8ನೇ ಪುಟಕ್ಕೆ

ಹಿಂದೆ ತಾವು ಮಾಡಿದ್ದನ್ನೇ ಈಗ ನಮ್ಮ ಮೇಲೆ ಹೊರಿಸುತ್ತಿದ್ದಾರೆ...


ಬೆಂಗಳೂರು, ಫೆ. 15 (ಕೆಎಂಶಿ)–ಸ್ವಾರ್ಥ, ಸ್ವಜನಪಕ್ಷಪಾತ, ಭ್ರಷ್ಟಾಚಾರ ಮಾಡಿದ ಕಾಂಗ್ರೆಸ್, ಇನ್ನೊಬ್ಬರನ್ನು ಅವಹೇಳನ ಮಾಡಿ ಮತ ಪಡೆಯಲು ಮುಂದಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ಕಿಡಿಕಾರಿದ್ದಾರೆ.



ಜನರ ದಾರಿ ತಪ್ಪಿಸುವ ಕೆಲಸವನ್ನು ನಿರಂತರವಾಗಿ ಆ ಪಕ್ಷದ ಮುಖಂಡರು ಮಾಡಿಕೊಂಡೇ ಅಧಿಕಾರ ಪಡೆಯಲು ಮುಂದಾಗಿದ್ದಾರೆ. ಕೇಂದ್ರದ ಅನುದಾನ ಬಳಸಿ, ಪಡಿತರ ಅಕ್ಕಿ ಕೊಟ್ಟು ಅನ್ನ ಭಾಗ್ಯ ತಾವೇ ಕೊಟ್ಟಿದ್ದಾಗಿ ▶ 8ನೇ ಪುಟಕ್ಕೆ

ತಲೆ ತಿರುಕ ಕಾಂಗ್ರೆಸ್ಸಿಗರು

ಬೆಂಗಳೂರು, ಫೆ. 15(ಕೆಎಂಶಿ)–ತಲೆ ತಿರುಕ ಕಾಂಗ್ರೆಸ್ ನಾಯಕರು ಮನ ಬಂದಂತೆ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಬಿಜೆಪಿಯ ಹಿರಿಯ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇಂದಿಲ್ಲಿ ಕಿಡಿಕಾರಿದ್ದಾರೆ. ನೀರಾವರಿ ನಿಗಮ ಸೇರಿದಂತೆ ಕೆಲವು ಇಲಾಖೆಗಳಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆ ಪಕ್ಷದ ಮುಖಂಡರು ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ನಾಯಕರನ್ನು ಜೈಲಿಗೆ ಕಳುಹಿಸುವುದಾಗಿ ನೀಡಿರುವ ಹೇಳಿಕೆಯ ಬಗ್ಗೆ ತರಾಟೆಗೆ ತೆಗೆದುಕೊಂಡರು. ▶ 8ನೇ ಪುಟಕ್ಕೆ



ಚುನಾವಣಾ ವೆಚ್ಚಕ್ಕೆ 10 ಲಕ್ಷ ಹಣವನ್ನೂ ಕೊಟ್ಟು ಹರೀಶ್‌ಗೌಡರ ಬೆಂಬಲಕ್ಕೆ ನಿಂತ ಕಾಡನಕೊಪ್ಪಲು ಗ್ರಾಮಸ್ಥರು!



ಹುಣಸೂರು, ಫೆ.15– ರಾಜಕಾರಣದಲ್ಲಿ ಹಣ ಹಂಚಿ ಮತ ಗಳಿಸುವುದು, ಅಧಿಕಾರ ಹಿಡಿಯುವುದು ಇತ್ತೀಚಿನ ದಿನಗಳಲ್ಲಿ ಸರ್ವೇ ಸಾಮಾನ್ಯವಾಗಿದೆ. ಆದರೆ, ಮತದಾರರೇ ತಾವು ಒಪ್ಪಿದ ರಾಜಕಾರಣಿಗೆ ಚುನಾವಣಾ ಖರ್ಚಿಗೆ ಹಣ ಹೊಂದಿಸಿ ಕೊಡುವುದರ ಜೊತೆಗೆ ಚುನಾವಣೆಯಲ್ಲಿ ಅವರ ಬೆಂಬಲಕ್ಕೆ ನಿಲ್ಲುವಂತಹ ವಿಚಾರ ಅಪರೂಪದಲ್ಲಿ ಅಪರೂಪವಲ್ಲವೇ!? ಇಂತಹ ಒಂದು ವಿದ್ಯಮಾನ ಹುಣಸೂರು ತಾಲೂಕಲ್ಲಿ ನಡೆದಿದೆ.

ಹುಣಸೂರು ತಾಲೂಕಿನ ಕಾಡನಕೊಪ್ಪಲು ಗ್ರಾಮದ ಮುಖಂಡರು ಜಾತ್ಯಾತೀತ ಜನತಾದಳ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡರಿಗೆ 10 ಲಕ್ಷ ರೂ. ದೇಣಿಗೆ ನೀಡುವ ಮೂಲಕ ಅವರಿಗೆ ಬೆಂಬಲವಾಗಿ ನಿಂತಿದ್ದಾರೆ. ತಾಲೂಕಿನ ಮೂಕನಹಳ್ಳಿಯಲ್ಲಿ ಇಂದು ರಾತ್ರಿ ನಡೆದ ಜೆಡಿಎಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಕಾಡನಕೊಪ್ಪಲು ಗ್ರಾಮದ ಮುಖಂಡರಾದ ಜಯಣ್ಣ, ಅರ್ಜುನ, ಕನಕರಾಜು, ರೇವಣ್ಣ, ರವಿ ಸೇರಿದಂತೆ ಹಲವರು ತಮ್ಮ ಗ್ರಾಮದಲ್ಲಿ ಸಂಗ್ರಹಿಸಿದ ದೇಣಿಗೆ ಹಣವನ್ನು ಹರೀಶ್‌ಗೌಡರಿಗೆ ನೀಡಿದ್ದಾರೆ. ಇದೇ ವೇಳೆ ನಾವು ನಿಮ್ಮೊಂದಿಗಿದ್ದೇವೆ. ನಿಮ್ಮ ಗೆಲುವಿಗೆ ಶ್ರಮಿಸುತ್ತೇವೆ ಎಂದು ವಾಗ್ದಾನ ಮಾಡಿದ್ದಾರೆ.

ಈ ಸಂದರ್ಭ ಮಾತನಾಡಿದ ಗ್ರಾಮದ ಮಾಜಿ ಯಜಮಾನ ಜಯಣ್ಣ, ಚುನಾವಣೆ ಬಂತೆಂದರೆ ರಾಜಕಾರಣಿಗಳ ಮನೆ ಬಾಗಿಲಲ್ಲಿ ನಿಂತು ಹಣ ಕೇಳುವುದಲ್ಲ. ಇತ್ತೀಚೆಗೆ ಜನ ಹಾಗೆಂಯೇ ತಿಳಿದಿದ್ದಾರೆ. ಇದು ಧರ್ಮವಲ್ಲ. ದೇವರು ಒಪ್ಪುವಂತಹ ಮಾರ್ಗವಲ್ಲ. ನಮಗೆ ಈಗ ಬೇಕಾದವರು ಜಿ.ಡಿ. ಹರೀಶ್‌ಗೌಡರು. ಅವರನ್ನು ಆಯ್ಕೆ ಮಾಡಿಕೊಳ್ಳಲು ಚುನಾವಣೆ ವೆಚ್ಚಕ್ಕಾಗಿ ನಮ್ಮ ಗ್ರಾಮಸ್ಥರಿಂದ ದೇಣಿಗೆಯನ್ನು ಸಂಗ್ರಹಿಸಿ 10 ಲಕ್ಷ ರೂ.ಗಳನ್ನು ನೀಡುತ್ತಿದ್ದೇವೆ. ಹರೀಶ್‌ಗೌಡರಿಂದ ನಮಗೆ ಹೆಚ್ಚಿನ ಅಭಿವೃದ್ಧಿಯಾಗುತ್ತದೆ ಎಂಬ ಅಪಾರ ವಿಶ್ವಾಸವಿದೆ. ಈ ಕ್ಷೇತ್ರದ ಹಾಲಿ ಶಾಸಕರು 15 ವರ್ಷದಿಂದ ಅಭಿವೃದ್ಧಿಯನ್ನೇ ಮಾಡದೇ ಇರುವುದು ನಮಗೆ ಬೇಸರ ತಂದಿದೆ. ಹಾಗಾಗಿ ಈ ಬಾರಿ ಹರೀಶ್‌ಗೌಡರಿಗೆ ಹಣವನ್ನೂ ಕೊಟ್ಟು, ಮತವನ್ನೂ ನೀಡಿ ಗೆಲ್ಲಿಸುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡುವ ಕೆಲಸ ಮಾಡುತ್ತಿದ್ದೇವೆ ಎಂದರು.

ದೇಣಿಗೆ ಸ್ವೀಕರಿಸಿ ಮಾತನಾಡಿದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ, ಹಣ ಇಲ್ಲದೆ ರಾಜಕಾರಣ ಮಾಡುವುದು ಸಾಧ್ಯವೇ ಇಲ್ಲ ಎನ್ನುವ ಪರಿಸ್ಥಿತಿ ಈಗ ನಿರ್ಮಾಣವಾಗಿದೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ಆದರೆ ಇಲ್ಲಿ ಜನರೇ ನನ್ನ ಮೇಲೆ ನಂಬಿಕೆ ಇರಿಸಿ ಹಣವನ್ನು ಸಂಗ್ರಹಿಸಿ ನನಗೆ ನೀಡುವ ಮೂಲಕ ಅಪಾರ ಪ್ರೀತಿ–ವಿಶ್ವಾಸ ತೋರಿಸಿದ್ದಾರೆ. ಇದರಿಂದ ನನಗೆ ಆತ್ಮವಿಶ್ವಾಸ ಮತ್ತಷ್ಟು ಹೆಚ್ಚಾಗಿದೆ. ಜನರ ಸೇವೆ ಮಾಡುವ ಉತ್ಸಾಹ ಇಮ್ಮಡಿಯಾಗಿದೆ. ಈ ಕ್ಷಣವನ್ನು ನನ್ನ ಜೀವ ಇರುವವರೆಗೂ ಮರೆಯುವುದಿಲ್ಲ ಎಂದು ಕೃತಜ್ಞತೆ ಸಲ್ಲಿಸಿದರು. ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಅಧ್ಯಕ್ಷ ವಾಸು, ಮುಖಂಡರಾದ ಹರವೆ ಶ್ರೀಧರ್, ಸಂದೇಶ್, ಸತೀಶ್ ಪಾಪಣ್ಣ, ಗೋವಿಂದೇಗೌಡ, ಬಲರಾಮ, ಹಳ್ಳಿಮನೆ ರವಿ, ಸುದೀಪ್ ಸೇರಿದಂತೆ ಹಲವರು ಮುಖಂಡರು ಹಾಜರಿದ್ದರು.

ಬುದ್ಧಿವಾದ ಹೇಳಿದವನ ಬಡಿದು ಕೊಂದವರ ಬಂಧನ

- ತಳ್ಳುಗಾಡಿಯಲ್ಲಿ ಕಬಾಬ್ ಮಾರಾಟ ಮಾಡುವ ವ್ಯಕ್ತಿಯ ನಾಪತ್ತೆ ಭೇದಿಸಿದ ಪೊಲೀಸರು
- ಹುಡುಗಿ ಚುಡಾಯಿಸಬೇಡಿ ಎಂದಿದ್ದಕ್ಕೆ ರೊಚ್ಚಿಗೆದ್ದ ನಾಲ್ವರು ದುಷ್ಕರ್ಮಿಗಳಿಂದ ಘೋರ ಹತ್ಯೆ

ಮೈಸೂರು, ಫೆ. 15– ಹುಡುಗಿಯರನ್ನು ಚುಡಾಯಿಸಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಬಾಬ್ ಅಂಗಡಿ ಮಾಲೀಕನನ್ನು ಅಪಹರಿಸಿ, ಹತ್ಯೆ ಮಾಡಿದ ಆರೋಪದ ಮೇರೆಗೆ ನರಸಿಂಹರಾಜ ಠಾಣೆ ಪೊಲೀಸರು ನಾಲ್ವರನ್ನು ಬಂಧಿಸಿದ್ದಾರೆ.

ಮೂಲತಃ ಕಲ್ಯಾಣಗಿರಿಯವನಾಗಿದ್ದು, ಹಾಲಿ ಗಾಂಧಿನಗರದಲ್ಲಿ ವಾಸವಿದ್ದ ಸಯ್ಯದ್ ಮನ್ಸೂರ್(33) ಹತ್ಯೆಗೀಡಾದವನಾಗಿದ್ದು, ಈತನನ್ನು ಅಪಹರಿಸಿ, ಬರ್ಬರವಾಗಿ ಹತ್ಯೆ ಮಾಡಿದ್ದಲ್ಲದೇ ಶವವನ್ನು ಶ್ರೀರಂಗಪಟ್ಟಣದ ಬಳಿ ಬಿಸಾಡಿದ್ದ ಅಭಿ ಅಲಿಯಾಸ್ ಬ್ರೂಸ್ ಲೀ, ಸಯ್ಯದ್ ಜೈನುದ್ದೀನ್ ಅಲಿಯಾಸ್ ಜೈನ್, ಶಾರೀಕ್ ಅಲಿಯಾಸ್ ಬಬನ್ ಮತ್ತು ಇಕ್ಬಾಲ್ ಬಂಧಿತ ಆರೋಪಿಗಳಾಗಿದ್ದು, ಇವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿ ಎಲ್ಲರನ್ನೂ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.



ಸಯ್ಯದ್ ಮನ್ಸೂರ್

ವಿವರ: ಸಯ್ಯದ್ ಮನ್ಸೂರ್ ಗಾಂಧಿನಗರದ ಜೋಗಿ ಸಿದ್ದಯ್ಯ ಪಾರ್ಕ್ ಬಳಿ ತಳ್ಳುಗಾಡಿಯಲ್ಲಿ ಕಬಾಬ್ ಮಾರಾಟ ಮಾಡುತ್ತಿದ್ದ. ಅಭಿ ಅಲಿಯಾಸ್ ಬ್ರೂಸ್‌ಲೀ ಪ್ರತೀದಿನ ಪಾನಮತ್ತನಾಗಿ ಬಂದು ಈತನ ಕಬಾಬ್ ಅಂಗಡಿ ಮುಂದೆ ನಿಂತು ಹುಡುಗಿಯರನ್ನು ಚುಡಾಯಿಸುತ್ತಿದ್ದ ಎಂದು ಹೇಳಲಾಗಿದೆ. ಪದೇ ಪದೆ ಬ್ರೂಸ್‌ಲೀಗೆ ಹುಡುಗಿಯರನ್ನು ಚುಡಾಯಿಸಬಾರದು ಎಂದು ಮನ್ಸೂರ್ ಬುದ್ಧಿವಾದ ಹೇಳುತ್ತಿದ್ದ. ಜನವರಿ ಕೊನೇ ವಾರದಲ್ಲಿ ಬ್ರೂಸ್‌ಲೀ ಹದ್ದುಮೀರಿ ವರ್ತಿಸಿದ್ದರಿಂದ ಮನ್ಸೂರ್ ಮತ್ತು ಆತನ ಸಂಬಂಧಿಕ ಅಸ್ಲಾಂ ಪಾಷ ಸೇರಿ ಹೊಡೆದು ಕಳುಹಿಸಿದ್ದಾರೆ.


ಈ ಕಾರಣದಿಂದಾಗಿ ಮನ್ಸೂರ್ ಮೇಲೆ ಬ್ರೂಸ್‌ಲೀ ದ್ವೇಷ ಸಾಧಿಸುತ್ತಾ ಬಂದಿದ್ದ. ಒಂದು ದಿನ ಬ್ರೂಸ್‌ಲೀ ಜೊತೆ ಸಯ್ಯದ್ ಜೈನುದ್ದೀನ್ ಕಬಾಬ್ ಅಂಗಡಿ ಬಳಿ ಬಂದು ಮನ್ಸೂರ್ ಜೊತೆ ಗಲಾಟೆ ಮಾಡಿ ಹೋಗಿದ್ದಾರೆ. ಅಲ್ಲದೇ ಮತ್ತೊಂದು ದಿನ ಜೈನುದ್ದೀನ್ ಅಣ್ಣ ಘನಿ ಎಂಬಾತನೂ ಕೂಡ ಬ್ರೂಸ್‌ಲೀ ಮೇಲೆ ಹಲ್ಲೆ ನಡೆಸಿದ್ದಕ್ಕಾಗಿ ಮನ್ಸೂರ್ ಜೊತೆ ಗಲಾಟೆ ಮಾಡಿ ಹೋಗಿದ್ದಾನೆ.

ಕಳೆದ ಭಾನುವಾರ (ಫೆ. 12) ಮನ್ಸೂರ್ ಕಬಾಬ್ ಅಂಗಡಿ ತೆರೆದಿರಲಿಲ್ಲ. ಆತ ಕಬಾಬ್ ಅಂಗಡಿಯಿಂದ ಸ್ವಲ್ಪ ದೂರವಿರುವ ಮಾರ್ಕೆಟ್ ಪಕ್ಕದಲ್ಲಿ ತನ್ನ ಕಾರಿನಲ್ಲಿ ಕುಳಿತಿದ್ದಾಗ ಬ್ರೂಸ್‌ಲೀ ಮತ್ತಿತರರು ಆತನ ಮೇಲೆ ಹಲ್ಲೆ ನಡೆಸಿ ಹೊತ್ತೊಯ್ದಿದ್ದಾರೆ. ಅಂದು ರಾತ್ರಿ 11 ಗಂಟೆ ಸುಮಾರಿನಲ್ಲಿ ಮಗನನ್ನು ಹುಡುಕಿಕೊಂಡು ಬಂದ ಮನ್ಸೂರ್ ತಾಯಿ ಗುಲ್ನಾಜ್ ▶ 8ನೇ ಪುಟಕ್ಕೆ

ಉಸಿರುಗಟ್ಟಿಸಿ ಪತಿ ಹತ್ಯೆ; ಪತ್ನಿ ಬಂಧನ

ಹೂಟಗಳ್ಳಿಯಲ್ಲಿ ಮಂಗಳವಾರ ತಡರಾತ್ರಿ ಘಟನೆ, ಅನಾಥರಾದ ಇಬ್ಬರು ಗಂಡು ಮಕ್ಕಳು

ಮೈಸೂರು, ಫೆ. 15(ಆರ್‌ಕೆ)– ಶೀಲ ಶಂಕಿಸಿ ಪ್ರತೀದಿನ ಕುಡಿದು ಬಂದು ಹಿಂಸೆ ನೀಡುತ್ತಿದ್ದನೆಂಬ ಕಾರಣಕ್ಕೆ ಗಂಡನನ್ನು ಉಸಿರುಗಟ್ಟಿಸಿ ಪತ್ನಿಯೇ ಹತ್ಯೆಗೈದಿರುವ ಘಟನೆ ಮೈಸೂರು ಹೊರವಲಯದ ಹೂಟಗಳ್ಳಿಯಲ್ಲಿ ಕಳೆದ ರಾತ್ರಿ (ಮಂಗಳವಾರ) ನಡೆದಿದೆ. ಹೂಟಗಳ್ಳಿಯ ಮಾರಿಗುಡಿ ಬಳಿಯ ನಿವಾಸಿ ದಿವಂಗತ ಮಿಲ್ ಸಿದ್ದೇಗೌಡರ ಮಗ ಮಂಜುನಾಥ್(40) ಹತ್ಯೆಯಾದವರು. ಕೊಲೆಗೈದ ಪತ್ನಿ ನಿಖಿತಾಳನ್ನು ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಕಳೆದ 10 ವರ್ಷಗಳ ಹಿಂದೆ ಬೋಗಾದಿಯ ನಿಖಿತಾಳನ್ನು ಮದುವೆಯಾಗಿದ್ದ ಮಂಜುನಾಥ್ ದಂಪತಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ.



ಹತ್ಯೆಯಾದ ಮಂಜುನಾಥ್
ಆರೋಪಿ ನಿಖಿತಾ

ಆರಂಭದಲ್ಲಿ ಅನ್ಯೋನ್ಯವಾಗಿ ಜೀವನ ನಡೆಸುತ್ತಿದ್ದ ಅವರು, ನಂತರದ ದಿನಗಳಲ್ಲಿ ವೈಮನಸ್ಸು ಉಂಟಾಗಿದ್ದರಿಂದ ಕಳೆದ 6 ವರ್ಷಗಳ ಹಿಂದೆ ಫೇಸ್‌ಬುಕ್ ಸ್ನೇಹಿತನೊಂದಿಗೆ ಪರಾರಿಯಾಗಿದ್ದ ನಿಖಿತಾ, ರಾಯಚೂರಿನಲ್ಲಿದ್ದಳು. ಸಂಬಂಧಿಕರೆಲ್ಲರೂ ನ್ಯಾಯ ಪಂಚಾಯ್ತಿ ಮಾಡಿ ಬುದ್ಧಿವಾದ ಹೇಳಿ ಆಕೆಯನ್ನು ಕರೆತಂದು ಗಂಡನೊಟ್ಟಿಗೆ ಸೇರಿಸಿದ್ದರಾದರೂ, ▶ 8ನೇ ಪುಟಕ್ಕೆ

ಆಡಳಿತಾರೂಢ ಬಿಜೆಪಿ, ಜೆಡಿಎಸ್‌ಗೆ ಜನ ಬೆಂಬಲವಿಲ್ಲ; ಕಾಂಗ್ರೆಸ್‌ಗೆ 144 ಸ್ಥಾನ: ಡಿಕೆಶಿ ಭವಿಷ್ಯ

- ಹುಣಸೂರಲ್ಲಿ ಪ್ರಜಾಧ್ವನಿ ಯಾತ್ರೆ ಸಮಾವೇಶದಲ್ಲಿ ಸ್ಪಷ್ಟ ಬಹುಮತ ಗಳಿಸುವ ವಿಶ್ವಾಸ
- ಬಿಜೆಪಿ ದುರಾಡಳಿತದಿಂದ ಬೇಸತ್ತಿರುವ ರಾಜ್ಯದ ಜನತೆ

ಹುಣಸೂರು, ಫೆ.15– ಕಮಲ ಕೆರೆಯಲ್ಲಿದ್ದರೆ ಚಂದ, ತೆನೆ ಹೊಲದಲ್ಲಿದ್ದರೆ ಚಂದ. ದಾನ ಧರ್ಮ ಮಾಡುವ 'ಕೈ'ಯ್ಯಲ್ಲಿ ಅಧಿಕಾರವಿದ್ದರೆ ಚಂದ ಎಂದು ಅಮಾಯಕ ಬಾಲಕನೊಬ್ಬ ಹೇಳುವ ಮಾತಿನಂತೆ ಮುಂಬರುವ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿ, ಜೆಡಿಎಸ್ ಪಕ್ಷಗಳಿಗೆ ಜನ ಬೆಂಬಲವಿಲ್ಲ. ಕಾಂಗ್ರೆಸ್ 144 ಸ್ಥಾನದೊಂದಿಗೆ ಸ್ಪಷ್ಟ ಬಹುಮತದಿಂದ ಅಧಿಕಾರಕ್ಕೆ ಬರಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಭವಿಷ್ಯ ನುಡಿದರು.

ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ಕಾಂಗ್ರೆಸ್‌ನ ಪ್ರಜಾಧ್ವನಿ ಯಾತ್ರೆ ಸಮಾವೇಶಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಾನು ರಾಜ್ಯದ ಎಲ್ಲಾ ಕಡೆ ತಿರುಗಾಡುತ್ತಿದ್ದೇನೆ. ಆಡಳಿತ ಪಕ್ಷದ ದುರಾಡಳಿತದ ಬಗ್ಗೆ ರಾಜ್ಯದ ಜನತೆಗೆ ತಿಳಿದಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಜನರ ಆಶಯದಂತೆ ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರ ಹಿಡಿಯಲಿದೆ ಎಂದರು.

ಅರಸರ ಸಾಮಾಜಿಕ ನ್ಯಾಯ ಪಾಲನೆ: ಸಾಮಾಜಿಕ, ಅಭಿವೃದ್ಧಿಯ ಹರಿಕಾರ, ಭೂ ಸುಧಾರಣೆ ಚಿಂತಕ ದಿವಂಗತ ಡಿ. ದೇವರಾಜ ಅರಸರ ಮಾರ್ಗದಲ್ಲಿ ನಡೆಯುವ ಮೂಲಕ ರಾಜಕಾರಣ ಮಾಡುತ್ತಿದ್ದು, ಸಾಮಾಜಿಕ ನ್ಯಾಯದ ಪರಿಪಾಲನೆ ಮಾಡುತ್ತಿದ್ದೇವೆ. ನಾನು ಹುಣಸೂರಿಗೆ ಉಪಚುನಾವಣೆ ವೇಳೆ ಬಂದಿದ್ದೆ. ಅಂದು ಹೆಚ್.ವಿಶ್ವನಾಥ್ ವಿರುದ್ಧ ಹೆಚ್.ಪಿ. ಮಂಜುನಾಥ್‌ಗೆ ಆಶೀರ್ವಾದ ಮಾಡಿ ಕಾಂಗ್ರೆಸ್ ಬೆಂಬಲಿಸಿದ್ದೀರಿ. ಅದೇ ರೀತಿ ಮುಂಬರುವ ಚುನಾವಣೆಯಲ್ಲೂ ಕಾಂಗ್ರೆಸ್ ಬೆಂಬಲಿಸಿ, ಕಮಿಷನ್ ದಂಧೆ ಸರ್ಕಾರವನ್ನು ಕೊನೆಗಾಣಿಸಿ ಎಂದರು.



ವಿಶ್ವನಾಥ್ ಬಗ್ಗೆ ಮೆಚ್ಚುಗೆ: ಹೆಚ್.ವಿಶ್ವನಾಥ್ ಪ್ರಜ್ಞಾವಂತರು. ಆದರೆ ಆಪರೇಷನ್ ಕಮಲಕ್ಕೆ ಒಳಗಾಗಿ ಬಿಜೆಪಿಗೆ ಹೋಗಿ ಅಲ್ಲಿನ ಅಂತರಂಗ ಅರಿತು ಬೇಸತ್ತು ಅಲ್ಲಿಂದ ಹೊರಬಂದು ಅಲ್ಲಿನ ನ್ಯೂನತೆಗಳನ್ನು ರಾಜಾರೋಷವಾಗಿ ಜನತೆ ಮುಂದಿಟ್ಟರು. ನನ್ನ ಝಂಡಾ ಬೇರೆ ಇರಬಹುದು. ಆದರೆ ಅಜೆಂಡಾ ಒಂದೇ ಎಂದು ಹೇಳುವ ಮೂಲಕ ದೂರಾಲೋಚನೆ ಮಾಡಿ ಮರಳಿ ಗೂಡಿಗೆ ಬರುವ ತವಕದಲ್ಲಿದ್ದಾರೆ. ಇತ್ತೀಚೆಗೆ ಅವರು ನನ್ನ ಬಳಿ ಬಂದು ನಾನು ಕೊನೆಯದಾಗಿ ಕಾಂಗ್ರೆಸ್ಸಿಗನಾಗಿ ಸಾಯುತ್ತೇನೆ ಎನ್ನುವ ಮೂಲಕ ಕೊನೆಗೆ ಕಾಂಗ್ರೆಸ್‌ನ ತತ್ವ ಸಿದ್ಧಾಂತಕ್ಕೆ ಬದ್ಧರಾಗಿದ್ದಾರೆ. ಸಾಮಾಜಿಕ ಕಳಕಳಿ ಹೊಂದಿರುವ ಅವರು ಉತ್ತಮ ವಾಗ್ಮಿ, ಚಿಂತಕರು, ಹಿರಿಯ ನಾಯಕರಾದ ಅವರ ಅನುಭವಗಳನ್ನು ನಾವು ಮೆಲುಕು ಹಾಕುವ ಮೂಲಕ ಮುನ್ನಡೆಯಬೇಕಾಗಿದೆ ಎಂದರು.

ಅಧಿಕಾರ ಶಾಶ್ವತವಲ್ಲ: ಇಲ್ಲಿ ಯಾರೂ ಶಾಶ್ವತರಲ್ಲ. ಅಧಿಕಾರ ಶಾಶ್ವತವಲ್ಲ. ಹೀಗಾಗಿ ನಾವು ಸಮಾಜಕ್ಕೆ ಏನು ಕೊಡುಗೆ ನೀಡಿದ್ದೇವೆ ಎಂಬುದೇ ಮುಖ್ಯ. ಹೆಚ್.ಪಿ.ಮಂಜುನಾಥ್ ಹಾಗೂ ಅವರ ಕುಟುಂಬ ಸಾಯಿ ಮಂದಿರ ಸ್ಥಾಪಿಸಿದ್ದಾರೆ. ಅದು ಶಾಶ್ವತವಾಗಿ ನೂರಾರು ಕಾಲ ನೆನಪಾಗಿ ಉಳಿಯಲಿದೆ ಎಂದರು.

ಅನುದಾನದಲ್ಲಿ ತಾರತಮ್ಯ: ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಕ್ಷೇತ್ರಗಳಿಗೆ ನೀಡುವ ಅನುದಾನದಲ್ಲಿ ತಾರತಮ್ಯ, ಮಲತಾಯಿ ಧೋರಣೆ, ಜನಪರ ಕೆಲಸಗಳಿಗೆ ಅವಕಾಶವಿಲ್ಲದೆ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಅನುದಾನವಿರುವ ಕೆಲಸಗಳನ್ನು ಕೆಲಸ ಮಾಡಲು ಬಿಡುತ್ತಿಲ್ಲ. ನಿನ್ನೆ ಸದನದಲ್ಲಿ ತಂಬಾಕು ರೈತರ ಮತ್ತು ಅನುದಾನ ತಾರತಮ್ಯದ ಬಗ್ಗೆ ಮಾತನಾಡಿದ್ದೇನೆ. ಆದರೂ ಬಿಜೆಪಿ ಸರ್ಕಾರ ಹಿಟ್ಲರ್‌ನಂತೆ ನಡೆದುಕೊಳ್ಳುತ್ತಿದೆ. ಕಾಂಗ್ರೆಸ್ ಶಾಸಕರಿರುವ ಕ್ಷೇತ್ರಗಳಿಗೆ ಅನುದಾನ ನೀಡುವಿಕೆಯಲ್ಲಿ ತಾರತಮ್ಯ ಮಾಡುತ್ತಿದೆ. ಕಮಿಷನ್ ದಂಧೆಯಲ್ಲಿ ಮುಳುಗಿರುವ ಬಿಜೆಪಿಯನ್ನು ಕಿತ್ತೊಗೆಯಲು ರಾಜ್ಯದ ಜನತೆ ಚುನಾವಣೆ ಎದುರು ನೋಡುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ರಾಜ್ಯದ ಜನತೆ ತಕ್ಕ ಶಾಸ್ತಿ ಮಾಡಲಿದ್ದಾರೆ. ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆ ರಾಜ್ಯದ ಜನರಿಗೆ ಬಿಜೆಪಿ ಸರ್ಕಾರದ ದುರಾಡಳಿತದ ಬಗ್ಗೆ ತಿಳಿಸಲಿದೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಡಿ.ತಿಮ್ಮಯ್ಯ, ಮಾಜಿ ಸಚಿವೆ ರಾಣಿ ಸತೀಶ್ ಮತ್ತಿತರರು ಮಾತನಾಡಿದರು.

ತಾಲೂಕಿನ ಚಿಕ್ಕಾಡನಹಳ್ಳಿಯಿಂದ ಹೊರಟ ಪ್ರಜಾಧ್ವನಿ ಯಾತ್ರೆ ಮನುಗನಹಳ್ಳಿ, ಬಿಳಿಕೆರೆ, ಕುಪ್ಪೆ, ಕೊಳಗಟ್ಟ, ಬನ್ನಿಕುಪ್ಪೆ, ಮೂಕನಹಳ್ಳಿ ಮಾರ್ಗವಾಗಿ ಹುಣಸೂರು ಹೆಬ್ಬಾಗಿಲಿಗೆ ಆಗಮಿಸಿತು. ಅಲ್ಲಿ ಡಿ.ದೇವರಾಜ ಅರಸು ಪ್ರತಿಮೆಗೆ ಮಾಲಾರ್ಪಣೆ, ಪುಷ್ಪಾರ್ಚನೆ ಮಾಡಿ ನಂತರ 500ಕ್ಕೂ ಹೆಚ್ಚು ಕಳಸ ಹೊತ್ತ ಮಹಿಳೆಯರ ಪೂರ್ಣಕುಂಭ ಸಾರಥ್ಯದೊಂದಿಗೆ ಪ್ರಜಾಧ್ವನಿ ಯಾತ್ರೆ ನಗರ ಪ್ರವೇಶಿಸಿತು. ಈ ವೇಳೆ ಕಲ್ಪತರು ವೃತ್ತದಲ್ಲಿ ಕೇಸರಿ ಬಿಳಿ ಹಸಿರು ಬಣ್ಣವುಳ್ಳ ಕಿತ್ತಳೆ, ಮಲ್ಲಿಗೆ, ಸೇಬಿನ ಭಾರೀ ಗಾತ್ರದ ಹಾರವನ್ನು ಜೆಸಿಬಿ ಮೂಲಕ ಡಿ.ಕೆ.ಶಿವಕುಮಾರ್ ಮತ್ತು ಗಣ್ಯರಿಗೆ ಹಾಕಲಾಯಿತು. ಅಲ್ಲಿಂದ ಯಾತ್ರೆ ಮುನೇಶ್ವರ ಕಾವಲ್ ಮೈದಾನ ತಲುಪಿತು. ಅರಸು ಪ್ರತಿಮೆಯಿಂದ ಮುನೇಶ್ವರ ಕಾವಲ್ ಮೈದಾನದವರೆಗೆ ಸಾವಿರಾರು ಮಂದಿ ಕಾರ್ಯಕರ್ತರು ಬೈಕ್ ▶ 8ನೇ ಪುಟಕ್ಕೆ

ಮಹಾಶಿವರಾತ್ರಿ ಪೂಜಾ ಮಹೋತ್ಸವ



ಮೈಸೂರು, ಫೆ. 15–ನಗರದ ದೇವರಾಜ ಮೊಹಲ್ಲಾ, ದಿವಾನ್ಸ್ ರಸ್ತೆಯಲ್ಲಿರುವ ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನದಲ್ಲಿ 51ನೇ ವರ್ಷದ ಮಹಾ ಶಿವರಾತ್ರಿ ಉತ್ಸವದ ಪ್ರಯುಕ್ತ ಫೆ.17ರಂದು ಗಣಪತಿ ಹೋಮ, ಫೆ.18ರ ಶಿವರಾತ್ರಿಯಂದು ಬೆಳಗ್ಗೆ ಪಂಚಾಮೃತ ಪುರಸ್ಸರ ರುದ್ರಾಭಿಷೇಕ, 108 ಪಾರ್ಥಿವಲಿಂಗ ಪೂಜೆ, ಸಂಜೆ ಪ್ರದೋಷ ಪೂಜೆ, ರಾತ್ರಿ ರಾಶಿಪೂಜೆ, ರಂಗಪೂಜೆ, ದೀಪಾರಾಧನೆ, ನಾಲ್ಕು ಜಾವದ ರುದ್ರಾಭಿಷೇಕ ನೆರವೇರುತ್ತದೆ. ಫೆ. 19 ರಂದು ರುದ್ರಹೋಮ, ಫೆ.20 ರಂದು ಅಮಾವಾಸ್ಯೆ ಪ್ರಯುಕ್ತ ನವಗ್ರಹ ಶಾಂತಿ, ಶನಿ ಮಹಾಶಾಂತಿ, ಮೃತ್ಯುಂಜಯ ಹೋಮ, ಕಾಳಸರ್ಪಶಾಂತಿ, ಧನ್ವಂತರಿ ಹೋಮ, ದಕ್ಷಿಣಾಮೂರ್ತಿ ಹೋಮ, ಸ್ವಯಂವರಾ ಪಾರ್ವತಿ ಹೋಮ, ಮಾಂಗಲ್ಯ ಮಂಗಳ ಚಂಡಿಕಾ ಹೋಮ, ಕುಜಶಾಂತಿ ಹೋಮ, ಶ್ರೀ ಸುಬ್ರಹ್ಮಣ್ಯ ಹೋಮ ನೆರವೇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಪ್ರಧಾನ ಅರ್ಚಕರಾದ ಸೋಮ ಶೇಖರ್ ಅವರನ್ನು 9535413361 ಸಂಖ್ಯೆಯಲ್ಲಿ ಸಂಪರ್ಕಿಸಬಹುದು.

ರಾಜ್ಯಮಟ್ಟದ 'ವಾಲ್ಮೀಕಿ ಕಪ್' ವಾಲಿಬಾಲ್ ಪಂದ್ಯಾವಳಿ



ತಿ.ನರಸೀಪುರ, ಫೆ.15–ಮುದ್ದುಕೃಷ್ಣ ಸ್ನೇಹ ಬಳಗದ ವತಿಯಿಂದ ಮಾರ್ಚ್ 4 ಮತ್ತು 5 ರಂದು ತಿ.ನರಸೀಪುರದಲ್ಲಿ ರಾಜ್ಯಮಟ್ಟದ 'ವಾಲ್ಮೀಕಿ ಕಪ್' ವಾಲಿಬಾಲ್ ಪಂದ್ಯಾವಳಿ ಏರ್ಪಡಿಸಲಾಗಿದೆ ಪ್ರಥಮ ಬಹುಮಾನ 50 ಸಾವಿರ, ದ್ವಿತೀಯ 25 ಸಾವಿರ, ತೃತೀಯ 10 ಸಾವಿರ ಹಾಗೂ ಟ್ರೋಫಿ. ಪ್ರವೇಶ ಶುಲ್ಕ 2 ಸಾವಿರ ರೂ. ಕ್ರೀಡಾಪಟುಗಳಿಗೆ ಉಪಾಹಾರದ ವ್ಯವಸ್ಥೆ ಮಾಡಲಾಗಿದೆ. ಶ್ರೀ ತೋಟಗೇರಿ ಮಾರಮ್ಮನ ದೇವಸ್ಥಾನದ ಅಂಗಳ, ತಲಕಾಡು ಮುಖ್ಯ ರಸ್ತೆ, ತಿ.ನರಸೀಪುರ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 8431182911, 9060089244, 8884613605.

ಅಮಿತ್ ಶಾ ರಾಣಿ ಅಬ್ಬಕ್ಕ, ಟಿಪ್ಪು ಪ್ರಸ್ತಾಪಕ್ಕೆ ಕಾಂಗ್ರೆಸ್, ಪ್ರಗತಿಪರರ ಆಕ್ರೋಶ

ಮೈಸೂರು, ಫೆ.15(ಎಂಕೆ)– ಕೇಂದ್ರ ಗೃಹ ಸಚಿವ ಅಮಿತ್ ಶಾ, ದಕ್ಷಿಣ ಕನ್ನಡದಲ್ಲಿ ಭಾಷಣ ಮಾಡುವಾಗ ನಿಮಗೆ ರಾಣಿ ಅಬ್ಬಕ್ಕ ಬೇಕಾ ಅಥವಾ ಟಿಪ್ಪು ಬೇಕಾ ಎಂದು ಪ್ರೇಕ್ಷಕರನ್ನು ಪ್ರಶ್ನಿಸಿರುವುದನ್ನು ಕೆಲ ಕಾಂಗ್ರೆಸ್ ಮುಖಂಡರು, ಪ್ರಗತಿಪರ ಚಿಂತಕರು ಟೀಕಿಸಿದ್ದಾರೆ. ದಕ್ಷಿಣ ಕನ್ನಡದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ದ್ವೇಷದ ಹಾಗೂ ಓಟ್ ಬ್ಯಾಂಕ್ ಭಾಷಣ ಮಾಡಿರುವ ಗೃಹ ಸಚಿವರು, ರಾಣಿ ಅಬ್ಬಕ್ಕ ಬೇಕಾ ಅಥವಾ ಟಿಪ್ಪು ಬೇಕಾ ಎಂದು ಪ್ರೇಕ್ಷಕರನ್ನು ಪ್ರಶ್ನಿಸುವ ಮೂಲಕ ಹಿಂದೂ–ಮುಸ್ಲಿಂ ಸಮುದಾಯದ ನಡುವೆ ಈಗಾಗಲೇ ಸೃಷ್ಟಿಸಲಾಗಿರುವ ಕಂದಕವನ್ನು ಇನ್ನಷ್ಟು ವಿಸ್ತಾರಗೊಳಿಸುವುದು ಸ್ಪಷ್ಟವಾಗಿದೆ ಎಂದಿದ್ದಾರೆ. ರಾಣಿ ಅಬ್ಬಕ್ಕನಿಗೂ ಮತ್ತು ಟಿಪ್ಪುಗೂ ಏನು ಸಂಬಂಧ, ಹಿಂದೂ ರಾಣಿ ಅಬ್ಬಕ್ಕಳ ತುಳುನಾಡಿನ ರಾಜಧಾನಿ ಉಳ್ಳಾಲದ ಮೇಲೆ ಟಿಪ್ಪು ಆಕ್ರಮಣ ಮಾಡಿದ್ದಾನಾ, ಹಿಂದೂ ರಾಣಿಗೆ ಮುಸ್ಲಿಂ ಟಿಪ್ಪು ಹಿಂಸೆ ಕೊಟ್ಟಿದ್ದಾನಾ, ಯಾವಾಗ ಹೇಗೆ ಎಂಬುದನ್ನು ಬಿಡಿಸಿ ಹೇಳದ ಅಮಿತ್ ಶಾ ಅವರಿಗೆ ಕರ್ನಾಟಕ, ಉಳ್ಳಾಲ ಹಾಗೂ ಶ್ರೀರಂಗಪಟ್ಟಣದ ಇತಿಹಾಸವೂ ಗೊತ್ತಿಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ರಾಣಿ ಅಬ್ಬಕ್ಕರ ಹೆಸರೊಂದನ್ನು ಉಳಿದು ಇತರರ ಚರಿತ್ರೆಯ ಬಗ್ಗೆ ಮಾಹಿತಿ ಇಲ್ಲವೆನ್ನಿಸುತ್ತದೆ. ರಾಣಿ ಅಬ್ಬಕ್ಕ ಹುಟ್ಟಿದ್ದು 1525 ರಲ್ಲಿ ಹಾಗೂ ಮರಣ ಹೊಂದಿದ್ದು 1570ರಲ್ಲಿ ಹಾಗೆಯೇ ಟಿಪ್ಪು ಜನನ 1750 ಮತ್ತು ಮರಣ 1799 ರಲ್ಲಾಗಿದೆ. ರಾಣಿ ಅಬ್ಬಕ್ಕ ನಿಧನರಾದ 180 ವರ್ಷದ ನಂತರ ಟಿಪ್ಪು ಹುಟ್ಟಿದ್ದು. ಇಂಥದ್ದರಲ್ಲಿ ರಾಣಿ ಅಬ್ಬಕ್ಕ ಮತ್ತು ಟಿಪ್ಪುರ ತುಲನೆ ಯಾಕೆ ಮಾಡಿದರು ಸನ್ಮಾನ್ಯ ಅಮಿತ್‌ಶಾ ಅವರು ಎಂದು ಟೀಕಿಸಿದ್ದಾರೆ. ರಾಣಿ ಅಬ್ಬಕ್ಕ ಮತ್ತು ಟಿಪ್ಪು, ವಿದೇಶಿ ಆಕ್ರಮಣಕಾರರಾದ ಪೋರ್ಚುಗೀಸರು ಹಾಗೂ ಬ್ರಿಟೀಷರನ್ನು ತಮ್ಮ ರಾಜ್ಯದಿಂದ ಹೊರಹಾಕಲು ಹೋರಾಡಿದರು. ಸಾಯಿಸಲ್ಪಟ್ಟವರು. ಈ ದೃಷ್ಟಿಯಲ್ಲಿ ರಾಣಿ ಅಬ್ಬಕ್ಕ ಮತ್ತು ಟಿಪ್ಪುರ ಹೆಸರನ್ನು ಹೆಮ್ಮೆಯಿಂದ ಸ್ಮರಿಸಿಕೊಳ್ಳಬೇಕಾಗುತ್ತದೆ. ಇದು ಸ್ವಾಭಿಮಾನ, ದೇಶಾಭಿಮಾನದ ಪೂರಕ ಸಾಕ್ಷಿ. ಆದರೆ ನಮ್ಮ ಸನ್ಮಾನ್ಯ ಕೇಂದ್ರ ಗೃಹಮಂತ್ರಿ ಅಮಿತ್ ಶಾ ಅವರಿಗೆ ಈ ನಿಜ ವಿಷಯ ಗೊತ್ತಿಲ್ಲ. ಗೊತ್ತುಪಡಿಸಲು ಬಿಜೆಪಿಯವರಿಗೆ ಗೊತ್ತಿಲ್ಲ. ಇದು ಅತಿ ದೊಡ್ಡ ದುರಂತ. ಇಂತಹ ಮೂರ್ಖತನದ ಹೇಳಿಕೆಯನ್ನು ನಿಲ್ಲಿಸಬೇಕೆಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಇತಿಹಾಸಕಾರ ಡಾ.ಪಿ.ವಿ.ನಂಜರಾಜ ಅರಸ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ರಂಗಕರ್ಮಿ ಎನ್.ಎಸ್.ಗೋಪಿನಾಥ್ ಆಗ್ರಹಿಸಿದ್ದಾರೆ.

ಇಂದು, ನಾಳೆ ನೀರು ಸರಬರಾಜಿನಲ್ಲಿ ವ್ಯತ್ಯಯ

ಮೈಸೂರು, ಫೆ. 15–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2ನೇ ಹಾಗೂ 3ನೇ ಹಂತ ಯಂತ್ರಾಗಾರಗಳಿಗೆ ವಿದ್ಯುತ್ ಸರಬರಾಜು ಮಾಡುವ ಬೆಳಗೊಳ ಸಬ್ ಸ್ಟೇಷನ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆಯಲ್ಲಿ ಫೆ. 16 ಮತ್ತು 17ರಂದು ಸಿ.ಎಸ್.ಆರ್ ಮತ್ತು ಹೆಚ್.ಎಲ್.ಆರ್ ಪ್ರಾಂತ್ಯಗಳಿಗೆ, ವಾರ್ಡ್ ನಂ.1 ರಿಂದ 7, ವಾರ್ಡ್ ನಂ. 20, 23, 38 ವಾರ್ಡ್ ನಂ. 42,80,45, 47 ಇದಕ್ಕೆ ಸಂಬಂಧಪಟ್ಟ ಡಿ.ಎಂ.ಎ. ಪ್ರದೇಶಗಳಾದ ಹೆಬ್ಬಾಳು, ಕುಂಬಾರಕೊಪ್ಪಲು, ಮಂಚೇಗೌಡನ ಕೊಪ್ಪಲು, ಕೆ.ಜಿ.ಕೊಪ್ಪಲ್, ಮೇಟಗಳ್ಳಿ, ಲೋಕನಾಯಕನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ಪಡುವಾರಹಳ್ಳಿ, ವಿನಾಯಕನಗರ, ಮಂಡಿಮೊಹಲ್ಲಾ, ಲಷ್ಕರ್‌ಮೊಹಲ್ಲಾ, ಶಾರದಾದೇವಿನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 3ನೇ ಹಂತ, ಗೋಕುಲಂ 1, 2, 3ನೇ ಹಂತ, ಹಾಗೂ ಹೊರವಲಯಗಳಾದ ಆರ್.ಎಂ.ಪಿ., ಬಿ.ಇ.ಎಂ.ಎಲ್, ಯಾದವಗಿರಿ, ಬನ್ನಿಮಂಟಪ ಎ.ಬಿ.ಸಿ.ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ, ಎನ್.ಆರ್. ಮೊಹಲ್ಲಾ ಭಾಗಶಃ ಪ್ರದೇಶಗಳು, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂ, ಜನತಾನಗರ, ಕೆ.ಹೆಚ್.ಬಿ. ಕಾಲೋನಿ, ಹೂಟಗಳ್ಳಿ, ವಿಜಯನಗರ 2ನೇಹಂತ ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಗಣರಾಜ್ಯೋತ್ಸವದಲ್ಲಿ ಭಾಗವಹಿಸಿದ್ದ ಎನ್‌ಸಿಸಿ ಕೆಡೆಟ್‌ಗಳಿಗೆ ಅಭಿನಂದನೆ




ಮೈಸೂರು, ಫೆ.15–ದೆಹಲಿಯ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಎನ್‌ಸಿಸಿ ಕೆಡೆಟ್‌ಗಳಾದ ಬಿ.ಶಶಾಂಕ್, ಡಿ.ಸೌಂದರ್ಯ, ಎಂ.ಎಸ್.ಸೂರ್ಯ, ಡಿ.ಐಶ್ವರ್ಯ, ಯು.ಜಯಶ್ರೀ ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ ಇವರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಕರ್ನಾಟಕ ಅಂಡ್ ಗೋವಾ ಎನ್‌ಸಿಸಿ ನಿರ್ದೇಶನಾಲಯದ ಡೆಪ್ಯುಟಿ ಡೈರಕ್ಟರ್ ಜನರಲ್ ಏರ್ ಕಮಾಂಡರ್ ಬಿ.ಎಸ್.ಕನ್ವರ್ (ಡಿಡಿಜಿ) ಪ್ರಶಂಸಾ ಪತ್ರವನ್ನು ನೀಡಿ ಅಭಿನಂದಿಸಿದರು. ಇದೇ ವೇಳೆ ತಲ್‌ಸೈನಿಕ್ ಕ್ಯಾಂಪಿನಲ್ಲಿ ಭಾಗವಹಿಸಿದ್ದ ಎಂ. ಶಂಕರಮ್ಮ ಅವರನ್ನೂ ಸನ್ಮಾನಿಸಲಾಯಿತು. ಕ್ಯಾಂಪಿನಲ್ಲಿ ಭಾಗವಹಿಸಿದ್ದ ಮತ್ತೋರ್ವ ಕೆಡೆಟ್ ಎಂ.ಆರ್.ಶಿವರಾಂ ಅವರನ್ನು ಮುಖ್ಯಮಂತ್ರಿಗಳ ಪದಕದೊಂದಿಗೆ ಗೌರವಿಸಲಾಯಿತು.

ಕಾಲೇಜಿನ ಎನ್‌ಸಿಸಿ ಅಧಿಕಾರಿಗಳಾದ ಲೆ. ಡಾ.ಎಲ್.ವಿನಯ್‌ಕುಮಾರ್ ಅವರನ್ನು ಸಹ ಮುಖ್ಯಮಂತ್ರಿಗಳ ಪದಕದೊಂದಿಗೆ ಸನ್ಮಾನಿಸಲಾಯಿತು. ಅಂತೆಯೇ ಕಾಲೇಜಿಗೆ ಬೆಸ್ಟ್ ಇನ್‌ಸ್ಟಿಟ್ಯೂಷನ್ ಅವಾರ್ಡ್ ದೊರೆತಿರುವುದು ಹೆಮ್ಮೆಯ ಸಂಗತಿಯಾಗಿದೆ.

ಶ್ರೀಮತಿ ಭಾಗ್ಯಮ್ಮ ನಿಧನ



ಮೈಸೂರು, ಫೆ.15– ಮೈಸೂರಿನ ಭಾನವಿ ಆಸ್ಪತ್ರೆ ಅಧ್ಯಕ್ಷ ಹಾಗೂ ಕೆಪಿಸಿಸಿ ಸದಸ್ಯ ನರಸೇಗೌಡ ಅವರ ಪತ್ನಿ ಶ್ರೀಮತಿ ಭಾಗ್ಯಮ್ಮ(70) ಅನಾರೋಗ್ಯದಿಂದ ಬುಧವಾರ ನಿಧನರಾದರು.

ಮೃತರು ಪತಿ, ಪುತ್ರ ಡಾ.ವಿಜಯ ಚೆಲುವರಾಜ್, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಾಳೆ(ಫೆ.16) ಭಾನವಿ ಆಸ್ಪತ್ರೆ ಆವರಣದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದ್ದು, ಅಂತ್ಯಕ್ರಿಯೆ ಶುಕ್ರವಾರ(ಫೆ.17) ಬೆಳಗ್ಗೆ ಹೊಸಹುಂಡಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗೋವಿಂದೇಗೌಡ



ಹುಣಸೂರು: ತಾಲೂಕು ಕರಿಮುದ್ದನಹಳ್ಳಿ ಗ್ರಾಮದ ಗೋವಿಂದೇಗೌಡರು (82) ಫೆ.14ರ ಮಂಗಳವಾರ ಮಧ್ಯರಾತ್ರಿ 12.40ರಲ್ಲಿ ಮೈಸೂರು ಒಂಟಿಕೊಪ್ಪಲ್‌ನ ಸಿಇಜಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪುತ್ರ ಅಕ್ಷಯ ವೆಂಚರ್ಸ್ ಮಾಲೀಕ ಸತೀಶ್ ಸೇರಿದಂತೆ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸ್ವಗ್ರಾಮ ಕರಿಮುದ್ದನಹಳ್ಳಿಯಲ್ಲಿ ಇಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಖಾಸಗಿ ಸಂಸ್ಥೆಗಳಿಗೆ ಒತ್ತಾಸೆಯಾಗಿ ಕೆಲಸ ಮಾಡುವಂತಹವರನ್ನು

ಕುಲಪತಿಯಾಗಿ ಆಯ್ಕೆ ಮಾಡಲೇಬಾರದು

● ಸಂಸದ ಪ್ರತಾಪ್‌ಸಿಂಹ ಖಡಕ್ ಅಭಿಪ್ರಾಯ ● ಮೈಸೂರು ವಿವಿ ಸಂಶೋಧನಾ ವಿದ್ಯಾರ್ಥಿಗಳಿಗೆ ಸಿಎಸ್‌ಆರ್ ನಿಧಿಯಡಿ ಲ್ಯಾಪ್‌ಟಾಪ್ ವಿತರಣೆ



ಮೈಸೂರು ವಿವಿ ವಿಜ್ಞಾನ ಭವನದಲ್ಲಿ ಬುಧವಾರ ವಿವಿಯ ಒಬಿಸಿ ಸಂಶೋಧನಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಯಿತು.

ಮೈಸೂರು,ಫೆ.15(ಪಿಎಂ)–ಮೈಸೂರು ವಿವಿಯಲ್ಲಿ ಆರ್ಥಿಕ ಸಂಪನ್ಮೂಲದ ಸೋರಿಕೆ ತಡೆಗಟ್ಟಿ ವಿವಿ ಗೌರವ ಹೆಚ್ಚಿಸಬೇಕಿದೆ. ಈ ನಿಟ್ಟಿನಲ್ಲಿ ಸ್ವಹಿತಾಸಕ್ತಿ ಇಲ್ಲದ, ಬೇರೆ ಬೇರೆ ಟ್ರಸ್ಟ್‌ಗಳಲ್ಲಿ ಟ್ರಸ್ಟಿಗಳಾಗಿರದವರನ್ನೇ ಕುಲಪತಿಯಾಗಿ ಆಯ್ಕೆ ಮಾಡಬೇಕೆಂಬ ಕೂಗು ಮೈಸೂರಿನಿಂದ ಹೊರಹೊಮ್ಮಬೇಕಿದೆ ಎಂದು ಸಂಸದ ಪ್ರತಾಪ್‌ಸಿಂಹ ಅಭಿಪ್ರಾಯಪಟ್ಟರು.

ಮೈಸೂರು ಮಾನಸ ಗಂಗೋತ್ರಿಯ ಮೈಸೂರು ವಿವಿ ವಿಜ್ಞಾನ ಭವನದ ಸೆಮಿನಾರ್ ಹಾಲ್‌ನಲ್ಲಿ ಮೈಸೂರು ವಿವಿಯ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಐಟಿಸಿ ಕಂಪನಿಯ ಸಿಎಸ್‌ಆರ್ ನಿಧಿಯಡಿ ವಿವಿಯ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಿ ಅವರು ಮಾತನಾಡಿದರು.

ವಿವಿಯಲ್ಲಿ ಅಥವಾ ಸರ್ಕಾರಿ ಅಧೀನದ ವಿವಿಯಲ್ಲಿ ಹತ್ತಾರು ವರ್ಷಗಳಿಂದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಮತ್ತು ವಿವಿ ಬಗ್ಗೆ ಅಪಾರ ಪ್ರೀತಿ–ಗೌರವ, ಕಾಳಜಿ ಹೊಂದಿರುವ ಮಾನದಂಡದಲ್ಲಿ ಕುಲಪತಿಗಳ ಆಯ್ಕೆಗೆ ನಿಯಮ ತರುವ ಅಗತ್ಯವಿದೆ. ಯಾವುದೋ ಖಾಸಗಿ ಸಂಸ್ಥೆಯ ಟ್ರಸ್ಟಿಗಳಿದ್ದೂ ಅಂತಹವರು ಏಕೆ ಸರ್ಕಾರಿ ಅಧೀನದ ವಿವಿಗಳಿಗೆ ಕುಲಪತಿಗಳು ಆಗಬೇಕು. ಈ ರೀತಿ ಮೈಸೂರು ವಿವಿಯಲ್ಲಿ ಹಿಂದೆ ಆಗಿದ್ದು, ಮತ್ತೊಂದು ಖಾಸಗಿ ಸಂಸ್ಥೆ ಸಾಕಲು ಮೈಸೂರು ವಿವಿಯೇನು ಕಾಮಧೇನು ಅಲ್ಲ ಎಂದು ಕಿಡಿಕಾರಿದರು.

ಸೋರಿಕೆ ತಡೆಗಟ್ಟಬೇಕು: ಮೈಸೂರು ವಿವಿಯಲ್ಲಿ ಸುಮಾರು 1,400 'ಸಿ' ಮತ್ತು 'ಡಿ' ಗ್ರೂಪ್ ನೌಕರರು ಇದ್ದು, ಈ ಪೈಕಿ ಶೇ.50ರಷ್ಟು ಮಂದಿ ಅಗತ್ಯವೇ ಇರಲಿಲ್ಲ. ಹೆಚ್ಚುವರಿ ನೇಮಕಾತಿ ಅನಗತ್ಯ ಎಂಬುದನ್ನು ಹಿಂದಿನ ಕುಲಪತಿ ಪ್ರೊ.ಹೇಮಂತ್ ಕುಮಾರ್ ಅವರಲ್ಲಿಯೂ ಹೇಳಿದ್ದೆ. ಈ ರೀತಿಯ ಸೋರಿಕೆ ತಡೆಗಟ್ಟಿದ್ದರೆ ಅತಿಥಿ ಉಪನ್ಯಾಸಕರ ವೇತನ ಹೆಚ್ಚಳಕ್ಕೂ ಸರ್ಕಾರದ ತಕರಾರು ಇರುತ್ತಿರಲಿಲ್ಲ. ವಿವಿಯ ಹಣಕಾಸು ಕೊರತೆ ಹಿನ್ನೆಲೆಯಲ್ಲಿ ಸರ್ಕಾರ ಅನಿವಾರ್ಯವಾಗಿ ಆಕ್ಷೇಪ ವ್ಯಕ್ತಪಡಿಸಿತು ಎಂದು ತಿಳಿಸಿದರು.

ವಿವಿಯಲ್ಲಿ ಆದಾಯಕ್ಕೆ ಅನುಗುಣವಾಗಿ ಖರ್ಚು ಇಲ್ಲದೆ, ಸೋರಿಕೆ ಹೆಚ್ಚಿದೆ. ಏನೇನೋ ವ್ಯವಹಾರಿಕವಾಗಿ ನೇಮಕಾತಿ ಮಾಡುತ್ತಾ ಹೋದರೆ ಕೊನೆಗೆ ಅದರಿಂದ ಸೋರಿಕೆ ಆಗಲಿದೆ. 'ಸಿ' ಮತ್ತು 'ಡಿ' ಗ್ರೂಪ್ ನೌಕರರ ಅನಗತ್ಯ ನೇಮಕಾತಿ ತಡೆದಿದ್ದರೆ, ಅವರ ವೇತನಕ್ಕಾಗಿ ವಿನಿಯೋಗಿಸುತ್ತಿರುವುದರಲ್ಲಿ ಪ್ರತಿ ತಿಂಗಳು 50 ಲಕ್ಷ ರೂ. ವಿವಿಗೆ ಉಳಿತಾಯ ಆಗುತ್ತಿತ್ತು. ಇದೇ ಹಣವನ್ನು ಸಂಶೋಧಕರ ಫೆಲೋಶಿಪ್ ಹೆಚ್ಚಳಕ್ಕೆ ಸದ್ವಿನಿಯೋಗ ಮಾಡಿಕೊಳ್ಳಬಹುದಿತ್ತು ಎಂದರು. ಮೈಸೂರು ವಿವಿಗೆ ದೇಶದ ಅತ್ಯುನ್ನತ ಸ್ಥಾನ ಅಲಂಕರಿಸಿರುವ ಪ್ರಧಾನಿಗಳು, ರಾಷ್ಟ್ರಪತಿಗಳು ಭೇಟಿ ನೀಡಿದ್ದಾರೆ. ಮೈಸೂರು ಮಹಾರಾಜರಿಂದ ಸ್ಥಾಪನೆಗೊಂಡು ಶತಮಾನೋತ್ಸವ ಆಚರಿಸಿಕೊಂಡು ದೇಶದ ನಾಲ್ಕನೇ ವಿವಿಯಾಗಿ ಹೊರಹೊಮ್ಮಿರುವ ಮೈಸೂರು ವಿವಿಯ ಪ್ರತಿಷ್ಠೆಯನ್ನು ಮತ್ತಷ್ಟು ಹೆಚ್ಚಿಸಬೇಕು ಎಂದು ತಿಳಿಸಿದರು. ಎಸ್‌ಸಿ–ಎಸ್‌ಟಿ ಸಂಶೋಧನಾ ವಿದ್ಯಾರ್ಥಿಗಳಿಗೆ ಫೆಲೋಶಿಪ್ ನೀಡುತ್ತಿರುವುದು ಸಾಮಾಜಿಕ ನ್ಯಾಯ. ಅಂತೆಯೇ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳೂ ಕಷ್ಟದ ಹಿನ್ನೆಲೆಯಲ್ಲಿ ಬಂದಿರುತ್ತಾರೆಂಬ ಕಾರಣಕ್ಕೆ 45 ಮಂದಿಗೆ ಫೆಲೋಶಿಪ್ ಕೊಡಿಸಲಾಯಿತು. ಅದೇ ಮಾದರಿಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಕೊಡಬೇಕೆಂಬ ಮನವಿ ಹಿನ್ನೆಲೆಯಲ್ಲಿ ಐಟಿಸಿ ಕಂಪನಿ ಮೂಲಕ ಮೊದಲ ಹಂತದಲ್ಲಿ 30 ಮಂದಿ ಆಯ್ಕೆ ಮಾಡಿ ಅವರಿಗೆ ಲ್ಯಾಪ್‌ಟಾಪ್ ವಿತರಿಸಲಾಯಿತು. ಅಂತೆಯೇ ಇಂದು 25 ಮಂದಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಗಿದೆ ಎಂದರು.

ಸಿಎಸ್‌ಆರ್ ನಿಧಿಯಡಿ ಕೆರೆಗಳ ಹೂಳೆತ್ತುವ ಬದಲು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಕೊಡುವಂತೆ ಐಟಿಸಿ ಕಂಪನಿಯವರಿಗೆ ಸಲಹೆ ನೀಡಿದೆ. ಕಾರಣ ಮನ್ರೇಗಾ ಯೋಜನೆಯಡಿ ಕೆರೆಗಳ ಹೂಳೆತ್ತುವ ಕೆಲಸ ಮಾಡಿಸಲಾಗುತ್ತಿದೆ. ಮೊದಲ ಬಾರಿಗೆ ಐಟಿಸಿ ಕಂಪನಿ ಮೂಲಕ ಲ್ಯಾಪ್‌ಟಾಪ್ ಕೊಡಿಸುವಾಗ ಕೆಲವರು ಸಿಗರೇಟ್ ಕಂಪನಿ ಮೂಲಕ ಕೊಡಿಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು. ಹೀಗೆ ಮೊಸರಲ್ಲೂ ಕಲ್ಲು ಹುಡುಕುವ ಬುದ್ಧಿಯನ್ನು ಕೆಲವರು ತೋರುತ್ತಾರೆ. ಕರ್ನಾಟಕ ಸರ್ಕಾರದ ಬಜೆಟ್ 2 ಲಕ್ಷ ಕೋಟಿ ರೂ. ಇದ್ದು, ಇದರಲ್ಲಿ 30 ಸಾವಿರ ಕೋಟಿ ಆದಾಯವು ಮದ್ಯ ಮಾರಾಟದಿಂದ ಬರುತ್ತಿದೆ. ಕುಡುಕರಿಂದ ಬಂದಿದೆ ಎಂದು ಖರ್ಚು ಮಾಡಬೇಡಿ ಎನ್ನಲು ಸಾಧ್ಯವೇ? ಕ್ಷುಲ್ಲಕ ಕಾರಣಗಳಿಗಾಗಿ ಅಸಮಾಧಾನ ವ್ಯಕ್ತಪಡಿಸುವವರ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ ಎಂದು ಹೇಳಿದರು. ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಪ್ರಭಾರ ಕುಲಪತಿ ಪ್ರೊ.ಹೆಚ್.ರಾಜಶೇಖರ್, ಸಿಂಡಿಕೇಟ್ ಸದಸ್ಯೆ ಡಾ.ಚೈತ್ರಾ ನಾರಾಯಣ್, ಐಟಿಸಿ ಕಂಪನಿ ಪ್ರಧಾನ ವ್ಯವಸ್ಥಾಪಕ ಶ್ರೀನಿವಾಸರೆಡ್ಡಿ, ವ್ಯವಸ್ಥಾಪಕ ಪೂರ್ಣೇಶ್ ಹಾಜರಿದ್ದರು.

ಕುಲಸಚಿವರ ತಕರಾರಿನಿಂದ ಕನ್ನಡದ ಕೆಲಸಕ್ಕೆ ಅಡ್ಡಿ

ಮೈಸೂರು,ಫೆ.15(ಪಿಎಂ)–ಜಯಲಕ್ಷ್ಮೀ ವಿಲಾಸ ಅರಮನೆ ದುರಸ್ತಿಗೊಳಿಸಿ ಒಂದು ಭಾಗದಲ್ಲಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಕೇಂದ್ರ ಕಾರ್ಯನಿರ್ವಹಿಸುವ ಒಡಂಬಡಿಕೆಗೆ ಕಾನೂನು ಅಭಿಪ್ರಾಯ ಪಡೆದಿಲ್ಲವೆಂದು ವಿವಿಯ ಕುಲಸಚಿವರಾದ ವಿ.ಆರ್.ಶೈಲಜಾ ತಕರಾರು ತೆಗೆದಿರುವುದರಿಂದ ಕನ್ನಡದ ಕೆಲಸಕ್ಕೆ ಅಡ್ಡಿಯಾಗಿದೆ ಎಂದು ಸಂಸದ ಪ್ರತಾಪ್‌ಸಿಂಹ ಆರೋಪಿಸಿದರು. ಆರಂಭವಾಗಿ 9 ವರ್ಷಗಳಾದರೂ ಶಾಸ್ತ್ರೀಯ ಕನ್ನಡ ಅತ್ಯುನ್ನತ ಕೇಂದ್ರಕ್ಕೆ ಕಟ್ಟಡವಿಲ್ಲ. ಇಲ್ಲಿ ಕನ್ನಡದ ಕೆಲಸ ಆಗುತ್ತಿಲ್ಲ ಎಂಬ ಟೀಕೆಗಳು ಕೇಳಿ ಬರುತ್ತಿವೆ. ಜೊತೆಗೆ ತಮಿಳು ಶಾಸ್ತ್ರೀಯ ಕೇಂದ್ರಕ್ಕೆ 10 ಕೋಟಿ ಕೊಟ್ಟರೆ, ಕನ್ನಡಕ್ಕೆ ಕೇವಲ 1 ಕೋಟಿ ಕೊಟ್ಟಿದ್ದಾರೆ ಎಂದು ದೂರುತ್ತಾರೆ. ತಮಿಳು ಭಾಷೆ ಶಾಸ್ತ್ರೀಯ ಕೇಂದ್ರವು ಹೊಸ ಬಿಲ್ಡಿಂಗ್ ಕಟ್ಟಿ ಹೆಚ್ಚು ಸಂಶೋಧನೆ ಮಾಡಿದ್ದರಿಂದ ಕೇಂದ್ರ ಸರ್ಕಾರ ಹೆಚ್ಚು ಅನುದಾನ ನೀಡಿದೆ. ಆದರೆ ಇಲ್ಲಿ ಯಾವುದೇ ಯೋಜನೆಗಳನ್ನು ಮಾಡದೇ ಕನ್ನಡಕ್ಕೆ ಕೇವಲ ಒಂದು ಕೋಟಿ ಎಂದರೆ ಪ್ರಯೋಜನವಿಲ್ಲ ಎಂದರು. ಜಯಲಕ್ಷ್ಮೀ ವಿಲಾಸ ಅರಮನೆ ದುರಸ್ತಿಗೆ ಡಿಪಿಆರ್ ಸಿದ್ಧಪಡಿಸಿ 27 ಕೋಟಿ ಅನುದಾನ ತರಲು ಮುಂದಾದರೆ ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ.ಶಶಿಧರ್ ಪ್ರಸಾದ್ ಇದಕ್ಕೆ ವಿರುದ್ಧವಾಗಿ ಸುದ್ದಿಗೋಷ್ಠಿ ಕರೆಯುತ್ತಾರೆ. ವಿವಿಯಲ್ಲಿ ಅವರೇ ಕುಲಪತಿಯಾಗಿದ್ದಾಗ ಮಾಡಿದ ಘನಕಾರ್ಯಗೊತ್ತಿದೆ ಎಂದು ಕಿಡಿಕಾರಿದರು.

ಈ ಯಮ್ಮ ಏನು ಪತ್ತೆಹಚ್ಚಿದೆ: ಈ ಹಿಂದಿನ ಕುಲಪತಿಗಳು, ಕುಲಸಚಿವರು ಇದ್ದ ಸಭೆಯಲ್ಲೇ ತೀರ್ಮಾನ ಆದ ಮೇಲೆ ಈ ಯಮ್ಮ ಬಂದು ಹೊಸದಾಗಿ ಏನು ಪತ್ತೆಹಚ್ಚಿದೆ ಎಂದು ಶೈಲಜಾ ವಿರುದ್ಧ ಸಂಸದರು ಅಸಮಾಧಾನ ವ್ಯಕ್ತಪಡಿಸಿದರು. ಇವರ್‍ಯಾರು ಶೈಲಜಾ, ಒಬ್ಬ ಕೆಎಎಸ್ ಅಧಿಕಾರಿ. ಐಎಎಸ್ ಅಧಿಕಾರಿ ಹಿಂದೆ ದುಂಬಾಲು ಬಿದ್ದು ಇಷ್ಟು ಕೆಲಸ ಮಾಡಿಕೊಂಡು ಬಂದರೆ ಇಲ್ಲಿ ಕೊಕ್ಕೆ ಹಾಕುತ್ತಾರೆ. ಐಎಎಸ್ ಅಧಿಕಾರಿಗಳು ಆಲ್ ಇಂಡಿಯಾ ರ್‍ಯಾಂಕಿಂಗ್‌ನಲ್ಲಿ ಬಂದಿರುತ್ತಾರೆ. ಅವರ ಇಗೋ ಎಷ್ಟಿರುತ್ತದೆ ಎಂಬುದು ನಿಮ್ಮ ಅನುಭವಕ್ಕೆ ಬರೋಲ್ಲ. ಈ ಕೆಎಎಸ್ ಅಧಿಕಾರಿಗಳನ್ನು ಅವರು ತಮ್ಮ ಕೊಠಡಿಯಿಂದ ಹೊರಗೆ ನಿಲ್ಲಿಸಿರುತ್ತಾರೆ. ಅವರ ಬಳಿ ಶೈಲಜಾ ಹೋದರೂ ಅಷ್ಟೇ. ಕೆಎಎಸ್ ಅನ್ನು ಯಾರ್‍ಯಾರು ಯಾವ ರೀತಿ ಪಾಸು ಮಾಡಿಕೊಳ್ಳುತ್ತಾರೆ ಎಂದು ಗೊತ್ತಿಲ್ಲವೇ? ಎಂದು ಛೇಡಿಸಿದರು.

ಭದ್ರಾವತಿ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆ ಉಳಿಸಲು ಕ್ರಮ

ಕಾನೂನು ಸಚಿವ ಮಾಧುಸ್ವಾಮಿ ಭರವಸೆ



ಬೆಂಗಳೂರು, ಫೆ. 15 (ಕೆಎಂಶಿ)– ಭದ್ರಾವತಿ ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆ (ವಿಐಎಸ್‌ಎಲ್) ಯನ್ನು ಉಳಿಸಲು ಕ್ರಮ ಕೈಗೊಳ್ಳುವುದಾಗಿ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ವಿಧಾನ ಸಭೆಯಲ್ಲಿಂದು ಭರವಸೆ ನೀಡಿದರು.

ಶೂನ್ಯ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯ ಬಿ.ಕೆ.ಸಂಗಮೇಶ್ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಸಚಿವರು, ಕಾರ್ಖಾನೆ ಮುಚ್ಚದಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಹೇಗಾದರೂ ಮಾಡಿ ಕಾರ್ಖಾನೆ ಉಳಿಸುವ ಪ್ರಯತ್ನ ಮಾಡುತ್ತೇವೆ ಎಂದರು. ಕಾರ್ಖಾನೆ ಮುಚ್ಚುವ ಪ್ರಸ್ತಾವನೆ ಸಲ್ಲಿಸಿದ್ದು, ನಿಮ್ಮ ಸರ್ಕಾರವೇ ಎಂದು ಶಾಸಕರಿಗೆ ತಿರುಗೇಟು ನೀಡಿದರು. ನಿಮ್ಮ ಬೆನ್ನನ್ನು ನೋಡಿಕೊಳ್ಳಿ ಎಂದು ಖಾರವಾಗಿ ಪ್ರತಿಕ್ರಿಯಿಸಿದರು.

ಇದಕ್ಕೂ ಮುನ್ನ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾತನಾಡಿ, ವಿಐಎಸ್‌ಎಲ್ ಕಾರ್ಖಾನೆ ಉಳಿಸಿಕೊಳ್ಳಲೇಬೇಕು. ಕೆಲಸ ಸ್ಥಗಿತವಾಗದಂತೆ ನೋಡಿಕೊಳ್ಳಬೇಕು ಎಂದು ಸರ್ಕಾರಕ್ಕೆ ಸಲಹೆ ನೀಡಿರುವುದರ ಜತೆಗೆ ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿ ಸ್ಥಗಿತಗೊಳ್ಳದಂತೆ ಕ್ರಮ ಜರುಗಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಈ ವಿಚಾರಕ್ಕೆ ದನಿಗೂಡಿಸಿದ ಜೆಡಿಎಸ್ ಶಾಸಕಾಂಗ ಪಕ್ಷದ ಉಪನಾಯಕ ಬಂಡೆಪ್ಪ ಕಾಶೆಂಪೂರ್ ಹಾಗೂ ವಿರೋಧ ಪಕ್ಷದ ಉಪನಾಯಕ ಯು.ಟಿ.ಖಾದರ್ ಅವರು, ವಿಐಎಸ್‌ಎಲ್ ಕಾರ್ಖಾನೆ ಮುಚ್ಚದಂತೆ ಕ್ರಮ ಕೈಗೊಳ್ಳಲು ಸರ್ಕಾರವನ್ನು ಆಗ್ರಹಿಸಿದರು.

ನಾಳೆ ಜೆಎಸ್‌ಎಸ್ ಔಷಧ ವಿಜ್ಞಾನ ವಿದ್ಯಾಲಯದ ಸುವರ್ಣ ಮಹೋತ್ಸವ

ಮೈಸೂರು, ಫೆ.15(ಎಂಟಿವೈ)– ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ವ್ಯಾಪ್ತಿಯ ಜೆಎಸ್‌ಎಸ್ ಔಷಧ ವಿಜ್ಞಾನ ಮಹಾ ವಿದ್ಯಾಲಯದ ಸುವರ್ಣ ಮಹೋತ್ಸವ ಸಮಾರಂಭ ಫೆ. 17 ರಂದು ಸಂಜೆ 4ಕ್ಕೆ ಜೆಎಸ್‌ಎಸ್ ಎಹೆಚ್‌ಇಆರ್ ರಾಜೇಂದ್ರ ಸಭಾಂಗಣದಲ್ಲಿ ನಡೆಯಲಿದೆ ಎಂದು ಪ್ರಾಚಾರ್ಯರಾದ ಡಾ. ಪ್ರಮೋದ್‌ಕುಮಾರ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾರ್ಯಕ್ರಮವನ್ನು ಕೇರಳದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಉದ್ಘಾಟಿಸುವರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ವಹಿಸಲಿದ್ದಾರೆ. ಸಂಸದ ಪ್ರತಾಪ್‌ಸಿಂಹ, ಶಾಸಕರಾದ ತನ್ವೀರ್‌ಸೇಠ್, ಡಾ.ಸಿ.ಜಿ. ಬೆಟ್‌ಸೂರ್‌ಮಠ್, ಡಾ.ಬಿ. ಸುರೇಶ್, ಡಾ. ಸುರೀಂದರ್‌ಸಿಂಗ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಬಿ.ಮಂಜುನಾಥ್, ಡಾ. ಗುರುಬಸವರಾಜ್ ಪೂಜಾರ್, ಡಾ. ದಿವ್ಯಾಶ್ರೀ, ಡಾ. ಬಾಲಮುರುಳೀಧರ್ ಇದ್ದರು.

ರಾಷ್ಟ್ರಕವಿ ಜಿಎಸ್ಸೆಸ್, ನಿತ್ಯೋತ್ಸವ ಕವಿ ನಿಸಾರ್ ಸಮಾಜಮುಖಿ ಕವಿಗಳು

ಸಾಹಿತಿ ಬನ್ನೂರು ರಾಜು ಅಭಿಮತ



ಮೈಸೂರು, ಫೆ. 15– ನಮ್ಮಲ್ಲಿ ಎರಡು ವರ್ಗದ ಕವಿ–ಸಾಹಿತಿಗಳುಂಟು. ಸಮಾಜಮುಖಿಯಾಗಿ ನಿಸ್ವಾರ್ಥದಿಂದ ಮೌಲ್ಯಯುತ ಬರವಣಿಗೆ ಮಾಡಿ ಕಲುಷಿತ ಸಮಾಜವನ್ನು ಶುದ್ಧೀಕರಿಸುವವರು ಒಂದು ವರ್ಗವಾದರೆ, ಸ್ವಮುಖಿಯಾಗಿ, ಸ್ವಾರ್ಥಿಗಳಾಗಿ ಅಗ್ಗದ ಪ್ರಚಾರಕ್ಕಾಗಿ ಮೌಲ್ಯರಹಿತ ಬರವಣಿಗೆ ಮಾಡಿ ಸಮಾಜದ ಸ್ವಾಸ್ಥ್ಯವನ್ನು ಕಲುಷಿತಗೊಳಿಸುವವರು ಮತ್ತೊಂದು ವರ್ಗ. ಇಲ್ಲಿ ಮೊದಲನೇ ವರ್ಗಕ್ಕೆ ಸೇರಿದ ಮಹಾನ್ ಜನಮುಖಿ ಕವಿಗಳು ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಹಾಗೂ ನಿತ್ಯೋತ್ಸವ ಕವಿ ನಿಸಾರ್ ಅಹಮದ್ ಎಂದು ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ನಗರದ ಪ್ರತಿಷ್ಠಿತ ಸೇವಾ ಸಂಸ್ಥೆಗಳಾದ ಕಾವೇರಿ ಬಳಗ ಮತ್ತು ಹಿರಣ್ಮಯಿ ಪ್ರತಿಷ್ಠಾನದ ಸಂಯುಕ್ತ ಆಶ್ರಯದಲ್ಲಿ ಎನ್.ಆರ್. ಮೊಹಲ್ಲಾದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದ ರಾಷ್ಟ್ರಕವಿ ಡಾ.ಜಿ.ಎಸ್.ಶಿವರುದ್ರಪ್ಪ ಹಾಗೂ ನಿತ್ಯೋತ್ಸವ ಕವಿ ಡಾ.ನಿಸಾರ್ ಅಹಮದ್ ಅವರ ಜನ್ಮದಿನೋತ್ಸವದ ಸ್ಮರಣೆ ಮತ್ತು "ಜೀವನದಿ ಕಾವೇರಿ ಪ್ರಶಸ್ತಿ" ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರೀತಿ ಇಲ್ಲದ ಮೇಲೆ ಮನಸ್ಸು ಮರುಭೂಮಿಯಾಗಿ ಬಿಡುತ್ತದೆ ಎಂಬ ಎಚ್ಚರಿಕೆಯನ್ನು ಮಾನವಕೋಟಿಗೆ ನೀಡಿ ತಮ್ಮ ಕಾವ್ಯದ ಮೂಲಕ ಪ್ರೀತಿಯನ್ನು ಬಿತ್ತುವ ಕಾವ್ಯಕೃಷಿ ಮಾಡಿ ಹೋಗಿರುವ ಜಿಎಸ್‌ಎಸ್ ಮತ್ತು ನಿಸಾರ್ ಮಾನವ ಪ್ರೀತಿಯ ಸಮನ್ವಯ ಕವಿಗಳು. ರಾಷ್ಟ್ರಕವಿ ಕುವೆಂಪು ಶಿಷ್ಯರಾಗಿ ಅವರಿಂದ ಪ್ರಭಾವಿತರಾಗಿದ್ದ ಈ ಇಬ್ಬರು ಕವಿಗಳಲ್ಲೂ ಬಹಳಷ್ಟು ಸಾಮ್ಯತೆ ಇದೆ. ವಿಶ್ವಮಾನವ ರಸಋಷಿ ಕುವೆಂಪು ಅವರಂತೆಯೇ ಇವರುಗಳು ಸಹ ವೈಚಾರಿಕ ಪ್ರಜ್ಞೆ ಉಳ್ಳವರಾಗಿದ್ದು ಜಾತ್ಯತೀತವಾಗಿ, ಪಂಥಾತೀತವಾಗಿ, ಧರ್ಮಾತೀತವಾಗಿ, ವರ್ಗಾತೀತವಾಗಿ, ವರ್ಣಾತೀತವಾಗಿ ಮನುಷ್ಯತ್ವದ ಪ್ರತಿನಿಧಿಗಳಾಗಿ ಲೇಖನಿಯ ಮೂಲಕ ಸೌಹಾರ್ದ ಸಮಾಜ ಕಟ್ಟಲು ಶ್ರಮಿಸಿದ ಮಹಾನ್ ಮಾನವತಾವಾದಿ ಕವಿಗಳೆಂದರು.

ಮೈಸೂರು ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣ ಅವರು, ವಿಶ್ರಾಂತ ಶಿಕ್ಷಕರೂ ಮತ್ತು ಲೇಖಕರೂ ಆದ ಎಂ.ಎನ್.ಸುರೇಶ್ ಹಾಗೂ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಗಾಯಕಿ ಶ್ರೀಮತಿ ಫಾತಿಮಾ ಅವರುಗಳಿಗೆ ಕೊಡಗಿನ ಶ್ರೀಮತಿ ಗೌರು ಪೊನ್ನವ್ವ ನಂಬಿಯಪಂಡ ಅವರ ಸ್ಮರಣಾರ್ಥ ಜೀವನದಿ ಕಾವೇರಿ ಪ್ರಶಸ್ತಿಯನ್ನು ಪ್ರದಾನ ಮಾಡಿ, ಗೌರವಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ಲೇಖಕಿ ವಿಶ್ರಾಂತ ಶಿಕ್ಷಕಿ ವಿಜಯಾ ಶಂಕರ ಅವರು ಅಭಿನಂದನಾ ಭಾಷಣ ಮಾಡಿದರೆ, ಖ್ಯಾತ ಕಲಾವಿದೆ ಡಾ. ಜಮುನಾ ರಾಣಿ ಮಿರ್ಲೆ ಅವರು ಪ್ರಶಸ್ತಿ ಪುರಸ್ಕೃತರನ್ನು ವಿಶೇಷವಾಗಿ ಅಭಿನಂದಿಸಿದರು. ಮುಖ್ಯ ಶಿಕ್ಷಕಿ ಕೆ.ಎಲ್. ಕಾಂಚನ ಮಾಲಾ, ಸಂಗೀತ ಶಿಕ್ಷಕ ನಿರಂಜನ್, ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ, ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ. ಕಾವೇರಿಯಮ್ಮ, ಮೈಸೂರು ಜಿಲ್ಲಾ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಉಪಾಧ್ಯಕ್ಷ ಆನಂದ್, ಮೈಸೂರು ಉತ್ತರ ವಲಯದ ಅಧ್ಯಕ್ಷ ಗೋಪಿನಾಥ್, ಶಿಕ್ಷಣ ಸಂಯೋಜಕ ಕಾಂತರಾಜು, ಸಹ ಶಿಕ್ಷಕರಾದ ಮಹೇಶ್, ಎ.ಎಸ್. ಮಮತಾ, ಎಸ್.ರಾಜಮ್ಮ, ಜೆ.ಗಾಯತ್ರಿ ಇನ್ನಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.2.2023 ಗುರುವಾರ, ಮಳೆ ನಕ್ಷತ್ರ: ಧನಿಷ್ಠ, 6.02.2023ರಿಂದ 18.02.2023 ಶ್ರೀ ಶುಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಮೂಲ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ– ಡಾ. ಆನಂದ್ ಕುಮಾರ್, 6.15 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, ಗಾಯನ– ಶ್ರೀರಾಂ ಭಟ್, ನಿತಿನ್ ರಾಜಾರಾಂ ಶಾಸ್ತ್ರಿ, ಕೆ.ಬಿ. ಸುನೀತಾ ಆಚಾರ್ಯ, ವ್ಯಾಖ್ಯಾನ– ಕೆ.ಎಲ್. ಪದ್ಮಿನಿ ಹೆಗಡೆ, 8.30 ಗೆಲುವಿನ ಗುಟ್ಟು, ಪ್ರಹಸನ–ಪ್ರಾಯೋಜಿತ ಕಾರ್ಯಕ್ರಮ, 8.45 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 10.00 ಆರ್. ಮೋಹನ್–ಕ್ಲಾರಿಯೋನೆಟ್ ವಾದನ

ಮಧ್ಯಾಹ್ನ: 12.30 ದೇವರನಾಮ, 1.20 ಭಾವಗೀತೆಗಳು – ಜಿ.ಪುಷ್ಪಲತಾ, ಡಾ.ಎ.ಡಿ. ಶ್ರೀನಿವಾಸನ್, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ– ಕ್ಷಕಿರಣ ಎಂಬ ವಿಜ್ಞಾನದ ವಿಸ್ಮಯ ಕುರಿತು ಪ್ರೊ.ಶಶಿಧರ್ ಪ್ರಸಾದ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್ ವಾಣಿ, 8.00 ಯುವವಾಣಿ–ಹಲೋ ಯುವವಾಣಿ–ವಿಶೇಷ ರಸಪ್ರಶ್ನೆ ಕಾರ್ಯಕ್ರಮ, ನಡೆಸಿಕೊಡಲಿದ್ದಾರೆ– ನಿವೇದಿತಾ ಎಚ್., 9.30 ಕನ್ನಡ ಭಾರತಿ, 10.00 ನಾಟಕ "ಹದಿನಾಲ್ಕು ವರ್ಷಗಳ ನಂತರ", ರಚನೆ–ಸೇವಂತಿ ಡಿ. ರೈ, ನಿರ್ದೇಶನ– ಹೆಚ್.ಎಸ್. ಸರಸ್ವತಿ

■ **ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ಸ್ :** ಫೌಂಡೇಷನ್ ವಿಭಾಗದ ವಿದ್ಯಾರ್ಥಿಗಳಿಂದ ವುಡ್ ಪ್ರಿಂಟ್ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11.30 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿಗಳ ಮಠ :** ಪಂಡಿತ್ ಶ್ರೀ ಪ್ರವೀಣಾಚಾರ್ ಹುನುಗುಂದ ಅವರಿಂದ ಭಗವದ್ಗೀತೆಯ 4 ಮತ್ತು 5ನೇ ಅಧ್ಯಾಯದ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಮಹಾಶಿವರಾತ್ರಿಯ ಪ್ರಯುಕ್ತ ಹಿಮಾಚ್ಛಾದಿತ ಕೈಲಾಸ ಪರ್ವತದ ಮೇಲೆ 21 ಅಡಿ ಎತ್ತರದ ಅತ್ಯಾಕರ್ಷಕ ರುದ್ರಾಕ್ಷಿ ಶಿವಲಿಂಗ 3ಡಿ ಮಾದರಿಯಲ್ಲಿ, ವಿಶೇಷ ಆಕರ್ಷಣೆಗಳು: ಧ್ಯಾನದ ಗುಹೆ, ಆಧ್ಯಾತ್ಮಿಕ ಚಿತ್ರ ಪ್ರದರ್ಶನ, ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ, ವಿಶೇಷ ಉಪನ್ಯಾಸಗಳು, ಅನುಭೂತಿ ವಿಡಿಯೋ ಪ್ರದರ್ಶನ, ದ್ವಾದಶ ಜ್ಯೋತಿರ್ಲಿಂಗ ದರ್ಶನ, ಸ್ಥಳ: ಲಲಿತ ಮಹಲ್ ಅರಮನೆ ಮೈದಾನ, ಆಲನಹಳ್ಳಿ, ಸಂಜೆ 6.30ಕ್ಕೆ.

■ **ಶ್ರೀ ರಾಮಕೃಷ್ಣ ಜಾತ್ರಾ ಮಹೋತ್ಸವ ಸಮಿತಿ :** ರಾಮಕೃಷ್ಣ ಪರಮಹಂಸರ ಜಯಂತಿ ಮತ್ತು ಜಾತ್ರಾ ಮಹೋತ್ಸವದ ಅಂಗವಾಗಿ ವಿವೇಕಾನಂದರ ಜ್ಞಾನವಾಹಿನಿ ಪ್ರಚಾರ ವಾಹನದ ಉದ್ಘಾಟನಾ ಸಮಾರಂಭ, ಸ್ಥಳ: ಪುಟ್ಟರಾಜ ಗವಾಯಿ ಕ್ರೀಡಾಂಗಣ, ಜೆ.ಪಿ.ನಗರ, ಬೆಳಗ್ಗೆ 9.30ಕ್ಕೆ.

■ **ಅರ್ನಾಲ್ಡ್ ಫಿಟ್‌ನೆಸ್ ಜಿಮ್:** ರಕ್ತದಾನ ಶಿಬಿರ, ಸ್ಥಳ: ಅರ್ನಾಲ್ಡ್ ಫಿಟ್‌ನೆಸ್, ಕಾಳಿದಾಸ ರಸ್ತೆ, ಬೆಳಗ್ಗೆ 10ಕ್ಕೆ.

■ **ಬ್ಯಾಂಕ್ ಆಫ್ ಮಹಾರಾಷ್ಟ್ರ :** ಜೆ.ಪಿ.ನಗರ ಶಾಖೆ ಪ್ರಾರಂಭೋತ್ಸವ, ಉದ್ಘಾಟನೆ : ಪೊಲೀಸ್ ಆಯುಕ್ತ ಬಿ. ರಮೇಶ್, ಸ್ಥಳ: ಆದಿತ್ಯ ಆರ್ಕೇಡ್, ನಂ. 1/ಎ, ಎ ಬ್ಲಾಕ್, 1ನೇ ಹಂತ, ಜೆ.ಪಿ.ನಗರ, ಬೆಳಗ್ಗೆ 10.30ಕ್ಕೆ.

ಮೈಸೂರು ಮಿತ್ರ

ರಿಷಬ್ ಶೆಟ್ಟಿಗೆ 'ದಾದಾ ಸಾಹೇಬ್ ಫಾಲ್ಕೆ' ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಪ್ರಶಸ್ತಿ



ಬೆಂಗಳೂರು: ನಟ, ನಿರ್ದೇಶಕ ರಿಷಬ್ ಶೆಟ್ಟಿ ಅವರು "ದಾದಾಸಾಹೇಬ್ ಫಾಲ್ಕೆ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಪ್ರಶಸ್ತಿ"ಗೆ ಭಾಜನರಾಗಿದ್ದಾರೆ.

ಫೆಬ್ರವರಿ 20ರಂದು ಮುಂಬೈನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ವರದಿಯಾಗಿದೆ.

ಹಲವು ವಿಭಾಗಗಳಲ್ಲಿ 'ದಾದಾ ಸಾಹೇಬ್ ಫಾಲ್ಕೆ' ಅಂತರ ರಾಷ್ಟ್ರೀಯ ಸಿನಿಮೋತ್ಸವ ಪ್ರಶಸ್ತಿ ನೀಡಲಾಗುತ್ತಿದೆ. ರಿಷಬ್ ಶೆಟ್ಟಿ ಅವರು 'ಅತ್ಯಂತ ಭರವಸೆಯ ನಟ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈ ಪ್ರಶಸ್ತಿ ಸಿಕ್ಕಿರುವುದಕ್ಕೆ ಚಿತ್ರರಂಗದ ಗಣ್ಯರು ಸೇರಿದಂತೆ ಅಭಿಮಾನಿಗಳು ಸಾಮಾಜಿಕ ಜಾಲತಾಣಗಳಲ್ಲಿ ರಿಷಬ್ ಶೆಟ್ಟಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ನಟ ರಿಷಬ್ ಶೆಟ್ಟಿ ನಿರ್ದೇಶಿಸಿ, ನಟಿಸಿರುವ 'ಕಾಂತಾರ' ಸಿನಿಮಾಕ್ಕೆ ಕನ್ನಡ ಸೇರಿದಂತೆ ತೆಲುಗು, ತಮಿಳು, ಹಿಂದಿಯಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ರಿಷಬ್ ನಿರ್ದೇಶನ ಮತ್ತು ನಟನೆಯನ್ನು ಪರ ಭಾಷಾ ನಟ-ನಟಿಯರು ಮೆಚ್ಚಿಕೊಂಡಿದ್ದರು. ಈ ಚಿತ್ರ ವಿಶ್ವದಾದ್ಯಂತ ರೂ. 400 ಕೋಟಿಗೂ ಹೆಚ್ಚು ಗಳಿಕೆ ಕಾಣುವ ಮೂಲಕ ಗಲ್ಲಾ ಪೆಟ್ಟಿಗೆಯಲ್ಲೂ ಸಖತ್ ಸದ್ದು ಮಾಡಿತ್ತು.

'ಕಾಂತಾರ', ಮನುಷ್ಯ ಮತ್ತು ಪ್ರಕೃತಿಯ ನಡುವಿನ ಸಂಘರ್ಷದ ಕಥೆಯಾಗಿದ್ದು, ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿದ್ದಾರೆ. ಈ ಚಿತ್ರದಲ್ಲಿ ರಿಷಬ್ ಶೆಟ್ಟಿ ಜೊತೆಗೆ ಸಪ್ತಮಿ ಗೌಡ, ಕಿಶೋರ್, ಅಚ್ಯುತ್ ಕುಮಾರ್, ಪ್ರಮೋದ್ ಶೆಟ್ಟಿ ಸೇರಿದಂತೆ ಹಲವು ಪ್ರತಿಭಾವಂತ ಕಲಾವಿದರು ನಟಿಸಿದ್ದಾರೆ. ಹೊಂಬಾಳೆ ಫಿಲಂಸ್ ಚಿತ್ರವನ್ನು ನಿರ್ಮಿಸಿದೆ. ಚಿತ್ರಕ್ಕೆ ಅಜನೀಶ್ ಲೋಕನಾಥ್ ಅವರ ಸಂಗೀತ ಮತ್ತು ಅರವಿಂದ್ ಕಶ್ಯಪ್ ಛಾಯಾಗ್ರಹಣವಿದೆ.

ಜೆಡಿಎಸ್ ನಾಯಕ ಪ್ರಭಾಕರ್ ರೆಡ್ಡಿ ನಿವಾಸದ ಮೇಲೆ ಐಟಿ ದಾಳಿ

ಬೆಂಗಳೂರು: ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಫೆ.15 ರಂದು ಜೆಡಿಎಸ್ ನಾಯಕ ಪ್ರಭಾಕರ ರೆಡ್ಡಿ ನಿವಾಸದ ಮೇಲೆ ದಾಳಿ ನಡೆಸಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ ಬಳಿ ಮೈಲಸಂದ್ರದಲ್ಲಿರುವ ನಿವಾಸದ ಮೇಲೆ ಐಟಿ ದಾಳಿ ನಡೆದಿದ್ದು, ಹೆಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಕಚೇರಿ, ಕೋಣನಕುಂಟೆಯಲ್ಲಿರುವ ಫ್ಲಾಟ್ ಮೇಲೆಯೂ ದಾಳಿ ನಡೆದಿದೆ.

ಪ್ರಭಾಕರ ರೆಡ್ಡಿ ರಿಯಲ್ ಎಸ್ಟೇಟ್ ಉದ್ಯಮಿಯಾಗಿದ್ದು, ಈ ಹಿಂದೆಯೂ ಹಲವು ಬಾರಿ ಅವರ ನಿವಾಸದ ಮೇಲೆ ಐಟಿ ದಾಳಿ ನಡೆದಿತ್ತು, ವಿಧಾನಸಭಾ ಚುನಾವಣೆ-2023 ರಲ್ಲಿ ಪ್ರಭಾಕರ ರೆಡ್ಡಿ ಬೆಂಗಳೂರು ದಕ್ಷಿಣದಿಂದ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ.

ಪ್ರಭಾಕರ್ ರೆಡ್ಡಿ ಉದ್ಯಮಕ್ಕೆ ಸಂಬಂಧಿಸಿದ ದಾಖಲೆಗಳನ್ನು ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಈ ದಾಳಿ ಮಹತ್ವ ಪಡೆದುಕೊಂಡಿದ್ದರೆ, ಚುನಾವಣೆ ಸಂದರ್ಭದಲ್ಲಿ ಇಂತಹ ದಾಳಿಗಳು ಸಾಮಾನ್ಯ ಎಂದು ಜೆಡಿಎಸ್ ನಾಯಕ, ಮಾಜಿ ಸಿಎಂ ಕುಮಾರಸ್ವಾಮಿ ಹೇಳಿದ್ದಾರೆ.

ರಾಜ್ಯಗಳು ಒಪ್ಪಿದರೆ ಜಿಎಸ್‌ಟಿ ವ್ಯಾಪ್ತಿಗೆ ಪೆಟ್ರೋಲಿಯಂ ಉತ್ಪನ್ನ: ಕೇಂದ್ರ

ನವದೆಹಲಿ: ರಾಜ್ಯಗಳಿಗೆ ಒಪ್ಪಿಗೆಯಾದರೆ ಪೆಟ್ರೋಲಿಯಂ ಉತ್ಪನ್ನಗಳನ್ನು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯಾಪ್ತಿಗೆ ತರಬಹುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಬಜೆಟ್ ನಂತರದ ಸಂವಾದ ಕಾರ್ಯಕ್ರಮವೊಂದರಲ್ಲಿ ಅವರು ಈ ಮಾತು ಆಡಿದ್ದಾರೆ. ಪೆಟ್ರೋಲಿಯಂ ಉತ್ಪನ್ನಗಳಾದ ಪೆಟ್ರೋಲ್, ಡೀಸೆಲ್, ನೈಸರ್ಗಿಕ ಅನಿಲ, ವಿಮಾನ ಇಂಧನ ಜಿಎಸ್‌ಟಿ ವ್ಯಾಪ್ತಿಯಲ್ಲಿ ಇಲ್ಲ. ಇವುಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ಯಾವತ್ತಿನಿಂದ ತರಬೇಕು ಎಂಬ ತೀರ್ಮಾನ ಕೈಗೊಳ್ಳುವ ಅಧಿಕಾರ ಜಿಎಸ್‌ಟಿ ಮಂಡಳಿಗೆ ಇದೆ. ರಾಜ್ಯಗಳು ಒಪ್ಪಿಕೊಂಡ ನಂತರದಲ್ಲಿ ಪೆಟ್ರೋಲಿಯಂ ಉತ್ಪನ್ನಗಳು ಕೂಡ ಜಿಎಸ್‌ಟಿ ವ್ಯಾಪ್ತಿಗೆ ಬರುತ್ತವೆ ಎಂದು ನಿರ್ಮಲಾ ಹೇಳಿದ್ದಾರೆ.

ಲಡಾಖ್ ಸಂಪರ್ಕಿಸುವ ಶಿಂಕುನ್ ಲಾ ಸುರಂಗ ನಿರ್ಮಾಣಕ್ಕೆ ಕೇಂದ್ರ ಸಂಪುಟ ಅಸ್ತು

ನವದೆಹಲಿ: ಲಡಾಖ್‌ನ ಗಡಿ ಪ್ರದೇಶಗಳಿಗೆ ಎಲ್ಲಾ ಹವಾಮಾನದಲ್ಲೂ ಸಂಪರ್ಕ ಕಲ್ಪಿಸಲು ಶಿಂಕುನ್ ಲಾದಲ್ಲಿ 4.1 ಕಿ.ಮೀ ಉದ್ದದ ಸುರಂಗ ಮಾರ್ಗ ನಿರ್ಮಾಣಕ್ಕೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಚಿವ ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು, ನಿಮು-ಪಡಮ್-ದರ್ಚಾ ರಸ್ತೆ ಸಂಪರ್ಕಿಸಲು 4.1-ಕಿಮೀ ಉದ್ದದ ಶಿಂಕುನ್ ಲಾ ಸುರಂಗ ನಿರ್ಮಾಣಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದರು.

1,681 ಕೋಟಿ ರೂಪಾಯಿ ವೆಚ್ಚದಲ್ಲಿ ಡಿಸೆಂಬರ್ 2025 ರೊಳಗೆ ಈ ಸುರಂಗವನ್ನು ಪೂರ್ಣಗೊಳಿಸಲಾಗುವುದು ಎಂದು ಠಾಕೂರ್ ತಿಳಿಸಿದ್ದಾರೆ. ಶಿಂಕುನ್ ಲಾ ಸುರಂಗವು ಲಡಾಖ್‌ಗೆ ಎಲ್ಲಾ ಹವಾಮಾನದಲ್ಲೂ ಸಂಪರ್ಕ ಕಲ್ಪಿಸುವ ರಸ್ತೆಯಾಗಲಿದೆ ಮತ್ತು ಇದು ಕೇಂದ್ರಾಡಳಿತ ಪ್ರದೇಶದ ಗಡಿ ಪ್ರದೇಶಗಳಿಗೆ ಕಡಿಮೆ ಅಂತರದ ಮಾರ್ಗವಾಗಿದೆ ಎಂದು ಸಚಿವರು ಹೇಳಿದ್ದಾರೆ.

ಇಂದು ಶ್ರೀ ಕೃಷ್ಣದೇವರಾಯರ ಜಯಂತ್ಯುತ್ಸವ

ಮೈಸೂರು, ಫೆ15- ಮೈಸೂರು ಕೈವಾರ ತಾತಯ್ಯ ಬಲಿಜ ನಾಯ್ಡು ಒಕ್ಕೂಟದ ವತಿಯಿಂದ ಶ್ರೀ ಕೃಷ್ಣದೇವರಾಯರ 552ನೇ ಜಯಂತ್ಯುತ್ಸವವನ್ನು ಫೆ16ರಂದು ಬೆಳಗ್ಗೆ 11.30ಕ್ಕೆ ವಿಜಯನಗರ 3ನೇ ಹಂತದ ಶ್ರೀಕೃಷ್ಣದೇವರಾಯ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟ ಕಾರ್ಯದರ್ಶಿ ಕೆ.ಹರೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಪ್ರಧಾನ ಕಾರ್ಯದರ್ಶಿ ಬಿ.ಇ.ರಾಕೇಶ್ ಅವರನ್ನು ಮೊ.ನಂ. 99862-19736 ಸಂಪರ್ಕಿಸಬಹುದು.



ಮೈಸೂರಿನ ನೂತನ ಉಪವಿಭಾಗಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿರುವ ಕೆ.ಆರ್.ರಕ್ಷಿತ್ ಅವರನ್ನು ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗ ವತಿಯಿಂದ ಅಭಿನಂದಿಸಲಾಯಿತು. ಚಿತ್ರದಲ್ಲಿ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಸಿಲ್ಕ್ ಬೋರ್ಡ್ ಮಾಜಿ ಅಧ್ಯಕ್ಷ ಅಬು ಮೊಹಮ್ಮದ್, ಪಾಲಿಕೆ ಮಾಜಿ ಸದಸ್ಯ ಎಂ.ಬಿ.ತಿವಾರಿ, ಉದ್ಯಮಿ ಡಿ.ಗಂಗಾಧರ್, ಭೈರವ ಗ್ರೂಪ್ ಮಹದೇವ್, ಶಿವು ಇತರರಿದ್ದಾರೆ.

ಕರ್ತವ್ಯಕ್ಕೆ ರಜೆ ಹಾಕಿ ಊರಿಗೆ ಬಂದಿದ್ದ ಯೋಧ ಆತ್ಮಹತ್ಯೆ

ಹಾಸನ: ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಯೋಧರೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹಾಸನ ಜಿಲ್ಲೆಯ ಆಲೂರು ತಾಲೂಕಿನ ಹಂಪನಗುಪ್ಪೆ ಗ್ರಾಮದಲ್ಲಿ ನಡೆದಿದೆ. ಗ್ರಾಮದ ರೈತ ಹರೀಶ್ ಅವರ ದ್ವಿತಿಯ ಪುತ್ರ ಹೆಚ್.ಯೋಗೇಶ್ (28) ಆತ್ಮಹತ್ಯೆಗೆ ಶರಣಾದ ಯೋಧ. ಆತ್ಮಹತ್ಯೆಗೆ ನಿಖರ ಕಾರಣ ಏನೆಂಬುದು ತಿಳಿದುಬಂದಿಲ್ಲ. ಜ.4 ರಂದು ಕರ್ತವ್ಯಕ್ಕೆ ರಜೆ ಹಾಕಿ ಗ್ರಾಮಕ್ಕೆ ಬಂದಿದ್ದ ಯೋಗೇಶ್ ಅವರು ತಮ್ಮ ಪತ್ನಿ ದೀಕ್ಷಾ ಹಾಗೂ ಕುಟುಂಬಸ್ಥರೊಂದಿಗೆ ಒಂದು ತಿಂಗಳಿಂದ ಚೆನ್ನಾಗಿದ್ದರು.

ಮಂಗಳವಾರ ಬೆಳಗ್ಗೆ 10 ಗಂಟೆ ಸಮಯವಾದರೂ ಯೋಗೇಶ್ ಮಲಗಿದ್ದ ರೂಂ ಬಾಗಿಲು ತೆರೆದಿರಲಿಲ್ಲ. ಮನೆಯವರು ಎಷ್ಟು ಕೂಗಿದರೂ ಬಾಗಿಲು ತೆರೆಯದ ಕಾರಣ ಅನುಮಾನಗೊಂಡು ಬಾಗಿಲನ್ನು ಒಡೆದು ನೋಡಿದಾಗ ಯೋಗೇಶ್ ನೇಣು ಬಿಗಿದುಕೊಂಡಿರುವುದು ಕಂಡುಬಂದಿದೆ. ಕೂಡಲೇ ಕುಟುಂಬದವರು ಜಿಲ್ಲಾ ಆಸ್ಪತ್ರೆಗೆ ಕರೆ ತಂದಿದ್ದಾರೆ. ವೈದ್ಯರು ಪರೀಕ್ಷಿಸಿ ಯೋಧ ಯೋಗೀಶ್ ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ.

ಯೋಗೇಶ್ ಅವರು 2011 ರಲ್ಲಿ ಹಾಸನದಲ್ಲಿ ನಡೆದ ಸೇನಾ ನೇಮಕಾತಿ ರ್‍ಯಾಲಿಯಲ್ಲಿ ಭಾಗವಹಿಸಿ ಸೇನೆಗೆ ಸೇರ್ಪಡೆಯಾಗಿದ್ದರು. ಕಳೆದ ಎರಡು ವರ್ಷದ ಹಿಂದೆ ಮದುವೆಯಾಗಿದ್ದು, ದಂಪತಿಗೆ ಮಕ್ಕಳಿರಲಿಲ್ಲ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಆಲೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಇಂದು ರಾಜ್ಯಮಟ್ಟದ ಬೌದ್ಧ ಮಹಾ ಸಮ್ಮೇಳನ

ಮೈಸೂರು, ಫೆ15- ಭಾರತೀಯ ಬೌದ್ಧ ಮಹಾಸಭೆ ಮೈಸೂರು ಘಟಕದ ವತಿಯಿಂದ 'ರಾಜ್ಯ ಮಟ್ಟದ ಬೌದ್ಧ ಮಹಾ ಸಮ್ಮೇಳನ'ವನ್ನು ಫೆ.16ರಂದು ಬೆಳಗ್ಗೆ 11ಕ್ಕೆ ಟೌನ್‌ಹಾಲ್ ಮುಂಭಾಗ ಆಯೋಜಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಪ್ರಧಾನ ಕಾರ್ಯದರ್ಶಿ ಎಂ.ಪ್ರದೀಪ್ ಕುಮಾರ್ ಮೊ.ನು:97406-30045 ಮೂಲಕ ಸಂಪರ್ಕಿಸಬಹುದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಗತ್ತಿಗೆಲ್ಲಾ ಒಬ್ಬನೇ ಪರಮಾತ್ಮ

ಅರೇಮಾದನಹಳ್ಳಿ ಮಠದ ಶ್ರೀ ಶಿವಸುಜ್ಞಾನ ತೀರ್ಥರ ಅಭಿಮತ



ಮೈಸೂರು, ಫೆ.15(ಜಿಎ)-ಎಲ್ಲಾ ಧರ್ಮಕ್ಕೂ ಸೃಷ್ಟಿಯಲ್ಲಿರುವುದು ಒಬ್ಬನೇ ಪರಮಾತ್ಮ, ಆದರೆ, ಬೇರೆ ಬೇರೆ ಭಾವನೆಗಳಿಂದ ಧರ್ಮ ಸಂಘರ್ಷಗಳಾಗುತ್ತಿವೆ ಎಂದು ಅರೇಮಾದನಹಳ್ಳಿ ಮಠದ ಶ್ರೀ ಶಿವ ಸುಜ್ಞಾನ ತೀರ್ಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಆಲನಹಳ್ಳಿ ಸೇವಾ ಕೇಂದ್ರದ ವತಿಯಿಂದ ನಗರದ ಆಲನಹಳ್ಳಿಯ ಲಲಿತಮಹಲ್ ಅರಮನೆ ಮೈದಾನದಲ್ಲಿ ಮಹಾ ಶಿವರಾತ್ರಿಯ ಪ್ರಯುಕ್ತ ನಿರ್ಮಿಸಿರುವ ಬೃಹತ್ ಆಕಾರದ ಹಿಮಾಚ್ಛಾದಿತ ಕೈಲಾಸ ಪರ್ವತ ಮತ್ತು 21 ಅಡಿ ರುದ್ರಾಕ್ಷಿ ಶಿವಲಿಂಗ ಉದ್ಘಾಟಿಸಿ ಅವರು ಮಾತನಾಡಿದರು.

ಮಹಾಶಿವರಾತ್ರಿಯ ಹಿಂದಿನ ದಿನವೇ ಇಲ್ಲಿ ವಿಶೇಷ ಸನ್ನಿವೇಶ ನಿರ್ಮಾಣಗೊಂಡಿರುವುದು ಅದ್ಭುತವಾಗಿದೆ. ದಾದ ಲೇಖರಾಜ್ ಅವರು 87 ವರ್ಷಗಳಿಂದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದಿಂದ ಆಧ್ಯಾತ್ಮಿಕ ಬೋಧನೆ ಮಾಡುವ ಮೂಲಕ ಜನರನ್ನು ಸನ್ಮಾರ್ಗದಲ್ಲಿ ಕರೆದೊಯ್ಯುತ್ತಿದ್ದಾರೆ ಎಂದರು.

ಭಾರತದಲ್ಲಿ ಶಂಕರಾಚಾರ್ಯರು, ಮಧ್ವಾಚಾರ್ಯರು, ರಾಮಾನುಜಾಚಾರ್ಯರು ಸೇರಿದಂತೆ ಅನೇಕ ಸಂತ ಮಹನೀಯರು ಬಂದು ಆಧ್ಯಾತ್ಮಿಕ ಸಂದೇಶಗಳನ್ನು ನೀಡಿದ್ದಾರೆ. ಹಾಗೆಯೇ ದಾದ ಲೇಖರಾಜ್ ಒಬ್ಬ ಮಹಾನ್ ಸಂತ. ಲೌಖಿಕ ಜೀವನ ಸಾರವನ್ನು ತಿಳಿಸುತ್ತಾರೆ ಎಂದು ಹೇಳಿದರು.

ಪಾಶ್ಚಿಮಾತ್ಯ ರಾಷ್ಟ್ರಗಳು ಅತ್ಯಂತ ಶ್ರೀಮಂತ ರಾಷ್ಟ್ರಗಳು ಅಷ್ಟೆ, ಆದರೆ, ಭಾರತದಲ್ಲಿ ಜೀವನ ಮೌಲ್ಯ, ಪ್ರಾಚೀನ ಪರಂಪರೆ ಸೇರಿದಂತೆ ರಾಜಯೋಗವಿದೆ ಎಂದು ಅರಿತು ಅನೇಕ ವಿದೇಶಿಗರು ಭಾರತಕ್ಕೆ ಬಂದು ಇಲ್ಲಿನ ಸಂಸ್ಕೃತಿ ಮತ್ತು ಸಂಪ್ರದಾಯವನ್ನು ಕಲಿಯುತ್ತಿದ್ದಾರೆ. ಆದರೆ ಇಡೀ ಜಗತ್ತಿನಲ್ಲಿರುವುದು ಒಬ್ಬನೇ ಪರಮಾತ್ಮ. ಈ ಹಿಂದೆ ಸಂಪರ್ಕ ಮಾಧ್ಯಮಗಳು ಇಲ್ಲದೆ ಇದ್ದ ಸಂದರ್ಭದಲ್ಲಿ ಪ್ರಾಂತ್ಯಕ್ಕೆ ಅನುಗುಣವಾಗಿ ದೇವರುಗಳು ಸೃಷ್ಟಿಯಾದವು ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ಈಶ್ವರೀಯ ವಿಶ್ವ ವಿದ್ಯಾಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ. ಲಕ್ಷ್ಮೀಜಿ, ಶಾಸಕ ಎಸ್.ಎ. ರಾಮದಾಸ್, ಉಪ ಮೇಯರ್ ರೂಪ ಯೋಗೇಶ್, ಜೆ.ಕೆ.ಟೈರ್ಸ್ ಅಂಡ್ ಇಂಡಸ್ಟ್ರೀಸ್ ಉಪಾಧ್ಯಕ್ಷ ವಿ.ಈಶ್ವರ ರಾವ್, ವಿಕ್ರಾಂತ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಎಸ್.ಲೋಕೇಶ್ ಸೇರಿದಂತೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಪ್ರಮುಖರು ಉಪಸ್ಥಿತರಿದ್ದರು.



ಪ್ರಯೋಗಾತ್ಮಕ ಸೇವೆ ಯಶಸ್ಸಿನ ಬೆನ್ನಲ್ಲೇ ಅಂಚೆ ಕಚೇರಿಯಿಂದ ನಿಯಮಿತ ಎಕ್ಸ್‌ಪ್ರೆಸ್ ಕಾರ್ಗೋ ಸೇವೆ



ಬೆಂಗಳೂರು: ಕರ್ನಾಟಕ ಅಂಚೆ ಇಲಾಖೆಯು ಭಾರತೀಯ ರೈಲ್ವೆಯ ಸಹಭಾಗಿತ್ವದಲ್ಲಿ ನಿಯಮಿತ ಎಕ್ಸ್‌ಪ್ರೆಸ್ ಕಾರ್ಗೋ ಪಾರ್ಸೆಲ್ ಸೇವೆಗಳನ್ನು ನಿರ್ವಹಿಸಲು ಸಿದ್ಧವಾಗಿದೆ.

ಈ ಹಿಂದೆ ರಾಜ್ಯದಿಂದ ಎರಡು ಪ್ರಾಯೋಗಿಕವಾಗಿ ನಡೆದ ಕಾರ್ಗೋ ಸೇವೆಯ ಯಶಸ್ಸಿನ ನಂತರ, ಇದು ಈಗ ಶಾಶ್ವತ ವೈಶಿಷ್ಟ್ಯವನ್ನು ಮಾಡಲು ಅಂಚೆ ಇಲಾಖೆ ಸಿದ್ಧವಾಗಿದ್ದು, ಇದು ಇಲ್ಲಿನ ವ್ಯವಹಾರಗಳಿಗೆ ದೊಡ್ಡ ಉತ್ತೇಜನವನ್ನು ನೀಡುತ್ತದೆ ಎನ್ನಲಾಗಿದೆ. ಅಂಚೆ ಇಲಾಖೆಗೆ ನಿರ್ದಿಷ್ಟವಾಗಿ ನಿಗದಿಪಡಿಸಿದ ಒಂದು ಬೋಗಿಯಲ್ಲಿ ಮೂರು ಟನ್ ಪಾರ್ಸೆಲ್‌ಗಳನ್ನು ಹೊತ್ತ ಬೆಂಗಳೂರಿನಿಂದ ಗುವಾಹಟಿಗೆ ರೈಲು ಗುರುವಾರ (ಫೆ. 16) ಹೊರಡಲಿದೆ. ಇದಕ್ಕೆ ಕೇಂದ್ರ ಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಔಪಚಾರಿಕವಾಗಿ ಚಾಲನೆ ನೀಡಲಿದ್ದಾರೆ.

ಕರ್ನಾಟಕ ಪೋಸ್ಟಲ್ ಸರ್ಕಲ್‌ನ ಮುಖ್ಯ ಪೋಸ್ಟ್‌ಮಾಸ್ಟರ್ ಜನರಲ್ (ಸಿಪಿಎಂಜಿ) ರಾಜೇಂದ್ರ ಎಸ್. ಕುಮಾರ್ ಈ ಬಗ್ಗೆ ಮಾಹಿತಿ ನೀಡಿದ್ದು, ಈ ಎಕ್ಸ್‌ಪ್ರೆಸ್ ಕಾರ್ಗೋ ಪಾರ್ಸೆಲ್ ಸೇವೆಗಾಗಿ ಇಂಡಿಯಾ ಪೋಸ್ಟ್ ರೈಲ್ವೆಯೊಂದಿಗೆ ಪಾಲುದಾರಿಕೆ ಹೊಂದಿದೆ. ತನ್ನ ವಿಶಾಲ ವ್ಯಾಪ್ತಿಯನ್ನು ಹೊಂದಿರುವ ಇಂಡಿಯಾ ಪೋಸ್ಟ್ ಗ್ರಾಹಕರಿಂದ ವಸ್ತುಗಳನ್ನು ಆರಿಸಿ ಮತ್ತು ಅವುಗಳನ್ನು ಗಮ್ಯಸ್ಥಾನಕ್ಕೆ ತಲುಪಿಸುವ ಮೂಲಕ ಮೊದಲ ಮತ್ತು ಕೊನೆಯ ಮೈಲಿ ಸಂಪರ್ಕವನ್ನು ಒದಗಿಸುತ್ತದೆ. ಟ್ಯಾಂಪರ್ ಪ್ರೂಫ್ ಕಂಟೈನರ್‌ನಲ್ಲಿ ರೈಲ್ವೇ ಮಧ್ಯದ ಮೈಲಿ ಪ್ರಸರಣವನ್ನು ಒದಗಿಸುತ್ತದೆ. ಗುರುತಿಸಲಾದ ರೈಲ್ವೆ ನಿಲ್ದಾಣಗಳಲ್ಲಿ ಮೀಸಲಾದ ಒಟ್ಟುಗೂಡಿಸುವ ಕೇಂದ್ರಗಳಲ್ಲಿ ಪಾರ್ಸೆಲ್‌ಗಳನ್ನು ನಿರ್ವಹಿಸಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ಸಾಮಾನ್ಯ ರೈಲಿನ ಒಂದು ಕೋಚ್ ಅನ್ನು ಈ ವಿಶೇಷ ಸೇವೆಗೆ ಮೀಸಲಿಡಲಾಗುವುದು. ಸಾಮಾನ್ಯ ಸೇವೆಗಿಂತ ಭಿನ್ನವಾಗಿ, ಗರಿಷ್ಠ 35 ಕೆಜಿ ತೂಕದ ಪಾರ್ಸೆಲ್ ಅನ್ನು ಸ್ವೀಕರಿಸಲಾಗುತ್ತದೆ, ಎಕ್ಸ್‌ಪ್ರೆಸ್ ಕಾರ್ಗೋ ಸೇವೆಯು 100 ಕೆಜಿ ವರೆಗಿನ ಪಾರ್ಸೆಲ್‌ಗಳನ್ನು ತೆಗೆದುಕೊಳ್ಳುತ್ತದೆ. ಇದರಿಂದ ವ್ಯಾಪಾರಿಗಳು ಮತ್ತು ಕೈಗಾರಿಕೆಗಳು ಅಗಾಧ ಲಾಭವನ್ನು ಪಡೆಯುತ್ತವೆ. ಭವಿಷ್ಯದಲ್ಲಿ ಕರ್ನಾಟಕದ ಹೆಚ್ಚಿನ ನಗರಗಳಿಂದ ಇದನ್ನು ನಿಯಮಿತ ಸೇವೆಯನ್ನಾಗಿ ಮಾಡಲು ನಾವು ಯೋಜಿಸಿದ್ದೇವೆ ಎಂದು ಸಿಪಿಎಂಜಿ ಹೇಳಿದೆ.

ಪಿಕ್‌ಅಪ್‌ನಿಂದ ಡೆಲಿವರಿ ತನಕ ಎಂಡ್ ಟು ಎಂಡ್ ಟ್ರ್ಯಾಕಿಂಗ್, ಜಗಳ ಮುಕ್ತ ಕ್ಲೈಮ್ ಪ್ರಕ್ರಿಯೆಗಳೊಂದಿಗೆ ಕೈಗೆಟುಕುವ ಪ್ರೀಮಿಯಂನಲ್ಲಿ ಕಡ್ಡಾಯ ಥರ್ಡ್ ಪಾರ್ಟಿ ವಿಮೆ ಇದರ ವಿಶೇಷ ಲಕ್ಷಣಗಳಾಗಿವೆ ಎಂದು ರಾಜೇಂದ್ರ ಕುಮಾರ್ ಅವರು ಹೇಳಿದ್ದಾರೆ. ರಸ್ತೆ ಸಾರಿಗೆಗೆ ಹೋಲಿಸಿದರೆ ಸ್ಪರ್ಧಾತ್ಮಕ ದರಗಳನ್ನು ರೂಪಿಸಲಾಗುತ್ತಿದೆ. ಕರ್ನಾಟಕ ಪೋಸ್ಟಲ್ ಸರ್ಕಲ್ ಈಗಾಗಲೇ ಎರಡು ಪ್ರೂಫ್ ಆಫ್ ಕಾನ್ಸೆಪ್ಟ್ ಮಾಡಿದ್ದು, ಎರಡಕ್ಕೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಒಂದು ಸೇವೆಯನ್ನು ಬೆಂಗಳೂರಿನಿಂದ ವಿಶಾಖಪಟ್ಟಣಕ್ಕೆ ಮತ್ತು ಇನ್ನೊಂದು ಬಾಗಲಕೋಟೆಯಿಂದ ಮುಂಬೈಗೆ ಓಡಿಸಲಾಯಿತು ಎಂದು ಹೇಳಿದ್ದಾರೆ.

ಕೆ-ಸೆಟ್, ಯುಜಿಸಿ ನೆಟ್ ಪರೀಕ್ಷೆಗೆ ಉಚಿತ ತರಬೇತಿ

ಮೈಸೂರು,ಫೆ.15(ಪಿಎಂ)- ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಕರ್ನಾಟಕ ಸರ್ಕಾರ ನಡೆಸಲಿರುವ ರಾಜ್ಯ ಮಟ್ಟದ ಕಾಲೇಜು ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ(ಕೆ-ಸೆಟ್) ಹಾಗೂ ದೆಹಲಿಯ ವಿಶ್ವ ವಿದ್ಯಾನಿಲಯ ಧನಸಹಾಯ ಆಯೋಗ (ಯುಜಿಸಿ) ನಡೆಸಲಿರುವ ಕಾಲೇಜು ಸಹಾಯಕ ಪ್ರಾಧ್ಯಾಪಕರ ಮತ್ತು ಕಿರಿಯ ಶಿಷ್ಯವೇತನ ಸಂಶೋಧನಾ ಸಹಾಯಕರ ಅರ್ಹತಾ ಪರೀಕ್ಷೆಗೆ ಉಚಿತ ತರಬೇತಿ ಶಿಬಿರ ಏರ್ಪಡಿಸಲಾಗಿದೆ. ಆಸಕ್ತರು ಫೆ.17ರೊಳಗೆ ಸಂಜೆ 5.30ರಿಂದ ರಾತ್ರಿ 7.30ರವರೆಗೆ ಮೈಸೂರಿನ ಲಕ್ಷ್ಮೀಪುರಂನ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನಲ್ಲಿರುವ ಜ್ಞಾನಬುತ್ತಿ ಸಂಸ್ಥೆಯಲ್ಲಿ ಸಂಯೋಜಕ ಕೆ.ವೈ.ನಾಗೇಂದ್ರ (82967 88251), ಸಿ.ಕೆ.ಕಿರಣ್‌ಕೌಶಿಕ್ (99728 30857) ಅವರಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು ಎಂದು ಸಂಸ್ಥೆ ಕಾರ್ಯದರ್ಶಿ ಹೆಚ್.ಬಾಲಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ಶಾಸಕ ಸತೀಶ್ ರೆಡ್ಡಿ ಹತ್ಯೆಗೆ ಸುಪಾರಿ: ಇಬ್ಬರ ಬಂಧನ



ಬೆಂಗಳೂರು: ಬೊಮ್ಮನಹಳ್ಳಿ ಬಿಜೆಪಿ ಶಾಸಕ ಸತೀಶ್ ರೆಡ್ಡಿ ಹತ್ಯೆಗೆ ಸುಪಾರಿ ನೀಡಿರುವ ಆರೋಪದ ಮೇಲೆ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಸತೀಶ್ ರೆಡ್ಡಿ ಹತ್ಯೆಗೆ ಕುಖ್ಯಾತ ರೌಡಿ ಗ್ಯಾಂಗ್ ಸ್ಕೆಚ್ ಹಾಕಿದ್ದ ಸ್ಫೋಟಕ ವಿಷಯ ಬಹಿರಂಗಗೊಂಡಿದೆ. ನಗರದ ವಿಲ್ಸನ್ ಗಾರ್ಡನ್ ನಾಗನ ತಂಡ ಶಾಸಕನ ಹತ್ಯೆಗೆ 2 ಕೋಟಿಗೆ ಸುಪಾರಿ ಪಡೆದಿದ್ದು ಶಾಸಕರ ಚಲನವಲನಗಳ ಬಗ್ಗೆ ನಿಗಾವಹಿಸಿದ್ದರು. ಆದರೆ ದಾಳಿಗೂ ಮುಂಚೆ ರೌಡಿಶೀಟರ್ ನಾಗನ ತಂಡದಿಂದಲೇ ವಿಷಯ ಬಹಿರಂಗಗೊಂಡಿದೆ.

ನಾಗನ ತಂಡದಲ್ಲಿದ್ದ ಚಿತ್ರದುರ್ಗದ ಮೂಲದ ಆಕಾಶ್ ಕೊಲೆಯ ಸುಳಿವು ಬಿಟ್ಟು ಕೊಟ್ಟಿದ್ದಾನೆ. ಸತೀಶ್ ರೆಡ್ಡಿ ಬೆಂಬಲಿಗ ಚಂದ್ರು ಕರೆ ಮಾಡಿದ್ದಾಗ ಆಕಾಶ್ ಕೊಲೆಯ ಸಂಚು ಬಾಯ್ಬಿಟ್ಟಿದ್ದಾನೆ. ನಂತರ ಎಚ್ಚೆತ್ತ ಶಾಸಕರು ಪೊಲೀಸರಿಗೆ ದೂರು ನೀಡಿದ್ದಾರೆ.

ತಮ್ಮ ವಿರುದ್ಧ ದೂರು ದಾಖಲಾಗುತ್ತಿದ್ದಂತೆ ರೌಡಿ ನಾಗನ ತಂಡ ತಲೆಮರೆಸಿಕೊಂಡಿದ್ದಾರೆ. ಇನ್ನು ನಾಗನ ತಂಡವನ್ನು ಪತ್ತೆ ಹಚ್ಚಲು ವಿಶೇಷಗಳನ್ನು ತಂಡಗಳನ್ನು ರಚಿಸಿದೆ.

ನಿಮ್ಮ ಹಗಲುಗನಸು ನನಸಾಗಲು ಇದು ಬಿಹಾರ, ಉತ್ತರಪ್ರದೇಶವಲ್ಲ

ಅಮಿತ್ ಶಾಗೆ ಕುಮಾರಸ್ವಾಮಿ ವಾರ್ನಿಂಗ್

ಧಾರವಾಡ: ಅಧಿಕಾರ ಸಿಕ್ಕಾಗ ರಾಜ್ಯದ ಜನರು ಮತ್ತು ರೈತರ ಪರವಾಗಿ ಜೆಡಿಎಸ್ ಧ್ವನಿ ಎತ್ತಿದೆ. ಆದರೆ ಎಂದಿಗೂ ಬಿಜೆಪಿಯವರಂತೆ ಎಂದೂ ನರಹತ್ಯೆಯ ರಾಜಕೀಯ ಮಾಡಿಲ್ಲ ಎಂದು ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ನಗರದ ಮಹಾನಗರ ಪಾಲಿಕೆ ಕೇಂದ್ರ ಕಚೇರಿ ಆವರಣದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮಗೆ ಅಧಿಕಾರ ಸಿಕ್ಕಾಗ ರೈತರ ಸಾಲ ಮನ್ನಾ ಮಾಡಿದ್ದೇವೆ. ಪ್ರಾಮಾಣಿಕವಾಗಿ ಜನಗಳ ನೋವಿಗೆ ಸ್ಪಂದಿಸುವ ಕೆಲಸ ಮಾಡಿದ್ದೇವೆ. ಆದರೆ ಬಿಜೆಪಿ ನಾಯಕರಂತೆ ಅಮಾಯಕರನ್ನು ಬಲಿ ಪಡೆದು ರಾಜಕೀಯ ಮಾಡಿಲ್ಲ. ಹೀಗಾಗಿ ರಾಜ್ಯ ಹಾಗೂ ದೇಶದಲ್ಲಿ ಜನರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂಬುದನ್ನು ಕಾದು ನೋಡಿ ಎಂದರು.

ಭಾರತದ ಸಂವಿಧಾನದಲ್ಲಿ ಯಾರು ಯಾವ ವೃತ್ತಿಯಾದರೂ ಆರಿಸಿಕೊಳ್ಳಬಹುದು. ಚುನಾವಣೆ ಬಂದಾಗ ಯಾರಾದರೂ ನಿಲ್ಲಬಹುದು. ಸಂವಿಧಾನದ ವ್ಯವಸ್ಥೆ ಬಗ್ಗೆ ಅಮಿತ್ ಶಾ ತಿಳಿದುಕೊಂಡಿದ್ದಾರಾ. ಇದನ್ನ ನಾನು ಅವರಿಗೆ ಕೇಳಲು ಬಯಸುತ್ತೇನೆ. ಜನರ ಆಶೀರ್ವಾದಿಂದ ಜನಪ್ರತಿನಿಧಿ ಆಗ್ತಾರೆ. ನಾವು ಯಾರೂ ಹಿಂಬಾಗಿಲಲ್ಲಿ ಪ್ರವೇಶ ಮಾಡಿಲ್ಲ. ಜನ ಸ್ವೀಕಾರ ಮಾಡಿದ ಮೇಲೆ ನಾವು ಜನಪ್ರತಿನಿಧಿ ಆಗಿದ್ದೇವೆ. ಅದಕ್ಕೆ ನಾವು ಇವರಿಂದ ಪರ್ಮಿಷನ್ ತಗೊಬೇಕಾ ಎಂದು ಕುಮಾರಸ್ವಾಮಿ ಕೇಳಿದ್ದಾರೆ.

ವಿಧಾನ ಸಭಾ ಚುನಾವಣೆ ಹಿನ್ನೆಲೆಯಲ್ಲಿ

ಜನತೆಯಲ್ಲಿ ವಿಶ್ವಾಸ ಮೂಡಿಸಲು ಪೊಲೀಸ್ ಪಥ ಸಂಚಲನ



ಮೈಸೂರು, ಫೆ.15(ಜಿಎ)- ರಾಜ್ಯದಲ್ಲಿ ಕೆಲವೇ ದಿನಗಳಲ್ಲಿ ವಿಧಾನಸಭಾ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ನೇತೃತ್ವದಲ್ಲಿ ಸಾರ್ವಜನಿಕರಲ್ಲಿ ವಿಶ್ವಾಸ ಮೂಡಿಸುವ ಸಲುವಾಗಿ ಪೊಲೀಸರು ಮಂಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬುಧವಾರ ಪಥ ಸಂಚಲನ ನಡೆಸಿದರು.

ಈ ವೇಳೆ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಮಾತನಾಡಿ, ಚುನಾವಣೆ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ, ಮೈಸೂರು ಜನತೆಗೆ ನಿಮ್ಮೊಟ್ಟಿಗೆ ನಾವಿದ್ದೇವೆ ಎಂದು ಆತ್ಮಸ್ಥೈರ್ಯ ತುಂಬುವ ಸಲುವಾಗಿ ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಪ್ರದೇಶಗಳಲ್ಲಿ ಪಥ ಸಂಚಲನ ನಡೆಸಲು ನಿರ್ಧರಿಸಲಾಗಿದೆ. ಅದರಂತೆ ಇಂದು ಸೂಕ್ಷ್ಮ ಪ್ರದೇಶವಾದ ಮಂಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮೈಸೂರು ನಗರದಾದ್ಯಂತ ಮಾಡಲಾಗುತ್ತದೆ ಎಂದರು.

ಚುನಾವಣಾ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರ ವಹಿಸುವ ಹಿನ್ನೆಲೆಯಲ್ಲಿ ಎರಡು ಬಾರಿ ರೌಡಿ ಪೆರೇಡ್ ನಡೆಸಿದ್ದು, ಅಪರಾಧ ಚಟುವಟಿಕೆಗಳಲ್ಲಿ ಕಾರ್ಯನಿರತರಾಗಿರುವವರನ್ನು ಗಡಿಪಾರು ಮಾಡಲಾಗುವುದು ಎಂದು ಎಚ್ಚರಿಸಲಾಗಿದೆ ಕೆಲವರನ್ನು ಗಡಿಪಾರು ಮಾಡಲು ನಮ್ಮ ಬಳಿ ಕೆಲವು ಪ್ರಸ್ತಾವನೆಗಳಿವೆ ಎಂದು ತಿಳಿಸಿದರು.



ನಗರ ಪೊಲೀಸ್ ಆಯುಕ್ತರ ನೇತೃತ್ವದಲ್ಲಿ ನಡೆದ ರೂಟ್ ಮಾರ್ಚ್‌ನಲ್ಲಿ ಡಿಸಿಪಿಗಳು, ಎಸಿಪಿಗಳು ಸೇರಿದಂತೆ ಇನ್ನಿತರ ಸಿಬ್ಬಂದಿ ಭಾಗವಹಿಸಿದ್ದರು. ನಗರದ ಕೇಂದ್ರ ಕಾರಾಗೃಹದಿಂದ ಪ್ರಾರಂಭವಾದ ಪಥ ಸಂಚಲನ ಅಶೋಕ ರಸ್ತೆ, ಅಜಂ ಮಸೀದಿ, ಕಬೀರ್ ರಸ್ತೆ ಜಂಕ್ಷನ್, ಮಂಡಿ ಪೊಲೀಸ್ ಠಾಣೆ, ಶ್ರೀ ಟಾಕೀಸ್ ವೃತ್ತ, ಮಂಡಿ ಮಾರ್ಕೆಟ್, ರಾಗಿಮಂಡಿ ಸರ್ಕಲ್, ಸವಾಯ್ ಚೌಕ್, ಸಾಡೇ ರಸ್ತೆ, ಮಿಷನ್ ಆಸ್ಪತ್ರೆ, ಆರ್‌ಎಂಸಿ ಸರ್ಕಲ್, ತಿಲಕ್‌ನಗರ, ಪುಲಕೇಶಿ ರಸ್ತೆ, ಗುಂಚಿ ಸರ್ಕಲ್ ಮೂಲಕ ಸಾಗಿ ಕೇಂದ್ರ ಕಾರಾಗೃಹ ತಲುಪುವ ಮೂಲಕ ಮುಕ್ತಾಯವಾಯಿತು.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : (ರೋಗಿಯನ್ನು ಪರೀಕ್ಷೆ ಮಾಡಿ) ನಿಮ್ಮ ನಾಡಿ ಬಡಿತ ಗಡಿಯಾರದ ಮುಳ್ಳಿನಷ್ಟೇ ನಿಖರವಾಗಿದೆಯೆಲ್ಲಾ?

ರೋಗಿ : ಡಾಕ್ಟರ್, ನೀವು ನನ್ನ ಗಡಿಯಾರವನ್ನು ಹಿಡಿದುಕೊಂಡಿದ್ದೀರಾ!

ಮೈಸೂರು ಮಿತ್ರ

ಗುರುವಾರ, 16 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸಲಹೆಗಳನ್ನು ಪಡೆಯುವವರು ಬಹಳ ಮಂದಿ.
ಅದರ ಲಾಭ ಪಡೆಯುವವರು ಕೆಲವೇ ಮಂದಿ – ಸೈರಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಲ್ಲವನಾದರೂ ಕಲ್ಲು ತಗುಲಿದರೆ ತಲ್ಲಣಿಸದೇ ಇರನು

ನಿಮ್ಮ ಪತ್ರಗಳು

ಮತದಾನ ಮಾರಾಟವಾಗದಿರಲಿ

ಮಾನ್ಯರೆ,

ಭಾರತ ದೇಶದ ಜನತಂತ್ರ ವ್ಯವಸ್ಥೆಯಲ್ಲಿ ಮತದಾರರು ಪ್ರಜಾಪ್ರಭುತ್ವದ ಬುನಾದಿ. ಮತದಾರರ ತನ್ನ ಮತದ ಮಹತ್ವವನ್ನು ತಿಳಿದು ಮತ್ತು ದೂರ ದೃಷ್ಟಿಯನ್ನು ಇಟ್ಟುಕೊಂಡು ಮತದಾನ ಮಾಡಬೇಕಾಗುತ್ತದೆ.

ಪ್ರಜಾಪ್ರಭುತ್ವದ ಘನತೆಯ ಶ್ರೇಷ್ಠತೆಯನ್ನು ಎತ್ತಿಹಿಡಿಯಲು ಮತದಾನ ಬಹಳ ಪ್ರಮುಖವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿ ಹಾಗೂ ವ್ಯವಸ್ಥೆಯನ್ನು ಸರಿ ದಾರಿಗೆ ತರುವಲ್ಲಿ ಮತದಾರರ ಪಾತ್ರ ಬಹಳ ಪ್ರಮುಖವಾಗಿದೆ.

ಜಗತ್ತಿನಲ್ಲಿ ಅತೀ ದೊಡ್ಡ ಸಂವಿಧಾನ ಹೊಂದಿರುವ ರಾಷ್ಟ್ರ ಭಾರತ. ತಮ್ಮ ಆಡಳಿತಾತ್ಮಕ ವ್ಯವಸ್ಥೆಯನ್ನು ರೂಪಿಸಿಕೊಳ್ಳುವ ಮತ್ತು ಕಾಪಾಡಿಕೊಳ್ಳುವ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ರಾಜಕೀಯ ಹಕ್ಕುಗಳನ್ನು ತನ್ನ ಪ್ರಜೆಗಳಿಗೆ ನೀಡಿರುವ ದೇಶ ಪ್ರಜೆಗಳ ವಿಕಾಸಗಳಿಗೆ ಅಗತ್ಯವಾದ ಸವಲತ್ತುಗಳನ್ನು, ಹಕ್ಕುಗಳನ್ನು ಸಂವಿಧಾನಾತ್ಮಕವಾಗಿ ಪ್ರಜೆಗಳಿಗೆ ಒದಗಿಸಬೇಕಾದುದು ಚುನಾಯಿತ ಪ್ರತಿನಿಧಿಗಳು ಮಾಡಬೇಕಾದ ಕರ್ತವ್ಯ. ಇಂತಹ ರಾಷ್ಟ್ರದಲ್ಲಿ ಚುನಾವಣೆ ಸಂದರ್ಭದಲ್ಲಿ ಕೆಲವು ಅಭ್ಯರ್ಥಿಗಳು ಮತದಾರರಿಗೆ ಆಸೆ ಆಮಿಷಗಳನ್ನು ನೀಡಿ ಮತದಾನದ ಹಕ್ಕನ್ನು ಕಸಿದುಕೊಳ್ಳುತ್ತಾರೆ

ಚುನಾವಣೆ ಸಮೀಪಿಸುತ್ತಿದ್ದಂತೆ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ಮತದಾರರ ಓಲೈಕೆಗೆ ಬೇಕಾದ ಎಲ್ಲಾ ವಿವಿಧ ಕಸರತ್ತುಗಳನ್ನು ಮಾಡುತ್ತಾರೆ. ಆಶ್ವಾಸನೆಗಳ ಮಹಾಪೂರವನ್ನೇ ಹರಿಸುತ್ತಾರೆ. ಪ್ರಜ್ಞಾವಂತ ಮತದಾರರ ಸರಿ–ತಪ್ಪು, ಉತ್ತಮ–ಅಧಮ ವ್ಯಕ್ತಿಗಳನ್ನು ಕಂಡು ಹಿಡಿಯುವ ವಿವೇಚನೆ ಇದೆ. ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಂಡಾಗ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆ ಗಟ್ಟಿಗೊಳುತ್ತದೆ ಸಂವಿಧಾನ ಕಲ್ಪಿಸಿರುವ ಹಕ್ಕುಗಳಲ್ಲಿ ಮತದಾನವು ಒಂದಾಗಿದೆ. ಅಂತಹ ಮತದಾನದ ಹಕ್ಕನ್ನು ನೈತಿಕವಾಗಿ ಚಲಾಯಿಸಬೇಕಾದುದು ಎಲ್ಲರ ಕರ್ತವ್ಯ ಅದನ್ನು ದುರ್ಬಲ, ದುರ್ಬಳಕೆ ಮಾಡುವುದು ದೇಶವನ್ನು ದುರ್ಬಲಗೊಳಿಸಿದಂತೆ ಮತ್ತು ಸಂವಿಧಾನಕ್ಕೆ ಮಾಡುವ ಅಪಮಾನ ಕೂಡ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

'ಪ್ರಧಾನ ಮಾರುತಿ'ಯಾದ ಪ್ರಧಾನಮಂತ್ರಿ!

ಮಾನ್ಯರೆ,



ಮೈಸೂರಿನ ಕುವೆಂಪು ನಗರದ ಜ್ಯೋತಿ ಶಿಕ್ಷಣ ಸಂಸ್ಥೆಯ ಬಳಿ "ಪ್ರಧಾನ ಮಾರುತಿ ಜನಸೇವಾ ಔಷಧ ಕೇಂದ್ರ" ಇದೆ.ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಅನಂತ ಕುಮಾರ್ ಭಾವಚಿತ್ರ ಹೊಂದಿರುವ ಈ ಫಲಕವು ಜೆನರಿಕ್ ಔಷಧ ಮಾರಾಟ ಮಾಡುವ ಪ್ರಧಾನಮಂತ್ರಿ ಜನಸೇವಾ ಔಷಧ ಕೇಂದ್ರವನ್ನು ಹೋಲುತ್ತದೆ. ಆದರೆ ಪ್ರಧಾನಮಂತ್ರಿ ಎಂಬುದನ್ನು ಪ್ರಧಾನ ಮಾರುತಿ ಎಂದು ಬರೆಯಲಾಗಿದೆ. ಮುದ್ರಾರಾಕ್ಷಸನ ಹಾವಳಿಯಿಂದ ಈ ತಪ್ಪಾಗಿರಬಹುದು ಎಂದು ಭಾವಿಸಿದರೆ ಅದು ತಪ್ಪಾಗುತ್ತದೆ.ಏಕೆಂದರೆ ಇಂಗ್ಲಿಷಿನಲ್ಲಿಯೂ ಪ್ರಧಾನ ಮಾರುತಿ ಎಂದೇ ಬರೆಯಲಾಗಿದೆ. ನಿಜವಾಗಿಯೂ ಇದು ಪ್ರಧಾನಮಂತ್ರಿ ಜನಸೇವಾ ಔಷಧ ಕೇಂದ್ರವೋ ಅಲ್ಲವೋ ಎಂಬ ವಿಚಾರವಾಗಿ ಸ್ಪಷ್ಟನೆ ನೀಡಬೇಕಾಗಿರುವುದು ಸರಕಾರದ ಜವಾಬ್ದಾರಿ. ಇದು ಪ್ರಧಾನಮಂತ್ರಿ ಜನಸೇವಾ ಔಷಧ ಕೇಂದ್ರ ಆಗಿದ್ದರೆ ಪ್ರಧಾನ ಮಾರುತಿ ಎಂದು ಬರೆದಿರುವುದೇಕೆ? ಇದು ಪ್ರಧಾನ ಮಾರುತಿ ಜನಸೇವಾ ಔಷಧ ಕೇಂದ್ರವೇ ಆಗಿದ್ದರೆ ಈ ಫಲಕದಲ್ಲಿ ಪ್ರಧಾನಮಂತ್ರಿಯ ಚಿತ್ರವನ್ನು ಬಳಸಿರುವುದೇಕೆ? ಪ್ರಧಾನಮಂತ್ರಿಯನ್ನು ಪ್ರಧಾನ ಮಾರುತಿ ಎಂದು ಚಿತ್ರಿಸಿರುವುದೇಕೆ? ಇದು ಯಕ್ಷಪ್ರಶ್ನೆ!

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

ಜಾತಿ–ಜಾತಿಗಳ ನಡುವೆ ವಿಷ ಬೀಜ ಬಿತ್ತುವ ಕುಟೀಲ ತಂತ್ರ ಕೈ ಬಿಡಲಿ

ಮಾನ್ಯರೆ,

ತ್ರಿಮತಸ್ಥ ಬ್ರಾಹ್ಮಣರೆಲ್ಲಾ ಒಂದೇ. ಇಲ್ಲಿ ಯಾವುದೇ ಒಡಕು ಭಿನ್ನಾಭಿಪ್ರಾಯಗಳಿಲ್ಲ ಹಾಗೂ ಉಪ ಪಂಗಡಗಳಿಲ್ಲ. ಆದರೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ ಕುಮಾರಸ್ವಾಮಿ ಮಾತ್ರ ಬ್ರಾಹ್ಮಣರ ಬಗ್ಗೆ ಪುಂಕಾನುಪುಂಕವಾಗಿ ಮಾತನಾಡುವ ಮೂಲಕ ಸಮುದಾಯವನ್ನು ಒಡೆಯಲು ಹೊರಟಿರುವುದು ವ್ಯರ್ಥ ಕಸರತ್ತು ಎನ್ನಬಹುದು.

ಇತಿಹಾಸ ತಜ್ಞರಂತೆ ಬ್ರಾಹ್ಮಣ ಸಮುದಾಯದ ಬಗ್ಗೆ ಮಾತನಾಡಿರುವ ಕುಮಾರ ಸ್ವಾಮಿ, ಶೃಂಗೇರಿ ಸಂಸ್ಥಾನದ ಮಠವನ್ನು ಅನಾವಶ್ಯಕವಾಗಿ ಎಳೆದು ತಂದಿದ್ದಾರೆ. ರಾಜಕೀಯ ಬೇಳೆ ಬೇಯಿಸಿಕೊಳ್ಳಲು ವಿಪ್ರ ಸಮುದಾಯದಲ್ಲಿ ಒಡಕು ಹುಟ್ಟಿಸಬಹುದೆಂದು ತಿಳಿದಿದ್ದರೆ ಅದು ಅವರ ಭ್ರಮೆ.

ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಯಶಸ್ವಿ ಆಡಳಿತ ನಡೆಸಿದ್ದ ಆರ್.ಗುಂಡೂ ರಾವ್ ಆಗಲೀ ಅಥವಾ ರಾಮಕೃಷ್ಣ ಹೆಗಡೆಯವರಾಗಲೀ ಎಂದೂ ಜಾತಿಯ ಹೆಸರಲ್ಲಿ ರಾಜಕೀಯ ಮಾಡಿದವರಲ್ಲ. ಆದರೆ ಹೆಗಡೆಯವರಿಗೆ ದೇವೇಗೌಡರ ಕುಟುಂಬದಿಂದ ಆದ ಅಪಮಾನಗಳನ್ನು ಬ್ರಾಹ್ಮಣ ಸಮುದಾಯ ಮರೆತಿಲ್ಲ. ಇದನ್ನು ಕುಮಾರಸ್ವಾಮಿಯವರು ಕುಳಿತು ಒಮ್ಮೆ ಆತ್ಮಾವಲೋಕನ ಮಾಡಿಕೊಂಡರೆ ಒಳಿತು. ಮುಖ್ಯಮಂತ್ರಿ ಹುದ್ದೆ ಕೆಲವೇ ಸಮುದಾಯಕ್ಕೆ ಸೀಮಿತವೇನಲ್ಲ. ಅರ್ಹತೆ ಉಳ್ಳ ಎಲ್ಲಾ ಸಮುದಾಯದ ನಾಯಕರು ಆ ಪಟ್ಟವನ್ನು ಅಲಂಕರಿಸಬಹುದು. ಇದನ್ನು ಕುಮಾರಸ್ವಾಮಿ ಅರಿತುಕೊಳ್ಳುವ ಮೂಲಕ ಜಾತಿ–ಜಾತಿಗಳ ನಡುವೆ ವಿಷ ಬೀಜ ಬಿತ್ತುವ ಕುಟೀಲ ತಂತ್ರವನ್ನು ಮೊದಲು ಕೈ ಬಿಡಲಿ.

–ಹೆಚ್.ಆರ್.ಪ್ರಸಾದ್, ವಿವೇಕಾನಂದನಗರ, ಮೈಸೂರು.

ಧೀಮಂತ

ಮಾನ್ಯರೆ,

ಇತ್ತೀಚೆಗೆ ಲೋಕಭೂಮಿಕೆಯಿಂದ ನಾಕಭೂಮತೆಗೇರಿದ ಪೂಜ್ಯ ಸಿದ್ದೇಶ್ವರ ಶ್ರೀಗಳು ಒಬ್ಬ ದಿವ್ಯ ಧೀಮಂತ! ಕಾಳಿದಾಸನ ಶಾಕುಂತಲದ ಒಂದು ಸೂಕ್ತಿ ಸ್ಮರಣೀಯ: "ನ ಖಲು ಕಶ್ಚಿದ ವಿಷಯೋ ನಾಮ ದೀಮತಾ" (ಧೀಮಂತರಿಗೆ ಯಾವುದೂ ಅವಿಷಯವಲ್ಲ; ಅವರಿಗೆ ಎಲ್ಲವೂ ತಿಳಿದಿದೆ). ಆದ್ದರಿಂದ ಧೀಮಂತ ಎಂದರೆ, ಸರ್ವಜ್ಞ('ಧೀ' ಶಬ್ದಕ್ಕೆ ಬುದ್ಧಿ, ಪ್ರತಿಭೆ ಎಂಬ ಎರಡೂ ಅರ್ಥಗಳಿವೆ. ಕುವೆಂಪು ಹೇಳುವ 'ಬುದ್ಧಿ, (ಅನು)ಭಾವಗಳು ವಿದ್ಯುದಾಲಿಂಗನ' ಅಂಥ ಮಹನೀಯರಲ್ಲಿ ಸಿದ್ಧಿಸಿರುತ್ತದೆ!

ಒಂದು ಚೂರು ಕಾಗದವನ್ನೂ ಕೈಯಲ್ಲಿ ಹಿಡಿಯದೆ, ಶ್ರೋತೃ ಹೃನ್ಮೋಹಕವಾಗಿ ಅಬ್ಬರವಿಲ್ಲದೆ ಮಾತನಾಡುತ್ತಿದ್ದ ಶ್ರೀಗಳ ಪ್ರವಚನಗಳೆಂದರೆ ಲೋಕವಿಸ್ಮಯಗಳೇ ಸರಿ! (ಅವರಿಗೆ ಸಾಟಿ ಅಮೇರಿಕದಲ್ಲೊಮ್ಮೆ ಮೂರು ಗಂಟೆ ಕಾಲ ಸತತ ಉಪನ್ಯಾಸಿಸಿದ ಸ್ವಾಮಿ ವಿವೇಕಾನಂದರು). ಸಿದ್ದೇಶ್ವರ ಶ್ರೀಗಳಂಥವರು ಮನುಜ ರೂಪವ ಧರಿಸಿ ಧರೆಗಿಳಿದು ಬಂದಂಥ 'ದೇವಸೂರ್ಯಕರುಣರು; ಮಹಾಶರಣರು; ಮರಣವನ್ನು ಮಣಿಸಿದ ಮಹಾಂತರು!

ಪುನರಾಗಮನ : ಅಂಕಣಕಾರ ತ್ರಿಪುರಾಂತಕರ ಪುನರಾಗಮನ ಸಂತೋಷಕರ. ಅವರ ಹೆಸರು 'ಉಸಿರು' ಎರಡೂ ವಿಶಿಷ್ಟ!

– ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್, ಮೈಸೂರು.



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಮಹಿಳೆಗೆ ಉನ್ನತ ಶಿಕ್ಷಣ ಸಿಕ್ಕರೆ ಸಾಕೇ...



ಇತ್ತೀಚೆಗೆ ಕೇಂದ್ರ ಶಿಕ್ಷಣ ಮಂತ್ರಾಲಯದಿಂದ ಬಿಡುಗಡೆಯಾದ ಅಖಿಲ ಭಾರತ ಉನ್ನತ ಶಿಕ್ಷಣದ ಸಮೀಕ್ಷೆಯ ವರದಿ, ಕಳೆದ ವರ್ಷಕ್ಕೆ ಹೋಲಿಸಿದಾಗ ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಒಟ್ಟು ದಾಖಲಾತಿಯಲ್ಲಿ ಶೇಕಡಾ 7.5 ರಷ್ಟು ಹೆಚ್ಚಾಗಿದೆ ಎಂದು ಸೂಚಿಸಿತು. ದೇಶದ 1,113 ವಿಶ್ವವಿದ್ಯಾಲಯಗಳು, 11,296 ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ ಒಳಪಡದ, ಆದರೆ ಶೈಕ್ಷಣಿಕ ಕ್ಷೇತ್ರದಲ್ಲಿ ವಿಶೇಷ ಸ್ಥಾನ ಮತ್ತು ಅಧಿಕಾರವನ್ನು ಹೊಂದಿರುವ 10,308 ಸಂಸ್ಥೆಗಳನ್ನು ಈ ವರದಿ ಗಣನೆಗೆ ತೆಗೆದು ಕೊಂಡಿದೆ. ಉನ್ನತ ಶಿಕ್ಷಣದಲ್ಲಿ ಒಟ್ಟು ವಿದ್ಯಾರ್ಥಿ ದಾಖಲಾತಿ ಹೆಚ್ಚುತ್ತಿರುವುದು ಗಮನಿಸಬೇಕಾದ ವಿಷಯವೇ ಆದರೂ ಈ ವಿದ್ಯಾರ್ಥಿಗಳ ಸಮೂಹದಲ್ಲಿ ಕಂಡುಬರುವ ವಿವಿಧ ಗುಂಪುಗಳಿಗೆ ಈ ಹೆಚ್ಚಳದಲ್ಲಿ ಸಮ ಪ್ರಾತಿನಿಧ್ಯ ದೊರೆತಿದೆಯೇ ಮತ್ತು ಈ ಹೆಚ್ಚಳ ಕೇವಲ ದಾಖಲಾತಿಗೆ ಸೀಮಿತವಾಗಿದೆಯೇ ಅಥವಾ ಪದವಿಗಳು ಸಾಮಾಜಿಕ–ಆರ್ಥಿಕ ಮೇಲ್ಮುಖ ಚಲನೆಗೆ ದಾರಿ ಮಾಡಿ ಕೊಡುತ್ತಿವೆಯೇ ಎಂಬ ಎರಡು ಪ್ರಶ್ನೆಗಳನ್ನು ಎತ್ತಿ ಅವುಗಳನ್ನು ವಿಮರ್ಶಾತ್ಮಕ ಪರಿಶೀಲನೆಗೆ ಒಳಪಡಿಸುವುದು ಮುಖ್ಯವಾಗುತ್ತದೆ.

ಭಾರತೀಯ ಸಮಾಜ ಸ್ತರೀಕೃತವಾದ ವ್ಯವಸ್ಥೆ, ಎಂದರೆ ಇಲ್ಲಿ ಎದ್ದು ಕಾಣುವುದು ಲಿಂಗ ಮತ್ತು ಜಾತಿ ಆಧಾರಿತ ಅಸಮಾನತೆ. ಅದರಲ್ಲೂ ಲಿಂಗ ಅಸಮಾನತೆ ಎಲ್ಲ ಗುಂಪುಗಳಲ್ಲೂ ಕಂಡು ಬರುವಂಥ ಒಂದು ಸಾಮಾಜಿಕ ಸತ್ಯ ವಿಶೇಷವಾಗಿ ಇದು ಎದ್ದು ಕಾಣುವುದು ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ. ಇವೆರಡು ಕ್ಷೇತ್ರಗಳಿಗೂ ನಿಕಟ ಸಂಬಂಧವಿರುವುದರಿಂದ ಮೊದಲಿಗೆ ಶಿಕ್ಷಣಾವಕಾಶಗಳನ್ನು ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಯಾವ ಪ್ರಮಾಣದಲ್ಲಿ ಬಳಸಿಕೊಳ್ಳುತ್ತಿದ್ದಾರೆ ಎಂಬುದನ್ನು ಪರಿಶೀಲಿಸಬೇಕಾಗಿದೆ.

ಭಾರತಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಶಿಕ್ಷಣದ ಪ್ರತಿ ಹಂತದಲ್ಲೂ ಗಂಡು ಮತ್ತು ಹೆಣ್ಣು ಮಕ್ಕಳ ಭಾಗವಹಿಸುವಿಕೆ ಸಮ ಪ್ರಮಾಣದಲ್ಲಿ ಇಲ್ಲದಿರುವುದು ಕಂಡುಬರುತ್ತಿದೆ. ಶಿಕ್ಷಣದ ಮಟ್ಟ ಏರುತ್ತಾ ಹೋದ ಹಾಗೆಲ್ಲ ಈ ಅಂತರ ಮತ್ತಷ್ಟು ಹೆಚ್ಚುತ್ತಾ ಹೋಗುವುದನ್ನು ನಾವು ಕಂಡಿದ್ದೇವೆ. ಉನ್ನತ ಶಿಕ್ಷಣದ ಹಂತದಲ್ಲಂತೂ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯೇ ಇರುತ್ತದೆ. ಆದರೆ 2020–21 ರ ಸಮೀಕ್ಷಾ ವರದಿ ಹೆಣ್ಣು ಮಕ್ಕಳ ಒಟ್ಟು ದಾಖಲಾತಿ ಶೇಕಡಾ 27.3 ರಷ್ಟಿದ್ದರೆ ಗಂಡು ಮಕ್ಕಳ ಒಟ್ಟು ದಾಖಲಾತಿ ಶೇಕಡಾ 26.9 ರಷ್ಟಿದೆ ಎಂದು ತಿಳಿಸಿದೆ. ಈ ಬಾರಿಯ ಸಮೀಕ್ಷಾ ವರದಿಯ ಪ್ರಕಾರ 2016–17 ರಲ್ಲಿ ಪ್ರತಿ 100 ಪುರುಷರಿಗೆ 88 ಇದ್ದ ಮಹಿಳಾ ವಿದ್ಯಾರ್ಥಿಗಳ ಸಂಖ್ಯೆ 2020–21 ರ ವೇಳೆಗೆ ಪ್ರತಿ 100 ಪುರುಷರಿಗೆ 95 ಆಗಿದೆ.

ಈ ಬಾರಿಯ ಒಂದು ವಿಶೇಷವೆಂದರೆ ವಿಜ್ಞಾನ ಮತ್ತು ತಂತ್ರಜ್ಞಾನ ಕೋರ್ಸುಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಶೇಕಡಾ 43 ರಷ್ಟನ್ನು ತಲುಪಿರುವುದು. ಆದಾಗ್ಯೂ ಇದು ಪುರುಷರ ಪ್ರಮಾಣಕ್ಕಿಂತ ಕಡಿಮೆಯಿದ್ದು ವಿವಿಧ ಮಟ್ಟಗಳಲ್ಲಿ ಈ ಪ್ರಮಾಣದಲ್ಲಿ ವ್ಯತ್ಯಾಸಗಳು ಕಂಡು ಬರುತ್ತವೆ. ಹೆಣ್ಣು ಮಕ್ಕಳಿಗಾಗಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಂಥ ಸಂಸ್ಥೆಗಳಲ್ಲಿ ಮಹಿಳೆಯರಿಗಾಗಿ ವಿಶೇಷ ಸೀಟುಗಳನ್ನು ಮೀಸಲಿಟ್ಟಿರುವುದು, 100 ಪ್ರಗತಿ ವಿದ್ಯಾರ್ಥಿ ವೇತನಗಳನ್ನು ನೀಡುತ್ತಿರುವುದು– ಇಂಥ ಉತ್ತೇಜಕ ಯೋಜನೆಗಳು ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಲು ಕಾರಣವಾಗಿವೆ ಎಂದು ಸರ್ಕಾರಿ ಮೂಲಗಳು ಹೇಳಿದರೂ ಇವರಲ್ಲಿ ಎಷ್ಟು ಮಂದಿ ತಾವು ಪಡೆದ ಶಿಕ್ಷಣವನ್ನು ಉದ್ಯೋಗವನ್ನಾಗಿ ಪರಿವರ್ತಿಸಿಕೊಳ್ಳಲು ಸಾಧ್ಯವಾಗುತ್ತದೆ ಎನ್ನುವುದು ಮುಖ್ಯ.

> ಭಾರತಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಶಿಕ್ಷಣದ ಪ್ರತಿ ಹಂತದಲ್ಲೂ ಗಂಡು ಮತ್ತು ಹೆಣ್ಣು ಮಕ್ಕಳ ಭಾಗವಹಿಸುವಿಕೆ ಸಮ ಪ್ರಮಾಣದಲ್ಲಿ ಇಲ್ಲದಿರುವುದು ಕಂಡು ಬರುತ್ತಿದೆ. ಶಿಕ್ಷಣದ ಮಟ್ಟ ಏರುತ್ತಾ ಹೋದ ಹಾಗೆಲ್ಲ ಈ ಅಂತರ ಮತ್ತಷ್ಟು ಹೆಚ್ಚುತ್ತಾ ಹೋಗುವುದನ್ನು ನಾವು ಕಂಡಿದ್ದೇವೆ. ಉನ್ನತ ಶಿಕ್ಷಣದ ಹಂತದಲ್ಲಂತೂ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯೇ ಇರುತ್ತದೆ. ಆದರೆ 2020-21ರ ಸಮೀಕ್ಷಾ ವರದಿ ಹೆಣ್ಣು ಮಕ್ಕಳ ಒಟ್ಟು ದಾಖಲಾತಿ ಶೇಕಡಾ 27.3 ರಷ್ಟಿದ್ದರೆ ಗಂಡು ಮಕ್ಕಳ ಒಟ್ಟು ದಾಖಲಾತಿ ಶೇಕಡಾ 26.9 ರಷ್ಟಿದೆ ಎಂದು ತಿಳಿಸಿದೆ. ಈ ಬಾರಿಯ ಸಮೀಕ್ಷಾ ವರದಿಯ ಪ್ರಕಾರ 2016-17ರಲ್ಲಿ ಪ್ರತಿ 100 ಪುರುಷರಿಗೆ 88 ಇದ್ದ ಮಹಿಳಾ ವಿದ್ಯಾರ್ಥಿಗಳ ಸಂಖ್ಯೆ 2020-21ರ ವೇಳೆಗೆ ಪ್ರತಿ 100 ಪುರುಷರಿಗೆ 95 ಆಗಿದೆ.

ದೇಶದ ಉನ್ನತ ಶಿಕ್ಷಣ ವಲಯದಲ್ಲಿ ವಿದ್ಯಾರ್ಥಿಗಳ ಒಟ್ಟು ದಾಖಲಾತಿ ಪ್ರಮಾಣ ಹೆಚ್ಚಿರುವುದು, ವಿಶ್ವವಿದ್ಯಾಲಯಗಳನ್ನು ಮೌಲ್ಯಮಾಪನ ಮಾಡಿ ಅವುಗಳಿಗೆ ಶ್ರೇಣೀಕೃತ ಸ್ಥಾನ ನೀಡುವ ಪಟ್ಟಿಯಲ್ಲಿ ಸೇರ್ಪಡೆಯಾಗಲು ಭಾರತೀಯ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಅನುಕೂಲವಾಗಬಹುದು. ಆದರೆ ಸಂಖ್ಯೆಗಳ ಹಿಂದಿರುವ ಸತ್ಯಗಳನ್ನು ಹುಡುಕಿ ಅವುಗಳನ್ನು ಸೂಕ್ಷ್ಮ ವಿಶ್ಲೇಷಣೆಗೆ ಒಳಪಡಿಸುವುದು ಅವಶ್ಯ. ಉದಾಹರಣೆಗೆ, ಪರಿಶಿಷ್ಟ ಜಾತಿ ಮತ್ತು ಇತರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಪ್ರಮಾಣದಲ್ಲಿ ಈ ವರ್ಷ ಇಳಿಮುಖವಾಗಿದೆ ಎಂದು ವರದಿಯಿಂದ ತಿಳಿದು ಬರುತ್ತದೆ. ಅಲ್ಪಸಂಖ್ಯಾತ ಗುಂಪುಗಳಲ್ಲಿ ಮುಸ್ಲಿಂ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ ಇತರ ಅಲ್ಪಸಂಖ್ಯಾತ ಸಮುದಾಯಗಳಿಗಿಂತ ಇಳಿಮುಖವಾಗಿದೆ ಮತ್ತು ಅಂಗವಿಕಲ ವಿದ್ಯಾರ್ಥಿಗಳ ದಾಖಲಾತಿಯೂ ಹಿಂದಿನ ವರ್ಷಕ್ಕಿಂತ ಕಡಿಮೆಯಾಗಿದೆ ಎಂದು ವರದಿಯ ಮುಖ್ಯಾಂಶಗಳಲ್ಲಿ ಸೂಚಿಸಲಾಗಿದೆ. ಈ ಎಲ್ಲ ಅಂಕಿ ಅಂಶಗಳ ಒಳಹೊಕ್ಕು ನೋಡಿದಾಗ ನಾವು ಕೇಳಬೇಕಾದ ಮೊದಲ ಪ್ರಶ್ನೆಯೆಂದರೆ ಈ ಇಳಿಕೆಯಾಗಿರುವ ಪ್ರತಿ ಗುಂಪಿನಲ್ಲಿಯೂ ಗಂಡು ಮತ್ತು ಹೆಣ್ಣು ಮಕ್ಕಳ ಪ್ರಮಾಣವೇನು. ಈ ಇಳಿಮುಖ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಿದೆಯೋ ಅಥವಾ ನಗರಗಳ ಅನುಕೂಲ ವಂಚಿತ ಪ್ರದೇಶಗಳಲ್ಲಿ ಹೆಚ್ಚು ಕೇಂದ್ರೀಕೃತವಾಗಿದೆಯೋ. ಇತರ ಹಿಂದುಳಿದ ವರ್ಗಗಳಲ್ಲಿ ಇಳಿಕೆಯ ಪ್ರಮಾಣ ಯಾವ ಜಾತಿಗಳಲ್ಲಿ ಹೆಚ್ಚಿದೆ. ಎಲ್ಲ ಸಾಮಾಜಿಕ ಗುಂಪುಗಳಲ್ಲಿಯೂ ಎಲ್ಲ ಹೆಣ್ಣು ಮಕ್ಕಳು ಮತ್ತು ಮಹಿಳೆಯರು ಪುರುಷ ಪ್ರಧಾನ ಮೌಲ್ಯಾಚರಣೆಗಳ ಹಿಡಿತದಿಂದ ಹೊರಬರಲು ಇಂದಿಗೂ ಸಾಧ್ಯವಾಗಿಲ್ಲದಿರುವುದರಿಂದ ಪರಿಶಿಷ್ಟ ಜಾತಿಗಳಲ್ಲಿ, ಇತರ ಹಿಂದುಳಿದ ವರ್ಗಗಳಲ್ಲಿ, ಅಲ್ಪಸಂಖ್ಯಾತರಲ್ಲಿ ಮತ್ತು ಅಂಗ ವಿಕಲರಲ್ಲಿ ಉಂಟಾಗಿರುವ ದಾಖಲಾತಿಯ ಇಳಿಮುಖವನ್ನು ಲಿಂಗ ವ್ಯವಸ್ಥೆಯ ಚೌಕಟ್ಟಿನಲ್ಲಿ ನೋಡಬೇಕು. ಏಕೆಂದರೆ ಶಿಕ್ಷಣ ಲಿಂಗ ಅಸಮಾನತೆಯನ್ನು ಎದುರಿಸಲು ಹಾಗೂ ಅವರನ್ನು ಆರ್ಥಿಕ ಸ್ವಾವಲಂಬನೆಯತ್ತ ಕೊಂಡೊಯ್ಯುವಲ್ಲಿ ಮಹಿಳೆಯರಿಗಿರುವ ಅತ್ಯಂತ ಪ್ರಬಲ ಸಾಧನ. ಅವರಿಗೆ ಉನ್ನತ ಶಿಕ್ಷಣವೇ ದೊರೆಯದಿದ್ದಾಗ ಉದ್ಯೋಗದ ಬಗ್ಗೆ ಚಿಂತಿಸುವುದಾದರೂ ಹೇಗೆ?

ಇನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಆಧಾರಿತ ಕೋರ್ಸುಗಳ ವಿಷಯವೂ ಅಷ್ಟೇ. ಭಾರತದಲ್ಲಿ ಈ ಕ್ಷೇತ್ರಗಳಲ್ಲಿ ಶೇಕಡಾ 43 ರಷ್ಟು ಪದವೀಧರರು ಮಹಿಳೆಯರೇ ಆಗಿದ್ದು, ಇದು ಜಗತ್ತಿನಲ್ಲೇ ಅತ್ಯಧಿಕವಾದ ಮಹಿಳಾ ಪ್ರಾತಿನಿಧ್ಯವಾಗಿದೆ. ಆದರೆ ಈ ಕ್ಷೇತ್ರಗಳ ಉದ್ಯೋಗಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಶೇಕಡಾ 14 ಮಾತ್ರ ಎಂದು ಅಧ್ಯಯನವೊಂದು ತಿಳಿಸಿದೆ. ದಿ ಲೈಫ್ ಆಫ್ ಸೈನ್ಸ್ ಎಂಬ ಸ್ತ್ರೀವಾದಿ ಮಾಧ್ಯಮ ಸಂಸ್ಥೆಯ ಪ್ರಕಾರ 'ನಾವು ಎಂದಿಗೂ ಮಹಿಳಾ ಪದವೀಧರರ ಸಂಖ್ಯೆಯನ್ನು ಅವರ ಸಶಕ್ತ ಸ್ಥಿತಿಯನ್ನು ಬಿಂಬಿಸುವ ಮಾಪನದಂಡವಾಗಿ ಪರಿಗಣಿಸಬಾರದು. ಅದು ಮಹಿಳೆಯರು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಾಧಿಸಿರುವ ಸಾಫಲ್ಯದ ಸಂಕೇತವೂ ಅಲ್ಲ. ಇವರಲ್ಲಿ ಎಷ್ಟು ಮಂದಿ ತಾವು ಗಳಿಸಿದ ಪದವಿಗಳನ್ನು ಉದ್ಯೋಗಗಳಾಗಿ ಪರಿವರ್ತಿಸಿಕೊಳ್ಳುವ ಶಕ್ತಿಯನ್ನು ಗಳಿಸಿಕೊಳ್ಳುತ್ತಾರೆ ಎನ್ನುವುದು ಮುಖ್ಯ'.

ಒಂದೆಡೆ ಹೆಚ್ಚುತ್ತಿರುವ ಮಹಿಳಾ ಪದವೀಧರರು, ಮತ್ತೊಂದೆಡೆ ಅವರ ಉದ್ಯೋಗ ಭಾಗವಹಿಸುವಿಕೆಯಲ್ಲಿ ಇಳಿಮುಖ– ಇದು ಇಂದು ಭಾರತದಲ್ಲಿ ನಾವು ಕಾಣುತ್ತಿರುವ ವೈರುಧ್ಯ. ಅವರು ಎಷ್ಟೇ ಮೇಲ್ಮಟ್ಟದ ಶಿಕ್ಷಣವನ್ನು ಪಡೆದಿರಲಿ ಬಹುತೇಕ ಮಹಿಳೆಯರು ಇಂದಿಗೂ ಲಿಂಗ ಪೂರ್ವಾಗ್ರಹಗಳು ಮತ್ತು ಸ್ಥಿರ ಮಾದರಿಗಳಿಂದ ಆವೃತ್ತವಾದ ಕೌಟುಂಬಿಕ ವ್ಯವಸ್ಥೆಯಿಂದ ಹೊರ ಬಂದಿಲ್ಲ. ಕೋವಿಡ್ ಕಾರಣದಿಂದಾಗಿ ಮನೆಯಿಂದಲೇ ಕೆಲಸವನ್ನು ನಿರ್ವಹಿಸಬೇಕೆಂಬ ವ್ಯವಸ್ಥೆ ಮಹಿಳೆಯರನ್ನು ಗೃಹ ಬಂಧಿಗಳನ್ನಾಗಿ ಮಾಡಿ ಅವರ ಕೆಲಸದ ಹೊರೆಯನ್ನು ಮತ್ತಷ್ಟು ಹೆಚ್ಚಿಸಿದ್ದರ ಫಲವಾಗಿ ಅವರಲ್ಲಿ ಅನೇಕರು ಕೆಲಸಕ್ಕೆ ಹಿಂದಿರುಗದಿದ್ದುದು, ವಿಶೇಷವಾಗಿ ನಗರ ಕೇಂದ್ರಿತ ಕೆಲಸಗಳಲ್ಲಿ ಅವರ ಸಂಖ್ಯೆ ಇಳಿಮುಖವಾಗಲು ಒಂದು ಕಾರಣವಾದರೆ, ಅವರು ಮಾಡುತ್ತಿದಂಥ ಅನೇಕ ಕೆಲಸಗಳು ಸ್ವಯಂಚಾಲಿತ ತಂತ್ರಜ್ಞಾನದ ಬಳಕೆಯಿಂದ ಅವರ ಕೈ ತಪ್ಪಿ ಹೋಗಿದ್ದು ಮತ್ತೊಂದು ಕಾರಣ.

ಉನ್ನತ ಶಿಕ್ಷಣವನ್ನು ಪಡೆದ ಮಹಿಳೆಯರಿಗೆ ತಮ್ಮ ಸಂಸ್ಥೆಗಳಲ್ಲಿ ಉದ್ಯೋಗವನ್ನು ನೀಡಿದರೆ ಅವರಿಗೆ ಮಾತೃತ್ವ ರಜೆ, ಶಿಶು ಪಾಲನಾ ವ್ಯವಸ್ಥೆ, ಹೊಂದಿಕೊಳ್ಳುವ ಸಮಯದ ಅನುಕೂಲ, ವಾಹನ ಹಾಗೂ ವಸತಿ ಸೌಕರ್ಯ– ಇವೇ ಮುಂತಾದ ವಿಶೇಷ ಸೌಲಭ್ಯಗಳನ್ನು ನೀಡಬೇಕಾಗಬಹುದೆಂಬ ಕಾರಣವನ್ನು ಮುಂದೊಡ್ಡಿ ಉದ್ಯೋಗ ಸಂಸ್ಥೆಗಳು ಅವರನ್ನು ಅವಕಾಶ ವಂಚಿತರನ್ನಾಗಿ ಮಾಡಿರುವ ಸಂದರ್ಭಗಳು ಸಾಕಷ್ಟಿವೆ. ಉದ್ಯೋಗ ಸಂಸ್ಥೆಗಳು ಸೃಷ್ಟಿಸುವ ಅನಾನುಕೂಲ ಪರಿಸ್ಥಿತಿಗಳು ಅಥವಾ ಕೌಟುಂಬಿಕ ಒತ್ತಡಗಳು ಅಥವಾ ಇವೆರಡೂ ಒಟ್ಟಿಗೆ ಸೇರಿ ಅನೇಕ ಮಹಿಳೆಯರು ಸಶಕ್ತ ಆರ್ಥಿಕ ಜೀವನವನ್ನು ನಡೆಸಲು ಅಡ್ಡಿಯನ್ನು ಒಡ್ಡಿವೆ.

ಮಹಿಳೆಯರು ಪಡೆದ ಉನ್ನತ ಶಿಕ್ಷಣ ಸಾರ್ಥಕವಾಗಬೇಕಾದರೆ ಅವರು ಕಾಲೇಜುಗಳಲ್ಲಿ ಓದುವಾಗಲೇ ಬೋಧನೆಯ ಜೊತೆ–ಜೊತೆಗೆ ಅವರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸಿ ತಮ್ಮ ಬದುಕಿನ ನಕ್ಷೆಯನ್ನು ತಾವೇ ಬರೆಯಲು ಅವರನ್ನು ಸಿದ್ಧ ಮಾಡಬೇಕು. ಅವರವರ ಆಸಕ್ತಿ ಕ್ಷೇತ್ರಗಳಲ್ಲಿ ಅವರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಅವರಲ್ಲಿ ಸ್ವಾವಲಂಬನೆ ಮತ್ತು ಸ್ವಾಭಿಮಾನಗಳೆರಡನ್ನೂ ಮೂಡಿಸುವಂಥ ಶಿಕ್ಷಣ ಕ್ರಮ ರೂಪಿತವಾದಾಗ ಮಾತ್ರ ಹೆಚ್ಚುತ್ತಿರುವ ದಾಖಲಾತಿ–ಹಾಜರಾತಿಗಳಿಗೆ ಅರ್ಥ ಬರುವುದು.



ಮೈಸೂರು ಜಿಲ್ಲೆ ವರುಣಾ ಹೋಬಳಿಯ ಭುಗತಗಳ್ಳಿಯಲ್ಲಿ ಗೋಪಾಲಗೌಡ ಶಾಂತವೇರಿ ಆಸ್ಪತ್ರೆಯ ಆವರಣದಲ್ಲಿನ ನ್ಯೂರೋಜೋನ್ ಸಹಯೋಗದಲ್ಲಿ ಅಸ್ತಿತ್ವ ಫೌಂಡೇಶನ್ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಏರ್ಪಡಿಸಲಾಗಿತ್ತು. ನ್ಯೂರೋಜೋನ್‌ನ ಡಾ.ಶುಶ್ರುತ್ ನೇತೃತ್ವದಲ್ಲಿ ತಜ್ಞವೈದ್ಯರು ಮೂಳೆ, ನ್ಯೂರೋ, ನೇತ್ರ ಸೇರಿದಂತೆ ಸಮಾನ್ಯ ಆರೋಗ್ಯ ತಪಾಸಣೆ ನಡೆಸಿದರು. ಚಿತ್ರದಲ್ಲಿ ನ್ಯೂರೋಜೋನ್‌ನ ನಿರ್ದೇಶಕಿ ಶ್ರೀಮತಿ ಧನ್ಯಾ ಶುಶ್ರುತ್, ಅಸ್ತಿತ್ವ ಫೌಂಡೇಶನ್ ಅಧ್ಯಕ್ಷರಾದ ಎಂ.ಜಿ.ಪ್ರಗತಿ, ಟ್ರಸ್ಟಿಗಳಾದ ಕೆ.ಎಸ್.ಮಹದೇವಪ್ರಸಾದ್, ಗಿರೀಶ್ ಭಾಗ, ರಂಗನಾಥ್, ಪಿಡಿಓ ಬಸವರಾಜು ಇತರರಿದ್ದಾರೆ. ನೂರಾರು ಮಂದಿ ತಪಾಸಣೆಗೊಳಗಾಗಿ, ಉಚಿತ ಔಷಧಿ ಪಡೆದುಕೊಂಡರು.

ಕಳೆದ ವರ್ಷ 614 ಕೋಟಿ ಸಂಗ್ರಹಿಸಿದ ಬಿಜೆಪಿ; ಕಾಂಗ್ರೆಸ್‌ಗೆ ಕೇವಲ 95 ಕೋಟಿ

ನವದೆಹಲಿ: ರಾಷ್ಟ್ರೀಯ ರಾಜಕೀಯ ಪಕ್ಷಗಳಿಗೆ ನೀಡುವ ದೇಣಿಗೆಯಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದ್ದು, ಕಳೆದ ವರ್ಷ ಆಡಳಿತರೂಢ ಬಿಜೆಪಿ ಬರೋಬ್ಬರಿ 614 ಕೋಟಿ ರೂಪಾಯಿ ಸಂಗ್ರಹಿಸುವ ಮೂಲಕ ಮೊದಲ ಸ್ಥಾನದಲ್ಲಿ. ಇನ್ನೂ ದೇಶದ ಅತ್ಯಂತ ಹಳೆಯ ಪಕ್ಷ ಕಾಂಗ್ರೆಸ್ ಕೇವಲ 95 ಕೋಟಿ ರೂ. ದೇಣಿಗೆ ಸಂಗ್ರಹ ಮಾಡಲಷ್ಟೇ ಶಕ್ತವಾಗಿದೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್(ಎಡಿಆರ್) ಹೇಳಿದೆ.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ವರದಿಯ ಪ್ರಕಾರ, 2021–22ರ ಆರ್ಥಿಕ ವರ್ಷದಲ್ಲಿ ರಾಷ್ಟ್ರೀಯ ಪಕ್ಷಗಳಿಗೆ ಒಟ್ಟು 187.03 ಕೋಟಿ ರೂಪಾಯಿ ದೇಣಿಗೆ ಪಡೆದಿದ್ದು, ಇದು ಹಿಂದಿನ ಹಣಕಾಸು ವರ್ಷಕ್ಕಿಂತ ಶೇ. 31.50 ರಷ್ಟು ಹೆಚ್ಚಳವಾಗಿದೆ.

ಬಿಜೆಪಿಯು ಒಟ್ಟು 4,957 ದೇಣಿಗೆಗಳ ಮೂಲಕ ಒಟ್ಟು 614.63 ಕೋಟಿ ರೂ. ಸಂಗ್ರಹ ಮಾಡಿರೋದಾಗಿ ಘೋಷಿಸಿದೆ. ಇನ್ನು ಕಾಂಗ್ರೆಸ್ ಪಕ್ಷವು 1,255 ದೇಣಿಗೆಗಳ ಮೂಲಕ ಒಟ್ಟು 95.46 ಕೋಟಿ ರೂ. ಸಂಗ್ರಹ ಮಾಡಿರೋದಾಗಿ ಘೋಷಿಸಿದೆ.

ಬಿಜೆಪಿಯು ಘೋಷಣೆ ಮಾಡಿರುವ ಒಟ್ಟು ದೇಣಿಗೆಯ ಪ್ರಮಾಣ ಕಾಂಗ್ರೆಸ್ ಪಕ್ಷಕ್ಕಿಂತಾ 3 ಪಟ್ಟು ಅಧಿಕ ಇರೋದು ಕಂಡು ಬರುತ್ತೆ ಇದಲ್ಲದೆ, ಎನ್‌ಸಿಪಿ, ಸಿಪಿಐ, ಸಿಪಿಎಂ, ಎನ್‌ಪಿಇಪಿ ಹಾಗೂ ಎಐಟಿಸಿ ಪಕ್ಷಗಳೂ ಕೂಡಾ ಅಲ್ಪ ಪ್ರಮಾಣದ ದೇಣಿಗೆ ಗಿಟ್ಟಿಸಿವೆ. ಬಹುಜನ ಸಮಾಜ ಪಕ್ಷ(ಬಿಎಸ್‌ಪಿ) ಕಳೆದ 16 ವರ್ಷಗಳಿಂದ ಘೋಷಿಸುತ್ತಿರುವಂತೆ 2021–22ರ ಅವಧಿಯಲ್ಲೂ ತನಗೆ 20,000 ರೂ.ಗಿಂತ ಮೇಲ್ಪಟ್ಟು ಯಾವೊಂದು ದೇಣಿಗೆಯೂ ಬಂದಿಲ್ಲ ಎಂದು ಘೋಷಿಸಿರುವುದಾಗಿ ಎಂದು ಎಡಿಆರ್ ವರದಿ ಮಾಡಿದೆ.

64 ಕ್ಷೇತ್ರಗಳ ಟಿಕೆಟ್ ಬೇಡಿಕೆ ಇಟ್ಟ ಕಾಂಗ್ರೆಸ್ ವೀರಶೈವ ಲಿಂಗಾಯತ ನಾಯಕರು!

ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆ ದಿನದಿಂದ ದಿನಕ್ಕೆ ರಂಗೇರುತ್ತಿದ್ದು, ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಶುರುವಾಗಿದೆ.ಈಗಾಗಲೇ ಜನತಾ ದಳ ತನ್ನ ಮೊದಲ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದೆ. ಈಗ ಕಾಂಗ್ರೆಸ್ ಕೂಡ ಹುರಿಯಾಳುಗಳನ್ನು ಅಖಾಡಕ್ಕಿಳಿಸಲು ತಯಾರಾಗಿದೆ. ಈಗಾಗಲೇ ಕಾಂಗ್ರೆಸ್ ಸ್ಕ್ರೀನಿಂಗ್ ಕಮಿಟಿ 106 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಫೈನಲ್ ಮಾಡಿದೆ ಎನ್ನುವ ಮಾಹಿತಿ ಇದೆ. ಇನ್ನೊಂದೆಡೆ ವೀರಶೈವ ಲಿಂಗಾಯತ ಸಮುದಾಯದ ಕಾಂಗ್ರೆಸ್ ನಾಯಕರು ಸಭೆ ಮಾಡಿದ್ದು, 68 ಕ್ಷೇತ್ರಗಳಲ್ಲಿ ತಮ್ಮ ಸಮುದಾಯದ ಅಭ್ಯರ್ಥಿಗೆ ಟಿಕೆಟ್ ನೀಡಬೇಕೆಂದು ಕ್ಷೇತ್ರಗಳ ಪಟ್ಟಿ ಮಾಡಿದೆ.

ನಿನ್ನೆ(ಫೆ.15)ವೀರಶೈವ ಲಿಂಗಾಯತ ಸಮುದಾಯದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ 68 ಕ್ಷೇತ್ರಗಳ ಪಟ್ಟಿ ಮಾಡಿದೆ. ಕೆಟಗರಿ A(ಹಾಲಿ ಲಿಂಗಾಯತ ಶಾಸಕರು), B (ಕಳೆದ ಬಾರಿ ಪರಾಭವಗೊಂಡ ಲಿಂಗಾಯತ ಅಭ್ಯರ್ಥಿಗಳು), C (ಹೊಸದಾಗಿ ಟಿಕೆಟ್ ಬಯಸುತ್ತಿರುವ ಲಿಂಗಾಯತ ಆಕಾಂಕ್ಷಿಗಳು) ಹೀಗೆ ಮೂರು ಕೆಟಗರಿಯಲ್ಲಿ ಲಿಂಗಾಯತ ಅಭ್ಯರ್ಥಿಗಳ ಪಟ್ಟಿ ಕೈ ಲಿಂಗಾಯತ ನಾಯಕರು ಸಿದ್ಧಪಡಿಸಿದ್ದು, 68ರ ಪೈಕಿ 64 ಕ್ಷೇತ್ರಗಳ ಲಿಸ್ಟ್ ಮಾಡಿ ಸ್ಕ್ರೀನಿಂಗ್ ಕಮಿಟಿಗೆ ನೀಡಿದೆ. ಅಲ್ಲದೇ ಈ ಎಲ್ಲಾ ಕ್ಷೇತ್ರಗಳಲ್ಲಿ ವೀರಶೈವ ಲಿಂಗಾಯತ ಸಮುದಾಯದ ವ್ಯಕ್ತಿಗೆ ಟಿಕೆಟ್ ನೀಡಬೇಕೆಂದು ಮನವಿ ಮಾಡಿದೆ.

ಹಾಲಿ ಶಾಸಕರ ಕ್ಷೇತ್ರಗಳು: ದಾವಣಗೆರೆ ದಕ್ಷಿಣ, ಭದ್ರಾವತಿ, ಬೆಳಗಾವಿ ಗ್ರಾಮೀಣ, ಚಿಕ್ಕೋಡಿ ಸದಲಗಾ, ಬೈಲಹೊಂಗಲ. ಬಸವನ ಬಾಗೇವಾಡಿ, ಬಬಲೇಶ್ವರ, ಇಂಡಿ, ಜಮಖಂಡಿ, ಅಫ್ಜಲ್ಪುರ, ಶಹಾಪುರ, ಭಾಲ್ಕಿ, ಹುಮ್ನಾಬಾದ್, ಕುಷ್ಟಗಿ.

ಪರಾಭವಗೊಂಡಿರುವ ಅಭ್ಯರ್ಥಿಗಳ ಕ್ಷೇತ್ರಗಳು: ದಾಣಗೆರೆ ಉತ್ತರ, ಚಿತ್ರದುರ್ಗ, ತಿಪಟೂರು, ಬೆಳಗಾವಿ ಉತ್ತರ, ಕಾಗವಾಡ, ಕಿತ್ತೂರು, ರಾಮದುರ್ಗ, ಧಾರವಾಡ, ಮುದ್ದೇಬಿಹಾಳ, ಸಿಂಧಗಿ, ಬಾಗಲಕೋಟೆ, ಹುನಗುಂದ, ಬೀಳಗಿ, ರೋಣ, ಬ್ಯಾಡಗಿ, ಹಿರೆಕೆರೂರು, ಸೇಡಂ, ಆಳಂದ, ಬೀದರ್ ದಕ್ಷಿಣ, ಸಿಂಧನೂರು, ಯಲಬುರ್ಗಾ

ಹೊಸ ಕ್ಷೇತ್ರಗಳು:ರಾಜಾಜಿನಗರ, ಚಿಕ್ಕಪೇಟೆ, ತುಮಕೂರು ಸಿಟಿ, ಚನ್ನಗಿರಿ, ಶಿವಮೊಗ್ಗ, ಶಿಕಾರಿಪುರ, ಸಾಗರ ಕೃಷ್ಣ ರಾಜ (ಮೈಸೂರು), ಗುಂಡ್ಲುಪೇಟೆ, ಮಡಿಕೇರಿ, ಅರಸೀಕೆರೆ, ಬೇಲೂರು, ಚಿಕ್ಕಮಗಳೂರು, ತರೀಕೆರೆ, ಕಡೂರು, ಅಥಣಿ, ಸವದತ್ತಿ, ಅರಬಾವಿ, ಗೋಕಾಕ್. 20. ಹುಬ್ಬಳ್ಳಿ–ಧಾರವಾಡ ಕೇಂದ್ರ. ಹು–ಧಾ ಪಶ್ಚಿಮ, ಕಲಘಟಗಿ, ದೇವರ ಹಿಪ್ಪರಗಿ, ತೇರದಾಳ, ನರಗುಂದ, ಶಿಗ್ಗಾವಿ, ರಾಣೆಬೆನ್ನೂರು, ಕಲಬುರಗಿ ದಕ್ಷಿಣ, ಯಾದಗಿರಿ.

ಫೆ.20ರಂದು ಶೃಂಗೇರಿ ಮಠಕ್ಕೆ ಬಿಜೆಪಿ ನಡ್ಡಾ ಭೇಟಿ

ಬೆಂಗಳೂರು: ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ರಾಜ್ಯಕ್ಕೆ ಬಿಜೆಪಿ ಹೈಕಮಾಂಡ್ ನಾಯಕರು ಹೆಚ್ಚು ಭೇಟಿ ನೀಡುತ್ತಿದ್ದು, ಬಿಜೆಪಿ ರಾಷ್ಟ್ರಾಧ್ಯಕ್ಷ ಜೆಪಿ ನಡ್ಡಾ ಫೆ.20 ರಂದು ಶೃಂಗೇರಿ ಮಠಕ್ಕೆ ಭೇಟಿ ನೀಡಲಿದ್ದಾರೆ. ಫೆ.20 ರಂದು ರಾತ್ರಿ ಶೃಂಗೇರಿಯಲ್ಲಿ ತಂಗಲಿರುವ ಜೆಪಿ ನಡ್ಡಾ, ಶಾರದಾಂಬೆಯ ದರ್ಶನದ ಬಳಿಕ ಜಗದ್ಗುರುಗಳನ್ನು ಭೇಟಿ ಮಾಡಲಿದ್ದಾರೆ. ಜಗದ್ಗುರುಗಳ ಭೇಟಿಗೆ ಜೆಪಿ ನಡ್ಡಾ 20 ನಿಮಿಷಗಳ ಕಾಲಾವಕಾಶ ಕೋರಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ — ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೇಲ್ಸ್ ಎಗ್ಸಿಕ್ಯುಟಿವ್ ಬೇಕಾಗಿದ್ದಾರೆ
ಶೋರೂಂನಲ್ಲಿ ಕೆಲಸ ಮಾಡಲು ಮತ್ತು ಮಾರ್ಕೆಟಿಂಗ್‌ಗೆ ಹುಡುಗ/ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ
9886409722

ಶ್ರೀ ಚಾಮುಂಡೇಶ್ವರಿ ಸ್ಟೋನ್ ಕ್ರಷರ್ ಮತ್ತು ಎಂ ಸ್ಯಾಂಡ್ ಇಂಡಸ್ಟ್ರೀಸ್
179/1, ಹಿರಿಕಾಟಿ, ಗುಂಡ್ಲುಪೇಟೆ ತಾಲ್ಲೂಕು, ನಮ್ಮಲ್ಲಿ ಉತ್ತಮವಾದ ಗುಣಮಟ್ಟದ M.Sand, 20 mm, 40 mm ಜಲ್ಲಿ ದೊರೆಯುತ್ತದೆ. ಟಿಪ್ಪರ್ ಡ್ರೈವರ್‌ಗಳು ಬೇಕಾಗಿದ್ದಾರೆ. ಊಟ, ವಸತಿ ದೊರೆಯುತ್ತದೆ.
9448187125

ಬೇಕಾಗಿದ್ದಾರೆ
Cook, Supplier, Cleaner, Manager, Cashier, ಗಾರ್ಡನ್ Restaurant ಗೆ ಬೇಕಾಗಿದ್ದಾರೆ. Contact:
8618009566

airtel WANTED
Sales Executive
Salary : 10,000/- + Incentive, Contact:
9591501305

SITE FOR SALE MUDA APPROVED
Ready for Registration 30x40, 40x60, 20x30, Srirampura Ring Road, Srinagara Bank Side. Contact:
8050345574

ನಿಮ್ಮ ಹೊಲಿಗೆ ಯಂತ್ರ ಕೆಟ್ಟಿದೆಯೇ?
ನಮ್ಮಲ್ಲಿ ಎಲ್ಲಾ ತರಹದ ಹೊಲಿಗೆ ಯಂತ್ರಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. Home Service also available ಇಂದೇ ಸಂಪರ್ಕಿಸಿ: ಗಾಂಧಿ ಇಂಟರ್ ನ್ಯಾಷನಲ್ #22/2, ಚಂದ್ರಗುಪ್ತ ರಸ್ತೆ, ಸುಬರ್ಬ್ ಬಸ್ ಸ್ಟ್ಯಾಂಡ್ ಹತ್ತಿರ, ಮೈಸೂರು
6360737581 / 9620486665 0821-2591111

40x60 ಸೈಟು @ Rs. 34 ಲಕ್ಷ
MUDA Approved Layout ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ, ಲಾಲ್ ಬಹದ್ದೂರ್ ಶಾಸ್ತ್ರಿ ನಗರದ ನಂತರ, ಚಾಮುಂಡಿ ಬೆಟ್ಟದ ಹಿಂಭಾಗ.
9538583377

WANTED Accountant (Male)
8548880010

ಬೇಕಾಗಿದ್ದಾರೆ
ಮೇಟಗಳ್ಳಿ ಪ್ರದೇಶಕ್ಕೆ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. (8 Hours Duty) ಎಸ್.ಎಸ್.ಎಲ್.ಸಿ ಪಾಸ್ ಅಥವಾ ಫೇಲ್, ದೂರವಾಣಿ ಸಂಖ್ಯೆ:
9538886326 / 9538886328 9035269781

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ನಿವೃತ್ತ ನೌಕರರಿಗೆ ಉದ್ಯೋಗ
ವಿದ್ಯಾರ್ಹತೆ SSLC, PUC, Degree, ವೇತನ 10,000/–, 20,000/–, 30,000/–, ಸಂದರ್ಶನಕ್ಕೆ ಹಾಜರು ಪಡಿಸಬೇಕಾದ ದಾಖಲೆಗಳು, 1) ವಿದ್ಯಾರ್ಹತೆ ಅಂಕ ಪತ್ರ, 2) ಆಧಾರ್ ಕಾರ್ಡ್, 3) ಪಾನ್ ಕಾರ್ಡ್, 4) ಬ್ಯಾಂಕ್ ಪಾಸ್ ಪುಸ್ತಕ, 5) ಪಾಸ್ ಪೋರ್ಟ್ ಅಳತೆ ಪೋಟೋ. ಸಂಪರ್ಕಿಸಿ:
9886647852

WANTED Telecallers
(Fresher/Experience). Data Entry Operators (Male & Female) Diploma ITI, Welders, Fitters, Supervisor, BE -Civil, Marketing Managers, House Keeping. Call: Vrunda (HR)
9035560544

ಟೆಲಿಕಾಮ್ ಲೇಔಟ್ 30x40 ಸೈಟು N/F @ Rs. 25 ಲಕ್ಷ
ತಕ್ಷಣ ಮನೆ ಕಟ್ಟಬಹುದು, ಬ್ಯಾಂಕ್ ಲೋನ್ ಲಭ್ಯ, ಇಲವಾಲ ಬಸ್ಸು ನಿಲ್ದಾಣ ಹಿಂಭಾಗ, ಹುಣಸೂರು ರೋಡ್, ಮೈಸೂರು
9538583377

ಬೇಕಾಗಿದ್ದಾರೆ
ಕೊರಿಯರ್ ಸಂಸ್ಥೆಯಲ್ಲಿ ಖಾಲಿ ಇರುವ ಈ ಹುದ್ದೆಗೆ ಬೇಕಾಗಿದ್ದಾರೆ.
1) ಮ್ಯಾನೇಜರ್
2) ಆಫೀಸ್ ಇನ್‌ಚಾರ್ಜ್
3) ಡೆಲಿವರಿ ಬಾಯ್ಸ್
4) ಬೆಳಿಗ್ಗೆ 8am to 1pm ಮತ್ತು 6pm to 9 pm ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ:
9449870909
ಸಮಯ : 10.30 to 5.30

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

WANTED
Delivery Boys (with Own Vehicle)
8105674110

FOR RENT
500 Sq ft and 200 Sq ft 1st Floor / Office Purpose For Rent. New Kantharaja Urs Main Road, Chamaraja Mohalla /Puram, Mysore - 570004. Contact No / Whatsapp:
9916373827

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಸೇಲ್ ಮ್ಯಾನ್ ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಗಾಂಧಿ ಸರ್ಕಲ್ ಸಿಟಿ ಬಸ್ ಸ್ಟಾಂಡ್ ಹತ್ತಿರ
9686667762 9986731199

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಬಾಡಿಗೆಗೆ
ಮೈಸೂರು – ಮಂಗಳೂರು ರಸ್ತೆಯಲ್ಲಿ ಸುಳ್ಯದ ಸಮೀಪ ನಿರ್ಮಾಣ ಹಂತದಲ್ಲಿರುವ 3400 ಚದುರ ಅಡಿ ರೆಸ್ಟೋರೆಂಟ್ ಉದ್ಯಮ ನಡೆಸಲು ಯೋಗ್ಯವಾದ ವಿಶಾಲವಾದ ವಾಹನ ಪಾರ್ಕಿಂಗ್ ಸೌಲಭ್ಯದೊಂದಿಗೆ ಬಾಡಿಗೆಗೆ ಲಭ್ಯವಿದೆ.
9008395007 / 9008394777

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ 12,000 ದಿಂದ 18,000) (ESI, PF ಸೌಲಭ್ಯ ಇರುತ್ತದೆ.)
7760043596 / 7892480649

ತಕ್ಷಣ ಬೇಕಾಗಿದ್ದಾರೆ
(AAL) ಹೂಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ITI, Any Trades ವಯಸ್ಸು:– 18 ರಿಂದ 30 ವರೆಗೆ, ಹುಡುಗರು.
7019380847 / 7090309148 8105650101

ಕಳೆದಿದೆ
ನಂ. 87, 8ನೇ ಮೇನ್, ವಿನಾಯಕ ನಗರ, ಜಯಲಕ್ಷ್ಮಿಪುರಂ, ಮೈಸೂರು – 570 012. ಮನೆಯ ಮಂಜೂರಾತಿ ಪತ್ರ ಕಳೆದು ಹೋಗಿದೆ ಸಿಕ್ಕಿದವರು ಈ ಕಳೆಕಂಡ ದೂರವಾಣಿಗೆ ಸಂಪರ್ಕಿಸಲು ಕೋರಿದೆ.
ರಮೇಶ್ ಕುಮಾರ್
Ph: 99161 61507

ತ್ವರೆ ಮಾಡಿ
ನಿಮ್ಮ ಕನಸಿನ ಮನೆಯನ್ನು ಬುಕ್ ಮಾಡಿ
20X30 — ಬುಕಿಂಗ್ ಮೊತ್ತ 15.50 ಲಕ್ಷ
30X40 — ಬುಕಿಂಗ್ ಮೊತ್ತ 25.50 ಲಕ್ಷ
30X50 — ಬುಕಿಂಗ್ ಮೊತ್ತ 37.50 ಲಕ್ಷ
ಬಾಕಿ ಮೊತ್ತ ಸುಲಭ ಕಂತುಗಳಲ್ಲಿ ಬ್ಯಾಂಕ್ ಲೋನ್ ಲಭ್ಯವಿದೆ.
ಮೈಸೂರಿನ ಪ್ರಮುಖ ಸ್ಥಳಗಳಲ್ಲಿ
98800 65122 / 77956 09173

ಶಿವರಾತ್ರಿ ಜಾತ್ರಾ ಮಹೋತ್ಸವ
ಶ್ರೀ ನಾಗಲಿಂಗೇಶ್ವರ ಭೋಗೇಶ್ವರ ಸಪ್ತ ಮಾತೃಕಾ ಹಿರಿದೇವಮ್ಮ ದೇವಾಲಯ ಬೋಗಾದಿ ರಿಂಗ್ ರಸ್ತೆ, ಮೈಸೂರು–26
ಫೆ. 18–02–2023 ನೇ ಶನಿವಾರ ಬೆಳಿಗ್ಗೆ 5 ಗಂಟೆಯಿಂದ ಮಧ್ಯರಾತ್ರಿ 3 ಗಂಟೆಯವರೆಗೆ 4 ಯಾಮದ ವಿಶೇಷ ಪೂಜೆಗಳು ಹಾಗೂ ಬೆಳಿಗ್ಗೆ 6 ರಿಂದ ರಾತ್ರಿ 12 ಗಂಟೆವರೆಗೆ ಪ್ರಸಾದ ವಿನಿಯೋಗವಿರುತ್ತದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ. ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವಿರುತ್ತದೆ.

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಜಮೀನು ಮಾರಾಟಕ್ಕಿದೆ
ಪಿರಿಯಾಪಟ್ಟಣದಿಂದ 2 ಕಿಲೋಮೀಟರ್ ಕುಶಾಲನಗರ ಮಾರ್ಗದಲ್ಲಿ ಎರಡು ಎಕರೆ ಅಡಿಕೆ ತೆಂಗು ಸೇರಿದಂತೆ ಒಟ್ಟು 10 ಎಕರೆ ಜಮೀನು, ಮಾರಾಟಕ್ಕಿದೆ. ಆಸಕ್ತರು ತಕ್ಷಣವೇ ಸಂಪರ್ಕಿಸುವುದು.
9448165451

ಹೋಂನರ್ಸಿಂಗ್ ಕೆಲಸ
ವಯಸ್ಸಾದವರನ್ನು, ರೋಗಿಗಳನ್ನು ನೋಡಿಕೊಳ್ಳಲು ಅನುಭವವಿರುವ, ಇಲ್ಲದಿರುವ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ತಕ್ಷಣ ಸಂಪರ್ಕಿಸಿ: ಊಟ, ವಸತಿ, ಉಚಿತದೊಂದಿಗೆ ಆಕರ್ಷಕ ಸಂಬಳ ಇರುತ್ತದೆ. (ಮೊದಲು ಬಂದವರಿಗೆ ಆದ್ಯತೆ) (ಸರ್ಕಾರಿ ನೋಂದಾಯಿತ ಸಂಸ್ಥೆ)
9035113222

SITE FOR SALE
30x40 W/F Kuberananda Sagara Layout, near to Main Road, Yelawala. Rs. 2200 / Sq.ft. Contact:
Mob: 7338309828

Premium Residential Layout Vinyas Nanda Gokula
DTCP Approved. Ready for Registration. Attached to NH 275, Near Varuna, T.N. Pura Road, Mysore. 30x40 - Odd sites.
9980628991, 9740484094

DOCUMENT LOST
Dhananjaya K, No. 3147, Lakshmikantha Nagara, 1st Stage, Mysore-570 017, I lost MUDA khatha letter No. 2013, Page 5, Book 6, date 20-09-2000 of M. Mohan near Ramaswamy Circle. Finders please contact:
Mob: 8123287671

WANTED
Electrical Field Supervisor. Qualification: Diploma / BE in Electrical Engineering (Male only). 2 years + experience in handling ESCOM (GK, WS and Linkline works). Security Guard Supervisor (Male). (Min 2-3 years exp. in Security Agency). Security Guard (Male) (Min 1 year exp. as Security Guard). Contact:
6366366388, 7337888385
Call between 10 am to 6 pm.
Mail your CV to: essplmd@gmail.com

HOUSE FOR SALE
3,750 sq.ft., 4 BHK, Vani Vilas Layout, Viayanagar 2nd Stage, Mysore.
9900121333, 9538341333

WANTED
Female Staff (ಮಹಿಳೆಯರು) Diabetic Clinic @ K D Road.
9035159747

SHOPS / GODOWN AVAILABLE FOR RENT
at No.137B, Prashantha Chaya Layout. (After Police Layout) Janthagalli, Mysore.
ಅಂಗಡಿ /ಗೋಡೌನ್ ಬಾಡಿಗೆಗೆ ದೊರೆಯುತ್ತದೆ.
ನಂ.137ಬಿ, ಪ್ರಶಾಂತ ಛಾಯ ಬಡಾವಣೆ, (ಪೊಲೀಸ್ ಬಡಾವಣೆಯ ನಂತರ) ಜಂತಗಳ್ಳಿ, ಮೈಸೂರು.
9591250250 / 9448708278

SITE FOR SALE
MUDA allotted 30x40 site for sale at Vijayanagar 4th Stage, First Phase, near Ring Road (South facing). Brokers excuse. Contact:
Mob: 6364322628

ಕಳೆದಿದೆ
ಪ್ರೇಮಲತಾ ಸಿ.ಎಂ., ಮನೆ ನಂ. 2937/ಬಿ, ವಿಜಯನಗರ 2ನೇ ಹಂತ, ಪೋಲೀಸ್ ಸ್ಟೇಷನ್ ರಸ್ತೆ, ಮೈಸೂರು–570 017, ಈ ಸ್ವತ್ತಿಗೆ ಸಂಬಂಧಿಸಿದ ನಿವೇಶನ ಖಾತಾ ಪತ್ರ ಮತ್ತು ಕಂದಾಯ ಪತ್ರ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 8095266462

WANTED
MARKETING MANAGER
Edu: Any Degree. Exp: Minimum 1 to 2 years experience. Salary: Good salary + incentive + TA & DA.
Furniture Fitter and Helper.
Sri Sairam Furnitures
Vijayanagar 2nd Stage, Mysore.
0821-4286890, 8217411158

Shop / Showroom For Rent
1600 sq.ft. (51x31) G/F Commercial space for rent at Manandavadi (HD Kote) Road, Srirampura 2nd Stage, Mysore, near Nandi Petrol Pump. Contact:
Mob: 9845728638

ಶುಭಲಗ್ನಂ.ಕಾಂ
ಎಲ್ಲಾ ಜಾತಿಯ ಎಲ್ಲಾ ವಯಸ್ಸಿನ, ಎಲ್ಲಾ ವಿದ್ಯಾವಂತ ವಧುವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ: ಡಾ. ಗುರೂಜಿ ಮೈಸೂರು
9448229184, 7899625268
shubalagnam.com

ಮೂಲ ಪತ್ರ ಕಳೆದಿದೆ
ಸಿ.ಹೊನ್ನಯ್ಯರವರ ಪತ್ನಿಯಾದ ನಾನು ಪರಿಮಳ.ಎಸ್ ನಂ.934, 5 ನೇ ಕ್ರಾಸ್, ಅಶೋಕ ರಸ್ತೆ, ಕುಂಬಾರಗೇರಿ, ಮೈಸೂರು ಇಲ್ಲಿ ವಾಸವಿದ್ದು, ನನ್ನ ಹೆಸರಿಗೆ ಖಾತೆ ಬದಲಾವಣೆ ಆಗಿರುವ ಮೂಲಪತ್ರವನ್ನು ಜೆರಾಕ್ಸ್ ಮಾಡಿಸುವ ಸಮಯದಲ್ಲಿ ಕಳೆದುಕೊಂಡಿದ್ದು, ಸದರಿ ದಾನಪತ್ರದ ಮೂಲ ಪ್ರತಿಯು ಕಳೆದಿದ್ದು, ಸಿಕ್ಕವರು ಸಂಪರ್ಕಿಸಿ:
9353075069

HOUSE FOR SALE
30x20 House for Sale Srirampura 2nd Stage, BEML Duplex 3BHK Fully Furnished
9900251194 / 9738884777

ತಕ್ಷಣ ಬೇಕಾಗಿದ್ದಾರೆ
ಕಡಕೊಳ TVS ಫ್ಯಾಕ್ಟರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & ಮೇಲ್ಪಟ್ಟು. ಸಂಬಳ: 15,500 (8 hours). ESI ಮತ್ತು PF. ಊಟ, ತಿಂಡಿ, ವಸತಿ ಸೌಲಭ್ಯ ಇರುತ್ತದೆ. ಸಂಪರ್ಕಿಸಿ:
9620777819, 9620667819

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 30 ವರ್ಷ. ವಿದ್ಯಾರ್ಹತೆ: 7 ರಿಂದ PUC ಮತ್ತು ITI. ರಿಯಾಯಿತಿ ದರದಲ್ಲಿ ಊಟ ಮತ್ತು ರೂಮುಗಳನ್ನು ನೀಡಲಾಗುತ್ತದೆ. ಸಂಪರ್ಕಿಸಿ:
Mob: 9035381989

FOR RENT
1) 2 BHK House - E/F, GF, semi furnished, newly built as per Vaastu.
2) Room - E/F, SF, furnished
3) Shop - 120 sq.ft., S/F, GF.
Ramakrishnanagar, Mysore. Contact:
Mob: 9008182538

MUDA APPROVED SITES FOR SALE
Just Rs. 29 Lakhs onwards.
Off Gaddige Road, K. Hemmanahalli, Mysore.
Mob: 9902926006

ಬೇಕಾಗಿದ್ದಾರೆ
ಆಫೀಸ್ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಂಬಳ 8000-10000/-
Ph.9535112233

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ, ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ, ವಿದ್ಯಾರ್ಹತೆ: ಕನಿಷ್ಠ ಓದು / ಬರಹ ಗೊತ್ತಿರಬೇಕು. ವೇತನ :– 12,818+ESI & PF ಮತ್ತು ಉಚಿತ ಊಟದ ವ್ಯವಸ್ಥೆ. ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್ ಬ್ಯಾಂಕ್ ಪಾಸ್ ಬುಕ್, ಪೋಟೋ – 06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502 / 9035269781

FOR RENT
30x40 Duplex, 3 Bedroom with attached, Solar, Car Parking at Somanath Nagar, Mysore. Contact:
9980569329

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಹೆಸರು ಬದಲಾವಣೆ
ದಿವ್ಯಶ್ರೀ ಕೆ., ಆದ ನಾನು ನಂ. 34/ಎ, 3ನೇ ಕ್ರಾಸ್, 'ಇ' ಅಂಡ್ 'ಎಫ್' ಬ್ಲಾಕ್, ರಾಮಕೃಷ್ಣನಗರ, ಮೈಸೂರು–570 023, ಇಲ್ಲಿ ವಾಸವಿದ್ದು, ನನ್ನ ಮಗನ ಹೆಸರು ಅದಿತ್. ಕೆ (AADIT. K) ಎಂದು ಜನನ ಪ್ರಮಾಣ ಪತ್ರದಲ್ಲಿ ಹಾಗೂ ಅದಿತ್ ಕೆ. ಗೌಡ (AADIT K. GOWDA) ಎಂಬುದಾಗಿ ಶಾಲಾ ದಾಖಲಾತಿಯಲ್ಲಿ ನಮೂದಾಗಿರುತ್ತದೆ. ಈಗ ನನ್ನ ಮಗನ ಹೆಸರನ್ನು ಅದಿತ್ ಗೌಡ (AADIT GOWDA) ಎಂದು ಬದಲಾವಣೆ ಮಾಡಿಕೊಂಡಿರುತ್ತೇವೆ ಎಂದು ನೋಟರಿ ಎಸ್. ಕಮಲ ರವರ ಎದುರು ಪ್ರಮಾಣೀಕರಿಸಿರುತ್ತೇವೆ.
ಸಹಿ/– ದಿವ್ಯಶ್ರೀ ಕೆ.

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರಿ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇಕೆರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

HOUSE FOR RENT
2 BHK, East face, 2 bath, car parking / two wheeler.
2 Shops $10x12^1/_2$.
No. 266, 7th Cross Corner, J.C. Nagar, Mysuru.
9591273918, 8660161540

ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿಕೊಡಲಾಗುತ್ತದೆ. ಒಂದು ಚದರಕ್ಕೆ 1,80,000/–
*ಷರತ್ತು ಅನ್ವಯ
ಸ್ವಾಮಿ ಎಂ., ಸಿವಿಲ್ ಕಂಟ್ರಾಕ್ಟರ್
9945442361, 9380885787

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
23/2:– ದೆಹಲಿ, ವೈಷ್ಣೋದೇವಿ, ಅಮೃತ್‌ಸರ್, ಧರ್ಮಶಾಲಾ, ಚಾಮುಂಡಾ ದೇವಿ, ಕಾಂಗ್ರಾ ದೇವಿ, ಜ್ವಾಲಾ ದೇವಿ, ಚಿಂತಪೂರ್ಣಿ ದೇವಿ ಇತ್ಯಾದಿ.
27/3 ಕಾಶಿ, ಗಯಾ, ಬುದ್ಧಗಯಾ, ಪ್ರಯಾಗರಾಜ್, ಅಯೋಧ್ಯೆ.
6/4 :– ನೇಪಾಳ ಮುಕ್ತಿನಾಥ, ಪಶುಪತಿನಾಥ.
11/3:– ಪುರಿ ಜಗನ್ನಾಥ, ಕೋಣಾರ್ಕ್ ಸೂರ್ಯ ದೇವಸ್ಥಾನ, ಭುವನೇಶ್ವರ್, ಚಂದ್ರಭಾಗ ಬೀಚ್.
9591017782 / 9964527782

ಕಾರ್ಯಸಿದ್ಧಿ ಜ್ಯೋತಿಷ್ಯರು ಕಾಳಿದೇವಿ ಆರಾಧಕರು
ಮನೆಯಲ್ಲಿ ಅಶಾಂತಿ, ಮದುವೆಯಲ್ಲಿ ವಿಳಂಬ, ವ್ಯಾಪಾರ ವ್ಯವಹಾರಗಳಲ್ಲಿ ತೊಂದರೆ, ಪ್ರೀತಿ ಪ್ರೇಮ ವಿಚಾರ ಇನ್ನು ಹಲವಾರು ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತಾರೆ. **15 ವರ್ಷಕ್ಕೂ ಹೆಚ್ಚು ಅನುಭವವುಳ್ಳ ಜ್ಯೋತಿಷ್ಯರು**, ಮೈಸೂರು. ಸಂಪರ್ಕಿಸಿ:
9686487402

ಸಂಪ್ ಟ್ಯಾಂಕ್ ಕ್ಲೀನಿಂಗ್ ಕೆಲಸಕ್ಕೆ ಹೆಲ್ಪರ್ ಬೇಕಾಗಿದ್ದಾರೆ.
Mob: 8147446842

ಕಲಿಯಿರಿ 500/– ರೂ ಮಾತ್ರ
MS Office, MS Excel, Photo Editing, Tally Prime, Tally GST, Corel Draw, Video Editing, Typing Class

C & C++, Hardware, CC Camera, Networking, CTTC, Java B
T&C apply.
Call: 7760240575

SITE FOR SALE
30x40 - E/F ; 40x60 - N/F
40x60 - W/F ; 30x40 - W/F
Near Ring Road, Opposite University Layout.
30x40 - Bannur Road
40x60 - Near Varuna.
Contact: **9900372792**

Vision Rent, Lease, Sale flats
2 BHK F/F/G2 car parking, Saraswahipuram @ new house 2700 sq.ft., 3 BHK G & First Floor. Srirampura Ring Road New F/F. high end 3 BHK rent house site sale. 2400 sq. East Somanathanagar, Vijayanagar 4th Stage, 2nd Phase. 40x60 East. Contact:
Mob: 9900794922

WANTED
1) Internal Auditor (Accounts Background)
2) Computer Operator
Attractive salary, ESI and EPF
Contact: SWSS
17/2, 5th Main, 8th Cross, Saraswathipuram, Mysore.
9164608888 & 9844299888

ಶ್ರೀ ರಾಘವೇಂದ್ರ ಬಿಲ್ಡಿಂಗ್ ಕನ್ಸ್ಟ್ರಕ್ಷನ್
ಪ್ಲಾನ್ ಅಪ್ರೂವಲ್ ಹಾಗೂ 3ಡಿ ಎಲಿವೇಶನ್ ಸಹಿತ ಮಾಡಿಕೊಡುತ್ತೇವೆ. ಯಾವುದೇ ರೀತಿಯ ಅಲ್ಟ್ರೇಶನ್ ಕೆಲಸಗಳು ಸಹಾ ಮಾಡಿಕೊಡುತ್ತೇವೆ.
ಆಫೀಸ್:– ಜೆ.ಪಿ.ನಗರ, ಮೈಸೂರು.
8749004423 9481738565

ಬೇಕಾಗಿದ್ದಾರೆ
Ladies PG ಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಕಡ್ಡಾಯವಾಗಿ PG ಯಲ್ಲಿಯೇ ಉಳಿದುಕೊಳ್ಳಬೇಕು. ಊಟ ವಸತಿ ದೊರೆಯುತ್ತದೆ. (ಸಂಬಳ: 9,000 ರಿಂದ 9,500)
9972567537 / 9035004605

REQUIRED
PHARMACIST with atleast some basic knowledge @ Hebbal / Bannimantap for Generic Medical Shop. Contact:
7760605040, 9343983533

ಉದ್ಯೋಗವಕಾಶ
ಹೌಸಿಂಗ್ ಲೋನ್ ಸಂಸ್ಥೆಯಲ್ಲಿ ಕೆಲಸ ಮಾಡಲು PUC / Degree ಆಗಿರುವ Experience ಇರುವ ಅಭ್ಯರ್ಥಿಗಳು ಮೈಸೂರು, ಮಂಡ್ಯ, ಮದ್ದೂರು ಸುತ್ತಮುತ್ತ ಇರುವವರು (ಸಂಬಳ 15,000 – 20,000 ವರೆಗೆ) ಬೇಕಾಗಿದ್ದಾರೆ. ಸಂಪರ್ಕಿಸಿ. ಬ್ರಾಂಚ್ ಮ್ಯಾನೇಜರ್– ಆರ್.ಮಹೇಶ್‌ಕುಮಾರ್
9686062014

ಉಚಿತವಾಗಿ ಪಡೆಯಿರಿ
2 kg BT ರೈಸನ್ನು ಖರೀದಿಸಿದರೆ 2 kg ಸಕ್ಕರೆ, 1 Ltr ಸನ್‌ಪ್ಯೂರ್ ಎಣ್ಣೆ, 1 kg ಫೈನ್ ತೊಗರಿ ಬೇಳೆಯನ್ನು ಉಚಿತವಾಗಿ ಪಡೆಯಿರಿ. ಬೆಲೆ ರೂ.1500/– ಮಾತ್ರ (ಷರತ್ತು ಅನ್ವಯ)
ಶ್ರೀ ಅನ್ನಪೂರ್ಣೇಶ್ವರಿ ರೈಸ್ ಕಾರ್ನರ್ ಶಿವರಾಂಪೇಟೆ ಮೋರ್ ಮೆಗಾ ಸ್ಟೋರ್ ಎದುರಿನ ರಸ್ತೆ, ಮೈಸೂರು.
9741859037 / 9902158019

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ. Salary : 13,000- 21,000 + ESI, PF. ವಿದ್ಯಾರ್ಹತೆ: 10th, PUC, ITI, Diploma and any Degree. ಇಂದೇ ಸಂಪರ್ಕಿಸಿ:
9035734821

HOUSE FOR RENT
2BHK, 1st Floor with Car Parking, Near Saraswathipuram Post Office.
Laundry Space for Rent
8105658855 / 9019037569

ಬೇಕಾಗಿದ್ದಾರೆ
ತೋಟದ ಮನೆಯಲ್ಲಿ ವಾಸವಿದ್ದು ಕೊಂಡು ತೋಟದ ಕೆಲಸ ಮಾಡುವವರು ಬೇಕಾಗಿದ್ದಾರೆ. ಫ್ಯಾಮಿಲಿ ಇರುವವರಿಗೆ ಮೊದಲನೇ ಆದ್ಯತೆ.
9880482083

ಮುಡಾ ಸೈಟ್ ಮಾರಾಟಕ್ಕಿದೆ
ಜ್ಞಾನಭಾರತಿ ಲೇಔಟ್, 2ನೇ ಹಂತ, ದಡದಹಳ್ಳಿ, ಈಸ್ಟ್ ಫೇಸಿಂಗ್
24 ಲಕ್ಷ
30x40
9342123373

ಮನೆ ಭೋಗ್ಯಕ್ಕಿದೆ
ಮೊದಲನೆ ಮಹಡಿ, 3 ರೂಂ, ಹಾಲ್, ದೇವರಮನೆ, ಕಿಚನ್, ಬಾಗಿಲು (ಉತ್ತರ), ಕೆ.ಎನ್. ಅಗ್ರಹಾರ, ಮೈಸೂರು.
6362261126

MATCH MAKERS BRIDE / GROOM ವಧು-ವರರ ಮಾಹಿತಿ ಕೇಂದ್ರ
ಉಚಿತ ಬಡವರ ವಧುಗಳಿಗೆ ಉಚಿತ + ವಿವಾಹ + ದಾನಿಗಳಿಂದ ಸಹಾಯ + ವಸತಿ + ಊಟ + ಉದ್ಯೋಗದಾತರಿಂದ ಉದ್ಯೋಗ ಕೊಡಿಸುತ್ತೇವೆ. ಎಲ್ಲಾ ಜಾತಿಯ ಕರ್ನಾಟಕದಲ್ಲಿರುವ ವಧುಗಳಿಗೆ ವಿವಾಹ ಭಾಗ್ಯ ನಮ್ಮ ಸಂಸ್ಥೆಯಿಂದ ದಾನಿಗಳು ನೇರ ಸಂಪರ್ಕಿಸಿ:
ವಿವಾಹ ಕೇಂದ್ರ
ಎಲ್ಲಾ ಜಾತಿಯ ವಧು / ವರರಿಗಾಗಿ Govt. Job / Privates Job 18000 ವಧುಗಳಿಗೆ ವರ ಬೇಕು, 40,000 ವರರಿಗೆ ವಧು ಬೇಕು, ಡೈವೋರ್ಸಿಗಳು, ವಿಧವೆಯರು / ವಿಧುರರು ವಿವಾಹ ವಾಗುವವರು ನೇರ ಸಂಪರ್ಕಿಸಿ. ಮೈಸೂರು
7975728012

ಬೇಕಾಗಿದ್ದಾರೆ
ದ್ವಿಚಕ್ರ ವಾಹನವುಳ್ಳ ಕನಿಷ್ಠ SSLC ತರಗತಿ ಓದಿರುವ ಸುಮಾರು 25 ರಿಂದ 30 ವರ್ಷ ವಯಸ್ಸುಳ್ಳ ರಾಸಾಯನಿಕ ದ್ರಾವಣ ಸಿಂಪಡಿಸಲು (Pest Control Service) ಅಭ್ಯರ್ಥಿಗಳು ಬೇಕಾಗಿದ್ದಾರೆ. ತಿಂಗಳಿಗೆ ರೂ.12,000/– ಹಾಗೂ ಇತರ ಭತ್ಯೆಗಳಿರುತ್ತದೆ. ಇಚ್ಛಿಸುವವರು ಕರೆಮಾಡಿ.
8792192332

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 7 ರಲ್ಲಿ

ಮೈಸೂರು ಮಿತ್ರ ಗುರುವಾರ 16 ಫೆಬ್ರವರಿ 2023

ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಡಾ. ತೀತೀರ ರೇಖಾ ಆಯ್ಕೆ



ಗೋಣಿಕೊಪ್ಪ, ಫೆ.15– ಮಾರ್ಚ್ 4 ಮತ್ತು 5 ರಂದು ಗೋಣಿಕೊಪ್ಪದಲ್ಲಿ ನಡೆಸಲು ಉದ್ದೇಶಿಸಿರುವ 16 ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷರಾಗಿ ಹಿರಿಯ ಸಾಹಿತಿ ಡಾ. ತೀತೀರ ರೇಖಾ ವಸಂತ್ ಅವರನ್ನು ಕಸಾಪ ಕಚೇರಿಯಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಆಯ್ಕೆ ಮಾಡಲಾಯಿತು.

ಕಸಾಪ ಜಿಲ್ಲಾಧ್ಯಕ್ಷ ಎಂ ಪಿ ಕೇಶವ ಕಾಮತ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸರ್ವಾನುಮತದಿಂದ ಈ ಆಯ್ಕೆ ಮಾಡಲಾಯಿತು. ಈ ಸಂದರ್ಭ ಪರಿಷತ್ ಕಾರ್ಯದರ್ಶಿಗಳಾದ ಎಸ್.ಐ ಮುನೀರ್ ಅಹಮದ್, ರೇವತಿ ರಮೇಶ್, ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ಮಡಿಕೇರಿ ತಾಲೂಕು ಅಧ್ಯಕ್ಷ ಅಂಬೇಕಲ್ ನವೀನ್, ಕುಶಾಲನಗರ ತಾಲೂಕು ಅಧ್ಯಕ್ಷ ಕೆ ಎಸ್ ಮೂರ್ತಿ, ಸಂಘಟನಾ ಕಾರ್ಯದರ್ಶಿ ಎಂ ಇ ಮೋಹಿದೀನ್, ಸಹ ಕಾರ್ಯದರ್ಶಿಗಳಾದ ಕುಮಾರ್, ಡೆನ್ನಿಸ್ ಡಿಸೋಜಾ, ನಿರ್ದೇಶಕರುಗಳಾದ ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ, ಸಹನ ಕಾಂತಬೈಲು, ಎಚ್.ಎಸ್ ಪ್ರೇಮಕುಮಾರ್ ಉಪಸ್ಥಿತರಿದ್ದರು.

ಕಂದಾಯ ಸಚಿವರ ಜಮ್ಮಾಬಾಣೆ ಕುರಿತ ಹೇಳಿಕೆಯಿಂದ ಗೊಂದಲ ಸೃಷ್ಟಿ



ಮಡಿಕೇರಿ, ಫೆ.15– ಕೊಡಗಿನ ಜಮ್ಮಾ ಬಾಣೆ ಜಾಗಕ್ಕೆ ಸಂಬಂಧಿಸಿದ ಗೊಂದಲಗಳು ಈಗಾಗಲೇ ನ್ಯಾಯಾಲಯದಲ್ಲಿ ನಿವಾರಣೆಯಾಗಿದೆ. ಆದರೆ ಕಂದಾಯ ಸಚಿವರು ಇತ್ತೀಚೆಗೆ ನೀಡಿರುವ ಹೇಳಿಕೆ ಜಿಲ್ಲೆಯ ಬೆಳೆಗಾರರಲ್ಲಿ ಗೊಂದಲ ಮತ್ತು ಆತಂಕವನ್ನು ಸೃಷ್ಟಿಸಿದೆ ಎಂದು ವ್ಯಾಲಿಡ್ಯೂ ಕೊಡವ ಕಲ್ಚರಲ್ ಅಸೋಸಿಯೇಷನ್ ಹಂಚೆಟ್ಟಿರ ಮನು ಮುದ್ದಪ್ಪ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಜಿಲ್ಲೆಯ ಜಮ್ಮಾ ಜಾಗದ ಕುರಿತು ಸರಿಯಾಗಿ ಅರ್ಥ ಮಾಡಿಕೊಂಡು ಸಚಿವರು ಹೇಳಿಕೆಗಳನ್ನು ನೀಡಬೇಕು, ಈಗ ನೀಡಿರುವ ಹೇಳಿಕೆಯನ್ನು ವಾಪಾಸ್ ಪಡೆದು ಜಿಲ್ಲೆಯ ಜನ ನಿಶ್ಚಿಂತೆಯಿಂದ ಬದುಕುವಂತೆ ನೋಡಿಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ. ಬೆಳೆಗಾರರ ಜಮ್ಮಾ ಜಾಗದ ಮೇಲೆ ಸರ್ಕಾರ ಹಿಡಿತ ಸಾಧಿಸುವುದು ಸರಿಯಲ್ಲ. ಜಮ್ಮಾ ಭೂಮಿಯನ್ನು ಗುತ್ತಿಗೆ ಆಧಾರದಲ್ಲಿ ನೀಡಲಾಗುವುದು ಎಂದು ಕಂದಾಯ ಸಚಿವರು ಹೇಳಿಕೆ ನೀಡಿರುವುದು ಅರ್ಥಹೀನ. 1992ರಲ್ಲಿ ಚೆಕ್ಕೇರ ಪೂವಯ್ಯ ಅವರ ಪ್ರಕರಣದಲ್ಲಿ ನ್ಯಾಯಾಲಯ ಜಮ್ಮಾ ಹಿಡುವಳಿದಾರರ ಪರ ತೀರ್ಪು ನೀಡಿದೆ ವಿನಾಕಾರಣ ಮತ್ತೆ ಜಮ್ಮಾ ಭೂಮಿ ವಿಚಾರದಲ್ಲಿ ಗೊಂದಲ ಸೃಷ್ಟಿಸಿ ಜನರಲ್ಲಿ ಆತಂಕ ಮೂಡಿಸುವುದು ಸರಿಯಲ್ಲ. ಅಧಿಕಾರಿಗಳು ಸಚಿವರಿಗೆ ತಪ್ಪು ಮಾಹಿತಿ ನೀಡಿದ್ದರೆ ಸರಿಯಾದ ಮಾಹಿತಿಯನ್ನು ಕಾನೂನಾತ್ಮಕವಾಗಿ ಕಲೆ ಹಾಕಿ ಮುಂದಿನ ಕ್ರಮ ಕೈಗೊಳ್ಳಬೇಕು. ಅದು ಬಿಟ್ಟು ಏಕಾಏಕಿ ಗುತ್ತಿಗೆ ಆಧಾರದಲ್ಲಿ ಜಮ್ಮಾ ಜಾಗವನ್ನು ನೀಡುವುದಾಗಿ ಹೇಳಿಕೆ ನೀಡಿರುವುದು ಖಂಡನೀಯ. ತಕ್ಷಣ ಈ ಹೇಳಿಕೆಯನ್ನು ಹಿಂಪಡೆಯದಿದ್ದಲ್ಲಿ ಜಿಲ್ಲೆಯ ಎಲ್ಲಾ ಗ್ರಾಮಗಳ ಜನ ಮತ್ತು ಸಂಘ, ಸಂಸ್ಥೆಗಳು ಒಗ್ಗೂಡಿ ಹೋರಾಟ ನಡೆಸಬೇಕಾಗುತ್ತದೆ ಎಂದು ಮನು ಮುದ್ದಪ್ಪ ಎಚ್ಚರಿಕೆ ನೀಡಿದ್ದಾರೆ.

ರೈತರಿಗೆ ಮಳೆಹಾನಿ ಪರಿಹಾರಕ್ಕಾಗಿ ಡಿಸಿಗೆ ಮನವಿ



ಮಡಿಕೇರಿ, ಫೆ.15– ಕೊಡಗು ಜಿಲ್ಲೆಯಲ್ಲಿ ಸುಮಾರು 40,209 ರೈತರಿಗೆ ಮಳೆಹಾನಿ ಪರಿಹಾರ ಬಿಡುಗಡೆಯಾಗಿದ್ದು, ಅದರಲ್ಲಿ ಸುಮಾರು 9 ಸಾವಿರ ರೈತರಿಗೆ ಆಧಾರ್ ಕಾರ್ಡ್ ಚಾಲ್ತಿಯಲ್ಲಿ ಇರದೇ ಇರುವುದರಿಂದ ಅವರ ಖಾತೆಗಳಿಗೆ ಹಣ ಜಮಾ ಆಗದೇ ಸರ್ಕಾರಕ್ಕೆ ವಾಪಸ್ಸಾಗಿರುತ್ತದೆ. ಈಗ ಬಹುತೇಕ ರೈತರು ತಾಂತ್ರಿಕ ದೋಷವನ್ನು ಸರಿಪಡಿಸಿಕೊಂಡಿದ್ದು ಈ ನಿಟ್ಟಿನಲ್ಲಿ ವಾಪಸ್ಸಾದ ಹಣವನ್ನು ಮರು ಪಾವತಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಕೊಡಗು ಜಿಲ್ಲಾ ಕಾಂಗ್ರೆಸ್ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ನಿಯೋಗ ಕೊಡಗು ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ಅವರಿಗೆ ಮನವಿ ಸಲ್ಲಿಸಿದೆ.

ಕೊಡಗು ಜಿಲ್ಲೆಗೆ ಸೀಮಿತವಾದಂತೆ ಅನೇಕ ಆರ್.ಟಿ.ಸಿ.ಯಲ್ಲಿ ಪಟ್ಟೆದಾರರ ಹೆಸರಿದ್ದು ಅನುಭವಿಗಳು ಒಂದಕ್ಕಿಂತ ಹೆಚ್ಚಿನವರಾಗಿರುತ್ತಾರೆ. ಸರ್ಕಾರದ ನಿಯಮಾನುಸಾರ ಒಂದು ಆರ್.ಟಿ.ಸಿ.ಗೆ ಒಂದೇ ಆಧಾರ್ ಕಾರ್ಡ್ ನೊಂದಣಿಯಾಗುವುದರಿಂದ ಇಂತಹ ಸುಮಾರು 4 ಸಾವಿರಕ್ಕೂ ಅಧಿಕ ಅರ್ಜಿಗಳು ಜಿಲ್ಲಾಡಳಿತದಿಂದ ಪರಿಷ್ಕರಣೆ ಗೊಂಡು ಸರ್ಕಾರಕ್ಕೆ ಸಲ್ಲಿಕೆಯಾಗಿದ್ದರೂ ಒಂದೇ ಆರ್.ಟಿ.ಸಿ.ಯಲ್ಲಿ ಎರಡು, ಮೂರು ಅರ್ಜಿಗಳು ಹಾಗೂ ಆಧಾರ್ ಕಾರ್ಡ್ ಇರುವ ಕಾರಣ ಪರಿಹಾರ ಹಣ ತಡೆ ಹಿಡಿಯಲಾಗಿದೆ ಇದರಿಂದ ಅನೇಕ ರೈತರಿಗೆ ಅನ್ಯಾಯವಾಗಿದೆ. ಇದನ್ನು ಸರ್ಕಾರದ ಗಮನಕ್ಕೆ ತಂದು ಅವರಿಗೂ ಕೂಡ ಪರಿಹಾರ ಹಣ ದೊರಕುವಂತೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ನಿಯೋಗ ಮನವಿ ಮಾಡಿತು.

ಮನವಿಗೆ ಸ್ಪಂದಿಸಿದ ಜಿಲ್ಲಾಧಿಕಾರಿಗಳು, ಈಗಾಗಲೇ ತಾಂತ್ರಿಕ ಸಮಸ್ಯೆ ಇತ್ಯರ್ಥಪಡಿಸಲು ಕ್ರಮಕೈಗೊಳ್ಳಲಾಗಿದ್ದು, ಸದ್ಯದಲ್ಲಿಯೇ ಪರಿಹಾರ ಹಣ ಮರು ಪಾವತಿಸಲಾಗುವುದು. ಒಂದೇ ಆರ್.ಟಿ.ಸಿ.ಯಲ್ಲಿ ಇಬ್ಬರು ಅರ್ಜಿದಾರರು ಇರುವ ಸಮಸ್ಯೆ ಕೊಡಗು ಜಿಲ್ಲೆಗೆ ಸೀಮಿತವಾಗಿದ್ದು ಇದನ್ನು ಶೀಘ್ರ ಇತ್ಯರ್ಥಪಡಿಸಲು ಸರ್ಕಾರಕ್ಕೆ ವರದಿ ನೀಡುವುದಾಗಿ ಭರವಸೆಯನ್ನು ನೀಡಿದರು.

ಈ ಸಂದರ್ಭ ಶ್ರೀ ಓಂಕಾರೇಶ್ವರ ದೇವಾಲಯ ವ್ಯವಸ್ಥಾಪನ ಸಮಿತಿ ಮಾಜಿ ಅಧ್ಯಕ್ಷ ಪುಲಿಯಂಡ ಜಗದೀಶ್, ಡಿಸಿಸಿ ಸದಸ್ಯ ಪ್ರಕಾಶ್ ಆಚಾರ್ಯ, ನಗರ ಕಾಂಗ್ರೆಸ್ ಉಪಾಧ್ಯಕ್ಷ ಮಂಡಿರ ಸದಾ ಮುದ್ದಪ್ಪ, ಕಿಸಾನ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಬೊಳ್ಳದಂಡ ನವೀನ್ ನಾಚಪ್ಪ ಹಿಂದುಳಿದ ಘಟಕದ ನಗರ ಅಧ್ಯಕ್ಷ ಜಿ.ಸಿ.ಜಗದೀಶ್ ಹಾಜರಿದ್ದರು.

ಫೆ.18, ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ಮಹಾಶಿವರಾತ್ರಿ

ಮಡಿಕೇರಿ, ಫೆ15– ನಗರದ ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ಫೆ.18 ರಂದು 'ಮಹಾ ಶಿವರಾತ್ರಿ' ಹಬ್ಬದ ಪ್ರಯುಕ್ತ ಬೆಳಗ್ಗೆ 9.30 ಗಂಟೆಯಿಂದ 11.30 ಗಂಟೆವರೆಗೆ ವಿಶೇಷ ಸೇವೆ "ರುದ್ರಹೋಮ" ಏರ್ಪಡಿಸಲಾಗಿದೆ. ಭಕ್ತಾದಿಗಳು ಮುಂಗಡವಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವಂತೆ ಕೋರಿದೆ. ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ ನಡೆಯಲಿದ್ದು, ಸಾರ್ವಜನಿಕ ಭಕ್ತಾದಿಗಳು ದೇವಾಲಯದಲ್ಲಿ ನಡೆಯಲಿರುವ ಪೂಜೆಯಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಭಾಜನರಾಗುವಂತೆ ಹಾಗೂ ದೇವಾಲಯಕ್ಕೆ ತನು ಮನ ಧನ ಸಹಾಯ ನೀಡುವವರು ಸೇವಾ ಕೌಂಟರ್‌ನಲ್ಲಿ ಪಾವತಿಸಿ ಅಧಿಕೃತ ರಶೀದಿ ಪಡೆದುಕೊಳ್ಳುವಂತೆ ಕೋರಿದೆ. ಹೆಚ್ಚಿನ ಮಾಹಿತಿಗೆ ದೂ.ಸಂ.9902290302, 9845821566 ಅನ್ನು ಸಂಪರ್ಕಿಸಬಹುದು.

ಪತ್ರಕರ್ತ ನರೇಶ್ಚಂದ್ರ ನಿಧನ



ಮಡಿಕೇರಿ, ಫೆ.15– ಹಿರಿಯ ಪತ್ರಕರ್ತರೂ ಹಾಗೂ ಬರಹಗಾರರಾದ ಶನಿವಾರಸಂತೆ ನಿವಾಸಿ ನರೇಶ್ಚಂದ್ರ(68) ಅವರು ಬುಧವಾರ ಬೆಳಗಿನ ಜಾವ ನಿಧನರಾಗಿದ್ದಾರೆ. ಮೃತರು ಪತ್ನಿ, ಸಹೋದರ, ಸಹೋದರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಅವರ ಸ್ವಗ್ರಾಮ ಶನಿವಾರ ಸಂತೆಯಲ್ಲಿ ಬುಧವಾರ ನೆರವೇರಿಸಲಾಯಿತು.

ಸಂತಾಪ: ಇವರ ನಿಧನಕ್ಕೆ ಕೊಡಗು ಪತ್ರಕರ್ತರ ಸಂಘ, ಕೊಡಗು ಪತ್ರಿಕಾ ಭವನ ಟ್ರಸ್ಟ್ ಸಂತಾಪ ಸೂಚಿಸಿದೆ. ನಗರದ ಪತ್ರಿಕಾ ಭವನದಲ್ಲಿ ಸಂತಾಪ ಸಭೆ ನಡೆಸಿ ಮೃತರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಒಂದು ನಿಮಿಷ ಮೌನಾಚರಣೆ ಮೂಲಕ ನರೇಶ್ಚಂದ್ರ ಅವರ ಆತ್ಮಕ್ಕೆ ಶಾಂತಿ ಕೋರಲಾಯಿತು. ಶಕ್ತಿ ಪತ್ರಿಕೆಯ ಪ್ರಧಾನ ಸಂಪಾದಕ ಜಿ.ರಾಜೇಂದ್ರ, ಸಂಘದ ಸಲಹೆಗಾರ ಬಿ.ಜಿ. ಅನಂತಶಯನ, ಕೊಡಗು ಪತ್ರಿಕಾ ಭವನ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಎಸ್.ಜಿ. ಉಮೇಶ್, ಕೊಡಗು ಪತ್ರಕರ್ತರ ಸಂಘದ ಉಪಾಧ್ಯಕ್ಷ ಜಿ.ವಿ. ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಉಜ್ವಲ್ ರಂಜಿತ್, ಸಹ ಖಜಾಂಚಿ ಸೈಯದ್ ಇರ್ಫಾನ್, ಟ್ರಸ್ಟಿ ಶ್ರೀಧರ್ ಹೂವಲ್ಲಿ, ಜಿಲ್ಲಾ ನಿರ್ದೇಶಕರಾದ ಹೆಚ್.ಎನ್. ಲಕ್ಷ್ಮೀಶ್, ಎಸ್.ಕೆ. ಲಕ್ಷ್ಮಿನಾರಾಯಣ, ಕುಶಾಲನಗರ ತಾಲೂಕು ಘಟಕದ ಅಧ್ಯಕ್ಷ ವಿಘ್ನೇಶ್ ಭೂತನ ಕಾಡು, ಸದಸ್ಯರಾದ ಪಿ.ಎಂ. ರವಿ, ಪ್ರವೀಣ್, ಅಲ್ಲಾರಂಡ ರಂಗ ಚಾವಡಿಯ ಸಂಚಾಲಕ ಅಲ್ಲಾರಂಡ ವಿಠಲ, ಪ್ರೆಸ್ ಕ್ಲಬ್ ಸಿಬ್ಬಂದಿಗಳಾದ ಯಮುನಾ, ಸವಿತ ಅವರುಗಳು ಉಪಸ್ಥಿತರಿದ್ದರು.

ನಿವೃತ್ತ ಲೆಫ್ಟಿನೆಂಟ್ ಇಟ್ಟಿಚಂಡ ಚಿಟ್ಟಪ್ಪ



ಮೈಸೂರು, ಫೆ.15– ಮೈಸೂರಿನ ವಿಜಯನಗರ 4ನೇ ಹಂತದ ನಿವಾಸಿ, ನೌಕಾಪಡೆಯ ನಿವೃತ್ತ ಲೆಫ್ಟಿನೆಂಟ್ ಇಟ್ಟಿಚಂಡ ಚಿಟ್ಟಪ್ಪ (77) ಅವರು ಇಂದು ಸಂಜೆ ನಿಧನರಾದರು.

ಮೃತರು ಪುತ್ರಿ ಸುಚಿತಾ, ಅಳಿಯ ಮಂಡನೆರವಂಡ ಕುಟ್ಟಪ್ಪ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದು, ಅಂತ್ಯಕ್ರಿಯೆ ಗುರುವಾರ (ಫೆ.16) ಮಧ್ಯಾಹ್ನ 1 ಗಂಟೆಗೆ ವಿಜಯನಗರ 4ನೇ ಹಂತದಲ್ಲಿ ರುವ ಮುಕ್ತಿಧಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾಣಿಚಂಡ ಪಾಪು ಬಿದ್ದಪ್ಪ



ನಾಪೋಕ್ಲು, ಫೆ.15– ಸಮೀಪದ ನೆಲಜಿ ಗ್ರಾಮದ ಮಡಿವಾಳರ ಮಾಣಿಚಂಡ ಪಾಪು ಬಿದ್ದಪ್ಪ(75) ಮಂಗಳವಾರ ನಿಧನ ಹೊಂದಿದರು. ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾಗಿದ್ದ ಬಿದ್ದಪ್ಪ ಅವರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಬುಧವಾರ ನೆರವೇರಿತು. ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ.

ಕಾಲಹರಣ ಮಾಡಿದ್ದೇ ನಾರಾಯಣಗೌಡರ ಸಾಧನೆ: ನಿಖಿಲ್



ಕೆ.ಆರ್.ಪೇಟೆ, ಫೆ.15– ಜೆಡಿಎಸ್‌ಗೆ ದ್ರೋಹ ಬಗೆದು ಬಿಜೆಪಿ ಸೇರಿ ಸಚಿವರಾಗಿರುವ ನಾರಾಯಣಗೌಡರು ತಾಲೂಕಿನ ಅಭಿವೃದ್ಧಿ ಮಾಡದೇ ಮೂರೂವರೆ ವರ್ಷ ಕಾಲಹರಣ ಮಾಡಿದ್ದೇ ಅವರ ದೊಡ್ಡ ಸಾಧನೆ ಎಂದು ರಾಜ್ಯ ಜೆಡಿಎಸ್ ಯುವ ಘಟಕ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದಲ್ಲಿ ರೋಡ್ ಶೋ ನಡೆಸಿ, ಜೆಡಿಎಸ್‌ಗೆ ಸೇರ್ಪಡೆಗೊಂಡ ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ವಕೀಲ ವಿ.ಎಸ್.ಧನಂಜಯಕುಮಾರ್ ಅವರನ್ನು ಪಕ್ಷಕ್ಕೆ ಸ್ವಾಗತಿಸಿ ಅವರು ಮಾತನಾಡಿದರು.

ಜೆಡಿಎಸ್ ತಾಲೂಕಿನ ಅಭಿವೃದ್ಧಿಗೆ ಹಲವು ಶಾಶ್ವತ ಯೋಜನೆಗಳನ್ನು ಕೊಡುಗೆ ನೀಡಿದೆ. ಕ್ಷೇತ್ರದ ಅಭಿವೃದ್ಧಿಗಾಗಿ ಬಿಜೆಪಿ ಸೇರಿದ್ದೇನೆ ಎಂದು ಸುಳ್ಳು ಹೇಳಿಕೊಂಡು ತಮ್ಮ ರಾಜಕೀಯ ಜೀವನಕ್ಕೆ ಭದ್ರ ಬುನಾದಿ ಹಾಕಿಕೊಟ್ಟ ಜೆಡಿಎಸ್ ಬಗ್ಗೆ ಮನಬಂದಂತೆ ಮಾತನಾಡುವ ಸಚಿವ ನಾರಾಯಣಗೌಡರಿಗೆ ತಾಲೂಕಿನ ಮತದಾರರು ಮುಂದಿನ ಚುನಾವಣೆಯಲ್ಲಿ ತಕ್ಕಪಾಠ ಕಲಿಸಲಿದ್ದಾರೆ. ಮಾಜಿ ಸಿಎಂ ಕುಮಾರಣ್ಣ ಇವರ ಮೇಲೆ ವಿಶ್ವಾಸವಿಟ್ಟು 2 ಬಾರಿ ಟಿಕೆಟ್ ನೀಡಿ ಗೆಲ್ಲಿಸಿದ್ದಕ್ಕೆ ಅವರಿಗೆ ದ್ರೋಹ ಬಗೆದು ದೇವೇಗೌಡರ ಬೆನ್ನಿಗೆ ಚೂರಿ ಹಾಕಿ ಬಿಜೆಪಿಗೆ ಸೇರಿದ ನಾರಾಯಣಗೌಡ ಕ್ಷೇತ್ರ ಅಭಿವೃದ್ಧಿ ಮಾಡುವಲ್ಲಿ ವಿಫಲವಾಗಿದ್ದಾರೆ. ತಾಲೂಕಿನಾದ್ಯಂತ ಗುಂಡಿಬಿದ್ದು ಹಾಳಾಗಿರುವ ರಸ್ತೆಗಳನ್ನು ನೋಡಿದರೆ ಕ್ಷೇತ್ರ ಯಾವ ರೀತಿ ಅಭಿವೃದ್ಧಿಯಾಗಿದೆ ಎಂಬುದು ಕಾಣುತ್ತದೆ ಎಂದರು.

ತಾಲೂಕಿನಲ್ಲಿ ಜೆಡಿಎಸ್ ಬಲಿಷ್ಠವಾಗಿದ್ದು, ನಿಷ್ಠಾವಂತ ಕಾರ್ಯಕರ್ತರ ಪಡೆ ಹೊಂದಿದೆ. ಕಳೆದ ಉಪಚುನಾವಣೆಯಲ್ಲಿ ಗೆದ್ದ ನಾರಾಯಣಗೌಡರು ವೀರಶೈವ ಸಮಾಜವನ್ನು ಕಡೆಗಣಿಸಿದ್ದರಿಂದ ಬೇಸತ್ತ ಸಮಾಜದ ಅಧ್ಯಕ್ಷರು ತಮ್ಮ ನೂರಾರು ಬೆಂಬಲಿಗರೊಂದಿಗೆ ಜೆಡಿಎಸ್‌ಗೆ ಸೇರ್ಪಡೆಗೊಂಡಿದ್ದಾರೆ. ನಮ್ಮ ಪಕ್ಷದ ಅಭ್ಯರ್ಥಿ ಹೆಚ್.ಡಿ.ಮಂಜು ಗೆಲುವನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ತಾಲೂಕಿಗೆ ಕುಮಾರಣ್ಣ ನೀಡಿರುವ ಕೊಡುಗೆಗಳೇ ಅವರಿಗೆ ಶ್ರೀರಕ್ಷೆಯಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ತಾಲೂಕು ಅಧ್ಯಕ್ಷ ಜಾನಕೀರಾಂ, ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಟಿ. ಮಂಜು, ಮನ್‌ಮುಲ್ ಮಾಜಿ ಅಧ್ಯಕ್ಷ ಎಂ.ಬಿ. ಹರೀಶ್, ರಾಜ್ಯ ಸಹಕಾರ ಮಾರಾಟ ಮಹಾ ಮಂಡಳದ ನಿರ್ದೇಶಕ ಪುಟ್ಟಸ್ವಾಮಿಗೌಡ, ಜಿಲ್ಲಾ ಜೆಡಿಎಸ್ ಉಪಾಧ್ಯಕ್ಷ ಎ.ಬಿ.ನಾಗೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ.ಕಿರಣ್, ಸೇರಿದಂತೆ ಸಾವಿರಾರು ಕಾರ್ಯಕರ್ತರು ಭಾಗವಹಿಸಿದ್ದರು.

ಫೆ.21, ಅಂಚೆ ಅದಾಲತ್

ಮಂಡ್ಯ, ಫೆ.15– ಮಂಡ್ಯ ವಿಭಾಗದ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಫೆ.21ರಂದು ಬೆಳಗ್ಗೆ 11ಗಂಟೆಗೆ ಅಂಚೆ ಅದಾಲತ್ ಏರ್ಪಡಿಸಲಾಗಿದ್ದು, ಸಾರ್ವಜನಿಕರು ಅಂಚೆ ಸೇವೆಗಳ ಬಗ್ಗೆ ಕುಂದು ಕೊರತೆ ಇದ್ದಲ್ಲಿ ಫೆ.16 ರೊಳಗೆ ಅಂಚೆ ಅಧೀಕ್ಷಕರ ಕಚೇರಿಗೆ ಲಿಖಿತ ರೂಪದಲ್ಲಿ ತಲುಪಿಸುವಂತೆ ತಿಳಿಸಲಾಗಿದೆ. ಆಸಕ್ತರು ಅಂಚೆ ಅದಾಲತ್‌ನಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ಭಾಗವಹಿಸಬಹುದು ಎಂದು ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದ್ವಿತೀಯ ಪಿಯು ಫಲಿತಾಂಶ ಉತ್ತಮಗೊಳಿಸಿ: ಡಿಸಿ



ಮಂಡ್ಯ, ಫೆ.15– ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಉತ್ತಮ ಫಲಿತಾಂಶ ಬರುವಂತೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸಿ ಎಂದು ಜಿಲ್ಲಾಧಿಕಾರಿ ಹೆಚ್.ಎನ್. ಗೋಪಾಲಕೃಷ್ಣ ತಿಳಿಸಿದರು.

ಜಿಪಂ ಕಾವೇರಿ ಸಭಾಂಗಣದಲ್ಲಿ ನಡೆದ ಜಿಲ್ಲೆಯ ಎಲ್ಲಾ ಪಿಯು ಕಾಲೇಜಿನ ಪ್ರಾಂಶುಪಾಲರ ಸಭೆಯಲ್ಲಿ ಮಾತನಾಡಿದ ಅವರು, ದ್ವಿತೀಯ ಪಿಯುಸಿ ವಾರ್ಷಿಕ ಫಲಿತಾಂಶ ಹಿಂದಿನ ವರ್ಷಕ್ಕೆ ಸಂಬಂಧಿಸಿದಂತೆ ಶೇ.59 ರಷ್ಟು ಫಲಿತಾಂಶ ಹೊಂದಿತ್ತು. ಆದರೆ ಈ ವರ್ಷದ ಫಲಿತಾಂಶ ಜಿಲ್ಲೆಗೆ ಕೀರ್ತಿ ತರುವಂತಹ ಫಲಿತಾಂಶವಾಗಿರಬೇಕು ಎಂದರು. ಫಲಿತಾಂಶ ಉತ್ತಮಪಡಿಸಲು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಿಶೇಷ ತರಗತಿಗಳು, ಗುಂಪು ಅಧ್ಯಯನ, ಕಡಿಮೆ ಅಂಕ ಪಡೆದಿರುವ ಮಕ್ಕಳಿಗೆ ಪುನರಾವರ್ತನೆ, ಮಾದರಿ ಪ್ರಶ್ನೆ ಪತ್ರಿಕೆಗಳಿಗೆ ಉತ್ತರಿಸುವುದು. ಹೀಗೆ ವಿವಿಧ ರೀತಿ ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡಿಸಿ ಜಿಲ್ಲೆಯ ಫಲಿತಾಂಶ ಉತ್ತಮಪಡಿಸಲು ಜಿಲ್ಲಾ ಮಟ್ಟದ ಅಧಿಕಾರಿಗಳು, ಪ್ರಾಂಶುಪಾಲರು ಹಾಗೂ ಉಪನ್ಯಾಸಕರ ಸಹಕಾರದೊಂದಿಗೆ ಕೆಲಸ ನಿರ್ವಹಿಸಿ ಎಂದರು. ಸಭೆಯಲ್ಲಿ ಜಿಪಂ ಸಿಇಓ ಶಾಂತ ಎಲ್.ಹುಲ್ಮನಿ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಸ್.ಉಮೇಶ್ ಹಾಗೂ ಇನ್ನಿತರರಿದ್ದರು.

ವಿಧಾನಪರಿಷತ್ ಮಾಜಿ ಸದಸ್ಯ ಹೆಚ್.ಹೊನ್ನಪ್ಪ ನಿಧನ





ಮಂಡ್ಯ, ಫೆ.15– ವಿಧಾನ ಪರಿಷತ್ ಮಾಜಿ ಸದಸ್ಯ ಹೆಚ್.ಹೊನ್ನಪ್ಪ (72) ಮಂಗಳವಾರ ರಾತ್ರಿ ನಿಧನರಾದರು.

ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿರುವ ಅವರ ಅಂತ್ಯಕ್ರಿಯೆ ಬುಧವಾರ ಸಂಜೆ 5 ಗಂಟೆ ಸಮಯದಲ್ಲಿ ಅವರ ಹುಟ್ಟೂರು ಮಂಡ್ಯ ತಾಲೂಕಿನ ಇಂಡುವಾಳು ಗ್ರಾಮದಲ್ಲಿ ನೆರವೇರಿತು. ದೀರ್ಘ ಕಾಲದ ಅನಾರೋಗ್ಯ ಹಾಗೂ ಬಹು ಅಂಗಾಂಗಳ ವೈಫಲ್ಯದಿಂದ ಹೊನ್ನಪ್ಪ ಬಳಲುತ್ತಿದ್ದರು. ಮಂಡ್ಯ ಪುರಸಭೆ ಪ್ರಥಮ ಅಧ್ಯಕ್ಷ ಇಂಡುವಾಳು ಹೊನ್ನಯ್ಯ ಅವರ ಸುಪುತ್ರ ಹೆಚ್.ಹೊನ್ನಪ್ಪ, ಜನತಾ ಪರಿವಾರದ ಕಟ್ಟಾಳುವಾಗಿದ್ದರು. ಜನತಾದಳದ ಪ್ರಮುಖ ನಾಯಕರಾಗಿದ್ದ ಎಸ್.ಡಿ.ಜಯರಾಂ, ಎಂ.ಎಸ್.ಸಿದ್ದರಾಜು, ಕಾಂಗ್ರೆಸ್‌ನ ಎಂ.ಎಸ್.ಆತ್ಮಾನಂದ ಅವರ ಜೊತೆಗೆ ಉತ್ತಮ ಒಡನಾಟ ಹೊಂದಿದ್ದರು. ಎಂ.ಎಸ್.ಸಿದ್ದರಾಜು ಜನತಾದಳದ ಅಧ್ಯಕ್ಷರಾಗಿದ್ದ 1998ರಲ್ಲಿ ಸ್ಥಳೀಯ ಸಂಸ್ಥೆಯಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದರು.

ಅದಕ್ಕೂ ಮುನ್ನ 1994ರಲ್ಲಿ ಮಂಡ್ಯ ಮೈಷುಗರ್ ಸಕ್ಕರೆ ಕಾರ್ಖಾನೆ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದ ಹೊನ್ನಪ್ಪ, ಕೆಲ ವರ್ಷಗಳ ಕಾಲ ಜನತಾದಳದ ಮಂಡ್ಯ ಜಿಲ್ಲಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಬಳಿಕ 2004ರ ನಂತರ ಜೆಡಿಎಸ್ ವಿರುದ್ಧ ಮುನಿಸಿಕೊಂಡು ಬಿಜೆಪಿ ಸೇರಿದ ಅವರು, ಬಿಜೆಪಿ ಜಿಲ್ಲಾಧ್ಯಕ್ಷರಾಗಿ 5 ವರ್ಷಗಳ ಕಾಲ ಕಾರ್ಯನಿರ್ವಹಿಸಿದರು.

ಮಂಡ್ಯದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಜನತಾ ಶಿಕ್ಷಣ ಟ್ರಸ್ಟ್ ಅನ್ನು ದೊಡ್ಡ ಮಟ್ಟಕ್ಕೆ ಬೆಳೆಸಿದವರ ಪೈಕಿ ಹೆಚ್.ಹೊನ್ನಪ್ಪ ಸಹ ಒಬ್ಬರು. ಎರಡು ದಶಕಗಳ ಕಾಲ ಪಿಇಟಿ ಸಂಸ್ಥೆಯ ಪ್ರಧಾನ ಕಾರ್ಯ ದರ್ಶಿಯಾಗಿಯೂ ಹೊನ್ನಪ್ಪ ಸೇವೆ ಸಲ್ಲಿಸಿದ್ದಾರೆ.

ಇಂಡುವಾಳು ಗ್ರಾಮಕ್ಕೆ ಭೇಟಿ ನೀಡಿ, ಮೃತರ ದರ್ಶನ ಪಡೆದ ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥ್ ನಾರಾಯಣ ಮಾತನಾಡಿ, ಹೆಚ್.ಹೊನ್ನಪ್ಪ ಅವರು ಸಮಾಜದ ಹಲವಾರು ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ. ಜನರ ಕಷ್ಟ ಸುಖಗಳಿಗೆ ಸ್ಪಂದಿಸಿದ್ದಾರೆ. ಸಮಾಜದಲ್ಲಿ ನಾಯಕರಾಗಿ, ಜನಪರ ಕಾರ್ಯಗಳನ್ನೂ ಮಾಡಿದ್ದಾರೆ. ಅವರ ಸೇವೆ ಸದಾ ಎಲ್ಲರಿಗೂ ಸ್ಫೂರ್ತಿಯಾಗಿರಲಿ. ಅವರ ವ್ಯಕ್ತಿತ್ವ ಎಲ್ಲರಿಗೂ ಅನುಕರಣೀಯ ಎಂದರು.

ಅವರ ಕುಟುಂಬ ಮತ್ತು ಹಿತೈಷಿ ವರ್ಗದವರಿಗೆ ತುಂಬಲಾರದ ನಷ್ಟವಾಗಿದೆ. ನಷ್ಟವನ್ನು ಭರಿಸುವ ಶಕ್ತಿ ಭಗವಂತ ಕುಟುಂಬಕ್ಕೆ ಕರುಣಿಸಲಿ ಎಂದ ಅವರು, ಹೊನ್ನಪ್ಪ ಅವರ ಪತ್ನಿ, ಮಕ್ಕಳು ಹಾಗೂ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಶಾಸಕರಾದ ಸಿ.ಎಸ್.ಪುಟ್ಟರಾಜು, ಎಂ.ಶ್ರೀನಿವಾಸ್, ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಮಾಜಿ ಶಾಸಕ ಜಿ.ಬಿ.ಶಿವಕುಮಾರ್, ಮುಖಂಡರಾದ ಇಂಡುವಾಳು ಸಚ್ಚಿದಾನಂದ, ಸಿ.ಪಿ.ಉಮೇಶ್, ಎಸ್.ಪಿ. ಸ್ವಾಮಿ ಸೇರಿದಂತೆ ಹಲವು ಅಂತಿಮ ದರ್ಶನ ಪಡೆದರೆ, ಅನೇಕ ಗಣ್ಯರು ಹೊನ್ನಪ್ಪ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಡೆತ್‌ನೋಟ್ ಬರೆದಿಟ್ಟು ಯುವಕ ಆತ್ಮಹತ್ಯೆ



ಭಾರತೀನಗರ, ಫೆ15– ಇಲ್ಲಿನ ಅಂಬರಹಳ್ಳಿ ಗ್ರಾಮದ ಯುವಕ ಡೆತ್‌ನೋಟ್ ಬರೆದಿಟ್ಟು ಚಿಕ್ಕಬಳ್ಳಾಪುರದ ನಂದಿಬೆಟ್ಟದ ಟಿಪ್ಪು ಡ್ರಾಪ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಗ್ರಾಮದ ನಿವಾಸಿ ಅರುಣ್(20) ಆತ್ಮಹತ್ಯೆ ಮಾಡಿಕೊಂಡವರು. ಕಳೆದ ಶನಿವಾರ ತನ್ನ ಸ್ನೇಹಿತನ ಬೈಕ್‌ನಲ್ಲಿ ನಂದಿಬೆಟ್ಟಕ್ಕೆ ಆಗಮಿಸಿದ ಅರುಣ್ ಪಾರ್ಕಿಂಗ್‌ನಲ್ಲಿ ಬೈಕ್ ನಿಲ್ಲಿಸಿ ನಂದಿಬೆಟ್ಟದ ಮೇಲ್ಭಾಗಕ್ಕೆ ಹೋಗಿದ್ದಾನೆ. ಆದರೆ ಬೆಟ್ಟದ ಮೇಲೆ ಹೋದವನು ವಾಪಸ್ ಬಂದಿಲ್ಲ. ಅನುಮಾನಗೊಂಡ ಹೆಲ್ಮೆಟ್ ಲಾಕ್‌ರೂಂ ಮಾಲೀಕರು ಪೊಲೀಸರಿಗೆ ತಿಳಿಸಿದ್ದಾರೆ. ನಂತರ ಸಿಸಿ ಟಿವಿ ಫುಟೇಜ್ ಪರಿಶೀಲಿಸಿದಾಗ ಅರುಣ್ ಹೋಗಿರುವ ವಿಡಿಯೋ ಸಿಕ್ಕಿದೆ. ಆದರೆ ವಾಪಸ್ ಬಂದಿರುವ ವಿಡಿಯೋ ಸಿಕ್ಕಿಲ್ಲ. ಹೀಗಾಗಿ ಬೆಟ್ಟ ಹುಡುಕಾಡಿದಾಗ ಟಿಪ್ಪು ಡ್ರಾಪ್ ಜಾಗದಲ್ಲಿ ಅರುಣ್ ಬ್ಯಾಗ್ ಪತ್ತೆಯಾಗಿದ್ದು, ಡೆತ್‌ನೋಟ್ ದೊರೆತಿದೆ. ಅದರಲ್ಲಿ ಸಾವಿಗೆ ನಿಖರ ಕಾರಣ ತಿಳಿಸದ ಅರುಣ್ ಪ್ರಸ್ತುತ ರಾಜಕೀಯ ವ್ಯವಸ್ಥೆ ಸರಿ ಇಲ್ಲ. ಹೀಗಾಗಿ ನಟ ಉಪೇಂದ್ರ ಅವರ ಪ್ರಜಾಕೀಯ ಪಕ್ಷ ಸಿದ್ಧಾಂತವನ್ನು ಜನರು ಬೆಂಬಲಿಸಬೇಕು ಎಂದು ಬರೆದಿದ್ದು, ನಾನು ಸಂತೋಷವಾಗಿ ಸಾಯುತ್ತಿದ್ದೇನೆ ಎಂದು ಡೆತ್‌ನೋಟ್‌ನಲ್ಲಿ ಬರೆದಿದ್ದಾನೆ. ನಂದಿಬೆಟ್ಟದಲ್ಲಿ ಅರುಣ್ ಮೃತದೇಹ ಸಿಕ್ಕಿದೆ.

ವಿಧಾನಸಭಾ ಚುನಾವಣೆ ಹಿನ್ನೆಲೆ : ಅಕ್ರಮ ಮದ್ಯ ಮಾರಾಟ ವಹಿವಾಟು ವಿರುದ್ಧ ಗಂಭೀರ ಕ್ರಮ

ಜಿಲ್ಲಾಧಿಕಾರಿ ಡಿ.ಎಸ್. ರಮೇಶ್



ಚಾಮರಾಜನಗರ, ಫೆ.15– ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಮದ್ಯ ಮಾರಾಟ, ಸಾಗಾಣಿಕೆ, ದಾಸ್ತಾನು ವಹಿವಾಟುಗಳಲ್ಲಿ ಯಾವುದೇ ಅಕ್ರಮಗಳಿಗೆ ಅವಕಾಶವಾಗದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಪಾಲನೆ ಮಾಡಬೇಕೆಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಬಕಾರಿ ವಹಿವಾಟಿನ ಸಂಬಂಧ ಕೈಗೊಳ್ಳಬೇಕಿರುವ ಮುಂಜಾಗ್ರತಾ ಕ್ರಮಗಳ ಕುರಿತು ಜಿಲ್ಲೆಯ ಅಬಕಾರಿ ಅಧಿಕಾರಿಗಳು ಹಾಗೂ ಮದ್ಯ ಮಾರಾಟ ಸನ್ನದುದಾರರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಮದ್ಯ ಮಾರಾಟ, ಸಾಗಾಣಿಕೆ, ದಾಸ್ತಾನು ಸೇರಿದಂತೆ ಎಲ್ಲಾ ಅಬಕಾರಿ ವಹಿವಾಟಿನ ಮೇಲೆ ಕಟ್ಟುನಿಟ್ಟಿನ ನಿಗಾ ಇಡಲಾಗುತ್ತಿದೆ. ಕಳೆದ ವರ್ಷ ಹಾಗೂ ಈ ವರ್ಷದ ವಹಿವಾಟು ವಿವರಗಳನ್ನು ಪಡೆದು ಪರಿಶೀಲಿಸಲಾಗುತ್ತದೆ. ಯಾವುದೇ ಅಸಹಜ ಪ್ರಕ್ರಿಯೆಗಳು ನಡೆಯುವುದು ಕಂಡುಬಂದರೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಜಿಲ್ಲೆಯಲ್ಲಿರುವ ಎಲ್ಲಾ ಮದ್ಯ ಮಾರಾಟ ಅಂಗಡಿಗಳ ಮೇಲೆ ಇಲಾಖೆ ಅಧಿಕಾರಿಗಳು ಕಟ್ಟುನಿಟ್ಟಿನ ನಿಗಾ ಇರಿಸಲಿದ್ದಾರೆ. ಜಿಲ್ಲೆಯಲ್ಲಿ ಇರುವ ಮದ್ಯದಂಗಡಿಗಳ ಪೈಕಿ 34 ಅಂಗಡಿಗಳನ್ನು ಸೂಕ್ಷ್ಮವೆಂದು ಗುರುತಿಸಲಾಗಿದೆ. ಇಲ್ಲಿ ವಿಶೇಷ ಕಣ್ಗಾವಲು ಇಡಲಾಗುವುದು. ಅಂಗಡಿ ಮಾಲೀಕರು, ಸನ್ನದುದಾರರು ಚುನಾವಣಾ ಅಕ್ರಮಗಳಿಗೆ ಅವಕಾಶ ಮಾಡಿಕೊಟ್ಟರೆ ಗಂಭೀರ ಕ್ರಮ ಜರುಗಿಸಲಾಗುತ್ತದೆ ಎಂದರು.

ಮದ್ಯ ಮಾರಾಟ ಅಂಗಡಿಗಳಲ್ಲಿ ಕಡ್ಡಾಯವಾಗಿ ಸಿಸಿ ಕ್ಯಾಮರಾ ಅಳವಡಿಸಬೇಕು. ದಾಖಲಾಗುವ ವಿವರಗಳು ಲಭ್ಯವಾಗುವಂತಿರಬೇಕು. ಯಾವುದೇ ವಿವರ ಹಾಗೂ ದೃಶ್ಯಗಳನ್ನು ಡಿಲೀಟ್ ಮಾಡುವಂತಿಲ್ಲ. ದೀರ್ಘಾವಧಿಯವರೆಗೆ ಸಿಸಿ ಕ್ಯಾಮರಾದಲ್ಲಿ ಸೆರೆಯಾಗುವ ಎಲ್ಲಾ ದಾಖಲುಗಳು ಯಥಾಸ್ಥಿತಿಯಲ್ಲಿ ಇಡಬೇಕು. ಈ ಬಗ್ಗೆ ಅಬಕಾರಿ ಅಧಿಕಾರಿಗಳು ವಿಶೇಷ ಗಮನ ನೀಡಬೇಕು ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಎಂ.ಎಸ್.ಐ.ಎಲ್, ಪಾನೀಯ ನಿಗಮಗಳು ಕೂಡ ನಡೆಸುವ ಮದ್ಯ ವಹಿವಾಟು ಸಂಬಂಧ ಪಾರದರ್ಶಕವಾಗಿ ಎಲ್ಲಾ ಪ್ರಕ್ರಿಯೆ ಕೈಗೊಳ್ಳಬೇಕು. ಪ್ರತಿಯೊಂದು ವಹಿವಾಟಿನ ದಾಖಲೆಗಳನ್ನು ನೀಡಬೇಕಾಗುತ್ತದೆ. ಅಂಗಡಿಗಳ ಬೇಡಿಕೆ ಹಾಗೂ ಮಾರಾಟ ಕುರಿತ ಎಲ್ಲಾ ವಿವರಗಳನ್ನು ಒದಗಿಸಬೇಕು. ನಿಯಮ ಅನುಸಾರವೇ ನಡೆಯಬೇಕು. ಎಲ್ಲಿಯೂ ಲೋಪ ಆಗಬಾರದು ಎಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ತಿಳಿಸಿದರು.

ಅಬಕಾರಿ ಉಪ ಆಯುಕ್ತರಾದ ಆರ್. ನಾಗಶಯನ, ಅಬಕಾರಿ ಡಿವೈಎಸ್‌ಪಿ ಮೋಹನ್ ಕುಮಾರ್, ಉಮಾಶಂಕರ್, ಎಂ.ಎಸ್.ಐ.ಎಲ್ ಜಿಲ್ಲಾ ಸಂಯೋಜಕರಾದ ಕೆಂಪಯ್ಯ, ಪಾನೀಯ ನಿಗಮದ ಇನ್ಸ್‌ಪೆಕ್ಟರ್ ಗುರುನಾಥಶೆಟ್ಟಿ, ಅಬಕಾರಿ ನಿರೀಕ್ಷಕರಾದ ವೀಣಾ, ಸುನೀಲ್, ತನ್ವೀರ್, ಮಹದೇವ್, ಉಮಾಶಂಕರ್, ಜಿಲ್ಲೆಯ ಮದ್ಯದಂಗಡಿ ಸನ್ನದುದಾರರು ಸಭೆಯಲ್ಲಿ ಹಾಜರಿದ್ದರು.

ಮಹಾಶಿವರಾತ್ರಿಯಂದು ಮಾಂಸ ಮಾರಾಟ, ಪ್ರಾಣಿವಧೆ ನಿಷೇಧ

ಚಾಮರಾಜನಗರ, ಫೆ.15– ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಫೆ.18ರಂದು ಚಾಮರಾಜನಗರ ನಗರಸಭಾ ವ್ಯಾಪ್ತಿಯಲ್ಲಿ ಮಾಂಸ ಮಾರಾಟ ಹಾಗೂ ಪ್ರಾಣಿವಧೆ ನಿಷೇಧಿಸಲಾಗಿದೆ. ನಗರಸಭಾ ವ್ಯಾಪ್ತಿಯಲ್ಲಿ ಫೆ.18ರಂದು ಮೀನು, ಮಾಂಸ ಮಾರಾಟ ಮಾಡುವಂತಿಲ್ಲ. ಪ್ರಾಣಿವಧೆಯನ್ನು ಸಹ ನಿಷೇಧಿಸಲಾಗಿದೆ. ಅಂದು ಮಾಂಸ ಮಾರಾಟ, ಪ್ರಾಣಿವಧೆ ಮಾಡುವುದು ಕಂಡುಬಂದಲ್ಲಿ ಕಾನೂನು ರೀತಿ ಕ್ರಮ ಜರುಗಿಸಲಾಗುವುದೆಂದು ನಗರಸಭೆ ಪ್ರಕಟಣೆ ತಿಳಿಸಿದೆ.

ಮಾಜಿ ರಾಜ್ಯಪಾಲ ದಿ.ಬಿ. ರಾಚಯ್ಯನವರ ಸಂಸ್ಮರಣೋತ್ಸವ



ಚಾಮರಾಜನಗರ, ಫೆ.15– ಮಾಜಿ ರಾಜ್ಯಪಾಲ ದಿವಂಗತ ಬಿ. ರಾಚಯ್ಯ ಅವರ 23ನೇ ವರ್ಷದ ಸಂಸ್ಮರಣೋತ್ಸವ ಆಲೂರಿನ ಬಿ. ರಾಚಯ್ಯ ಅವರ ಪುಣ್ಯಭೂಮಿಯಲ್ಲಿ ನಡೆಯಿತು.

ರಾಚಯ್ಯನವರ ಪುತ್ರರಾದ ಮಾಜಿ ಶಾಸಕ ಎ.ಆರ್. ಕೃಷ್ಣಮೂರ್ತಿ, ಜಿಪಂ ಮಾಜಿ ಸದಸ್ಯ ಆರ್. ಬಾಲರಾಜು, ಪುತ್ರಿಯರಾದ ವೇದಾವತಿ, ಆರತಿ, ಮಂಜುಳಾ ಕೃಷ್ಣಮೂರ್ತಿ, ಆರ್.ಕೆ. ಶ್ರೀವರ್ಧನ್, ವಿನಾಯಕ, ಪ್ರಕಾಶ್, ಮಹದೇವಯ್ಯ, ಆಲೂರು ಮಲ್ಲಣ್ಣ, ಕುಟುಂಬದವರು ರಾಚಯ್ಯನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ನಂತರ ಮಾಜಿ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಮುಂಬರುವ ದಿನಗಳಲ್ಲಿ ರಾಚಯ್ಯನವರ ಜನ್ಮ ಶತಮಾನೋತ್ಸವ ಹಾಗೂ ಸ್ಮಾರಕ ಲೋಕಾರ್ಪಣೆಯನ್ನು ಸರ್ಕಾರದ ಸಹಭಾಗಿತ್ವದಲ್ಲಿ ಹಮ್ಮಿಕೊಳ್ಳಲಾಗುತ್ತದೆ ಎಂದರು. ಬಳಿಕ ಜಿಪಂ ಮಾಜಿ ಸದಸ್ಯ ಆರ್. ಬಾಲರಾಜು ಮಾತನಾಡಿ, ರಾಚಯ್ಯನವರ ಸಂಸ್ಮರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಅಭಿಮಾನಿಗಳು, ಬಂಧುಗಳು, ಹಿತೈಷಿಗಳಿಗೆ ನಮ್ಮ ಕುಟುಂಬ ಚಿರಋಣಿಯಾಗಿದೆ ಎಂದರು.

ಜೈನ್ ವಿವಿ ಅಧ್ಯಾಪಕರು, ವಿದ್ಯಾರ್ಥಿಗಳ ಮೇಲೆ ಕ್ರಮಕ್ಕೆ ಆಗ್ರಹ

ಚಾಮರಾಜನಗರ, ಫೆ15– ಬೆಂಗಳೂರು ಜೈನ್ ವಿವಿ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದ್ದು, ಅವರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿ ಅಖಿಲ ಕರ್ನಾಟಕ ಕನ್ನಡ ಮಹಾಸಭೆ ಪದಾಧಿಕಾರಿಗಳು ನಗರದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಅಖಿಲ ಕರ್ನಾಟಕ ಕನ್ನಡ ಮಹಾಸಭೆ ರಾಜ್ಯಾಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ, ಬೆಂಗಳೂರು ಜೈನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಕಿರುನಾಟಕ ಪ್ರದರ್ಶನ ಮಾಡುತ್ತಿದ್ದ ವೇಳೆ ಅಂಬೇಡ್ಕರ್ ಅವರನ್ನು ಅಪಮಾನ ಮಾಡಲಾಗಿದೆ. ಅದು ದೇಶ ವಿರೋಧಿ ನಾಟಕವಾಗಿದ್ದು, ಅದನ್ನು ವಿರೋಧಿಸುವ ಬದಲು ಪ್ರೋತ್ಸಾಹ ನೀಡಿರುವುದು ನಾಗರಿಕ ಸಮಾಜ ತಲೆತಗ್ಗಿಸುವ ಸಂಗತಿಯಾಗಿದೆ ಎಂದು ಆರೋಪಿಸಿದರು.

ಮೂಳೆ ಸಂಬಂಧಿ ಕಾಯಿಲೆಗಳ ತಪಾಸಣಾ ಶಿಬಿರ



ಚಾಮರಾಜನಗರ, ಫೆ.15– ಜೆಎಸ್‌ಎಸ್ ಆಸ್ಪತ್ರೆ ಮೈಸೂರು ಹಾಗೂ ಡಾ.ಬಾಬು ಸೋಷಿಯಲ್ ವೆಲ್‌ಫೇರ್ ಅಂಡ್ ಚಾರಿಟಬಲ್ ಟ್ರಸ್ಟ್ ಇವರ ಸಹಯೋಗದಲ್ಲಿ ಇಂದು ನಡೆದ ಬೃಹತ್ ಮೂಳೆಗೆ ಸಂಬಂಧಿಸಿದ ಕಾಯಿಲೆಗಳ ತಪಾಸಣೆ ಯಶಸ್ವಿಯಾಯಿತು.

ಮೂಳೆಗೆ ಸಂಬಂಧಪಟ್ಟ ತೊಂದರೆಯುಳ್ಳವರು 500ಕ್ಕೂ ಹೆಚ್ಚು ಮಂದಿ ಶಿಬಿರದಲ್ಲಿ ತಪಾಸಣೆ ಮಾಡಿಸಿಕೊಂಡರು. ಜೆಎಸ್‌ಎಸ್ ಆಸ್ಪತ್ರೆಯ ತಜ್ಞ ವೈದ್ಯರಾದ ಡಾ. ಗುರುಮೂರ್ತಿ ಮತ್ತು ತಂಡದವರು ಮೂಳೆ ಸಂಬಂಧಿಸಿದ ತೊಂದರೆಯುಳ್ಳ ವೃದ್ಧರು, ಮಹಿಳೆಯರು ಹಾಗೂ ಮಕ್ಕಳನ್ನು ತಪಾಸಣೆ ಮಾಡಿ, ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು. ಕೆಲವರಿಗೆ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಆಸ್ಪತ್ರೆಗೆ ಶಿಫಾರಸ್ಸು ಮಾಡಿದರೆ, ಇನ್ನು ಕೆಲವರಿಗೆ ಉಚಿತವಾಗಿ ಔಷಧಿಗಳನ್ನು ವಿತರಣೆ ಮಾಡಿದರು.

ಶಿಬಿರಕ್ಕೆ ಜಿಲ್ಲಾ ಆರೋಗ್ಯಾಧಿಕಾರಿ ಡಾ. ವಿಶ್ವೇಶ್ವರಯ್ಯ ಗಿಡಕ್ಕೆ ನೀರೆರೆಯುವ ಮೂಲಕ ಚಾಲನೆ ನೀಡಿ ಮಾತನಾಡಿ, ಸ್ವತಃ ವೈದ್ಯರಾಗಿರುವ ಡಾ. ಎ.ಆರ್. ಬಾಬು ಅವರು ತಮ್ಮ ಹೆಸರಿನಲ್ಲಿ ಚಾರಿಟಬಲ್ ಟ್ರಸ್ಟ್ ರಚನೆ ಮಾಡಿಕೊಂಡು ಸಾಮಾಜಿಕ ಸೇವೆ ಕಾರ್ಯದಲ್ಲಿ ಸಕ್ರಿಯವಾಗಿದ್ದಾರೆ ಎಂದರು.

ಶಿಬಿರದ ನೇತೃತ್ವ ವಹಿಸಿದ್ದ ಟ್ರಸ್ಟ್ ಅಧ್ಯಕ್ಷ ಡಾ. ಎ.ಆರ್. ಬಾಬು ಮಾತನಾಡಿ, ಗ್ರಾಮೀಣ ಜನರ ಆರೋಗ್ಯ ಬಗ್ಗೆ ಜಾಗೃತಿ ಮೂಡಿಸುವ ಜೊತೆಗೆ ಉಚಿತ ಶಿಬಿರಗಳನ್ನು ನಡೆಸಿ ಉತ್ತಮ ಆರೋಗ್ಯ ಸೇವೆಯನ್ನು ನೀಡುವ ಆಶಯ ನಮ್ಮದಾಗಿದೆ ಎಂದರು.

ಮುಖಂಡರಾದ ವೆಂಕಟರಮಣಸ್ವಾಮಿ (ಪಾಪು), ಜಿಪಂ ಮಾಜಿ ಅಧ್ಯಕ್ಷೆ ಜಿ. ನಾಗಶ್ರೀ ಪ್ರತಾಪ್, ಮಾಜಿ ಸದಸ್ಯ ಆರ್. ಬಾಲರಾಜು, ನಗರಸಭಾ ಅಧ್ಯಕ್ಷೆ ಆಶಾ ನಟರಾಜು ಮಾತನಾಡಿದರು. ಜೆಎಸ್‌ಎಸ್ ಅಸ್ಪತ್ರೆ ಅಧೀಕ್ಷಕ ಡಾ. ಗೋವಿಂದಶೆಟ್ಟಿ, ಜಿಪಂ ಮಾಜಿ ಸದಸ್ಯ ಆರ್. ಬಾಲರಾಜು, ನಗರಸಭಾ ಮಾಜಿ ಸದಸ್ಯ ಗಣೇಶ್ ದೀಕ್ಷಿತ್, ಮಾಜಿ ಅಧ್ಯಕ್ಷ ಮಹದೇವ ನಾಯಕ, ಮುಖಂಡರಾದ ಕೊಪ್ಪಲೂರು ಹನುಮಂತಶೆಟ್ಟಿ, ಗೌಡಿಕೆ ಮಾದಪ್ಪ, ಎಸ್. ಬಾಲಸುಬ್ರಹ್ಮಣ್ಯ, ಮುಖಂಡರಾದ ಬಸವಣ್ಣ, ನಾಗರಾಜು, ಶಿವಣ್ಣ, ಆಲೂರು ಬಾಬು, ಪ್ರಶಾಂತ್ ಮುಂತಾದವರು ಉಪಸ್ಥಿತರಿದ್ದರು.

ಚೆಕ್ ಬೌನ್ಸ್ ಪ್ರಕರಣ: ವೈಎಸ್‌ವಿ ದತ್ತಾ ವಿರುದ್ಧ ಜಾಮೀನು ರಹಿತ ಬಂಧನ ವಾರೆಂಟ್



ಬೆಂಗಳೂರು: ಚೆಕ್ ಬೌನ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಶಾಸಕ ವೈಎಸ್‌ವಿ ದತ್ತಾ ಅವರ ವಿರುದ್ಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಬುಧವಾರ ಜಾಮೀನು ರಹಿತ ಬಂಧನ ವಾರೆಂಟ್ ಜಾರಿಗೊಳಿಸಿದೆ.

ವೈಎಸ್ ವಿ ದತ್ತಾ ಅವರ ವಿರುದ್ಧ ಸಿ.ಎಸ್. ಸೋಮೇಗೌಡ ಎಂಬವರು ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದು, ಪ್ರಕರಣದ ವಿಚಾರಣೆ ನಡೆಸಿದ ನಗರದ 42ನೇ ಎಸಿಎಂಎಂ ಕೋರ್ಟ್ ನ್ಯಾಯಾಧೀಶೆ ಜೆ.ಪ್ರೀತ್ ಅವರು ಆರೋಪಿ ವಿರುದ್ಧ ಜಾಮೀನು ರಹಿತ ಬಂಧನ ವಾರೆಂಟ್ ಜಾರಿ ಮಾಡಿ ಆದೇಶ ಹೊರಡಿಸಿದ್ದಾರೆ.

ವಿಚಾರಣೆಗೆ ಗೈರು ಹಾಜರಾಗಿದ್ದ ಮಾಜಿ ಶಾಸಕ ವೈಎಸ್‌ವಿ ದತ್ತಾ ಅವರ ವಿರುದ್ಧ ಬಂಧನ ವಾರೆಂಟ್ ಹೊರಡಿಸಲಾಗಿದ್ದು, ಮಾರ್ಚ್ 27ಕ್ಕೆ ವೈಎಸ್‌ವಿ ದತ್ತಾ ಅವರನ್ನು ಕೋರ್ಟ್‌ಗೆ ಹಾಜರುಪಡಿಸುವಂತೆ ಬೆಂಗಳೂರು ಉತ್ತರ ಡಿಸಿಪಿಗೆ ಸೂಚನೆ ನೀಡಲಾಗಿದೆ.

ಕೊಹಿನೂರ್ ವಜ್ರ ರಹಿತ ಕಿರೀಟ ಆರಿಸಿಕೊಂಡ ಬ್ರಿಟನ್ ರಾಣಿ

ಲಂಡನ್: ಬ್ರಿಟನ್ ರಾಣಿ ಕ್ಯಾಮಿಲ್ಲಾ ಅವರು ತಮ್ಮ ಪತಿ ಮೂರನೇ ಕಿಂಗ್ ಚಾರ್ಲ್ಸ್ ಅವರ ಪಟ್ಟಾಭಿಷೇಕದಲ್ಲಿ ವಿಶ್ವಪ್ರಸಿದ್ಧ ಭಾರತದ ಕೊಹಿನೂರ್ ವಜ್ರವಿರದ ಕಿರೀಟ ಧರಿಸಲಿದ್ದಾರೆ.




ಮೇ 6ರಂದು ಪಟ್ಟಾಭಿಷೇಕ ನಡೆಯಲಿದೆ. ವಸಾಹತುಶಾಹಿ ಯುಗದ, ವಿವಾದಿತ ಈ ವಜ್ರದ ಮೇಲೆ ಭಾರತ ತನ್ನ ಹಕ್ಕು ಸಾಧಿಸುತ್ತಿದೆ.

ರಾಣಿ ಎರಡನೇ ಎಲಿಜಬೆತ್ ಅವರ ತಾಯಿ, ರಾಣಿ ಎಲಿಜಬೆತ್ ಅವರು ಧರಿಸುತ್ತಿದ್ದ, ವಿಶ್ವದ ಅತಿದೊಡ್ಡ ಕಟ್ ವಜ್ರಗಳಲ್ಲಿ ಒಂದನ್ನು ಹೊಂದಿರುವ ರಾಣಿ ಮೇರಿಯ ಕಿರೀಟವನ್ನು ಕ್ಯಾಮಿಲ್ಲಾ ಆಯ್ಕೆ ಮಾಡಿದ್ದಾರೆ ಎಂದು ಬಕಿಂಗ್‌ಹ್ಯಾಮ್ ಅರಮನೆ ಘೋಷಿಸಿದೆ.

2ನೇ ಎಲಿಜಬೆತ್ ಅವರ ಸ್ಮರಣಾರ್ಥ ಲಂಡನ್ ಗೋಪುರದಲ್ಲಿ ಪ್ರದರ್ಶನಕ್ಕಿಡಲಾಗಿರುವ ರಾಜಮನೆತನದ ಆಭರಣಗಳಲ್ಲಿ ರಾಣಿ ಮೇರಿ ಕಿರೀಟವನ್ನು ಇದೇ ಕಾರಣಕ್ಕೆ ಮಂಗಳವಾರ ತೆಗೆದಿರಿಸಲಾಗಿದೆ. 105.6 ಕ್ಯಾರೆಟ್ ತೂಗುವ ಕೊಹಿನೂರ್ ವಜ್ರವು ವಿಶ್ವದ ಅತಿದೊಡ್ಡ ಕಟ್ ವಜ್ರಗಳಲ್ಲಿ ಒಂದಾಗಿದೆ. ಇದನ್ನು 1850ರಲ್ಲಿ ರಾಣಿ ವಿಕ್ಟೋರಿಯಾಗೆ ಅರ್ಪಿಸಲಾಗಿತ್ತು ಎಂದು 'ಸ್ಕೈ ನ್ಯೂಸ್' ವರದಿ ಮಾಡಿದೆ.

ಡಾ.ರಾಗೌ ಅಭಿನಂದನಾ ಗ್ರಂಥ ಲೋಕಾರ್ಪಣೆ

ರಾಗೌ ಕೃತಿಗಳಲ್ಲಿ ಚಾರಿತ್ರಿಕ ಪ್ರಜ್ಞೆ ಇದೆ: ಮೊಯಿಲಿ ಬಣ್ಣನೆ



'ಡಾ.ರಾಗೌ–80 ನುಡಿಗೌರವ ಅಭಿನಂದನಾ ಗ್ರಂಥ ಹಾಗೂ ಡಾ.ರಾಗೌ ಅವರ ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು' ಕೃತಿಗಳನ್ನು ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ ಬುಧವಾರ ಲೋಕಾರ್ಪಣೆಗೊಳಿಸಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಆದಿಚುಂಚನಗಿರಿ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಶಾಖಾ ಮಠದ ಸೋಮನಾಥೇಶ್ವರ ಸ್ವಾಮೀಜಿ, ಸಾಹಿತಿ ಸಿಪಿಕೆ, ಮಾಜಿ ಶಾಸಕ ವಾಸು, ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮತ್ತಿತರರಿದ್ದರು.

ಜಾತ್ಯಾತೀತ ಕಾನೂನು ಕೊಟ್ಟ ರಾಷ್ಟ್ರ ಭಾರತ...

ಕ್ರಿಸ್ತ ಪೂರ್ವ ಹಾಗೂ ಕ್ರಿಸ್ತಶಕದಲ್ಲಿಯೂ ಮೂಢನಂಬಿಕೆಗಳು ಹಾಗೂ ಮತೀಯ ಬಂಧನಗಳಿಂದ ಹೊರಬಂದು ವಿಶ್ವದಲ್ಲಿಯೇ ಜಾತ್ಯಾತೀತ ಕಾನೂನು ಕೊಟ್ಟ ರಾಷ್ಟ್ರ ಭಾರತ ಎಂದು ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ ಹೇಳಿದರು.

ಭಾರತೀಯ ನ್ಯಾಯಶಾಸ್ತ್ರದ ಕುರಿತು ಹಲವು ವರ್ಷಗಳಿಂದ ಪುಸ್ತಕ ಬರೆಯುತ್ತಿದ್ದೇನೆ. ಹಲವರು ನೀವ್ಯಾಕೆ ಇದನ್ನು ಬರೆಯುತ್ತಿದ್ದೀರಿ ಎಂದು ಪ್ರಶ್ನಿಸುವುದರ ಜೊತೆಗೆ ವೈಜ್ಞಾನಿಕವಲ್ಲ, ಚಾರಿತ್ರಿಕವಾಗಿ ಸತ್ಯವಲ್ಲ ಹಾಗೂ ಮತೀಯವಾದುದು ಎಂದು ಹೇಳಿದ್ದಾರೆ. ಆದರೆ ನನ್ನ ವೈಯಕ್ತಿಕ ಅಧ್ಯಯನದ ಪ್ರಕಾರ ವಿಶ್ವದಲ್ಲಿಯೇ ಜಾತ್ಯಾತೀತ ಕಾನೂನು ಕೊಟ್ಟ ರಾಷ್ಟ್ರ ಭಾರತವಾಗಿದ್ದು, ಸದ್ಯದಲ್ಲಿಯೇ ಹೊರಬರುವ ನನ್ನ ಪುಸ್ತಕದಲ್ಲಿ ಬಹಳ ಸ್ಪಷ್ಟವಾಗಿ ಕಾಣಿಸಲಿದೆ ಎಂದರು.

ಅನೇಕ ಮೌಲ್ಯಗಳನ್ನು ನಾವು ಅಪಮೌಲ್ಯ ಮಾಡಿದ್ದೇವೆ. ನಮ್ಮ ಸಾಹಿತಿಗಳು, ಇತಿಹಾಸಕಾರರು, ವಿದ್ವಾಂಸರೇ ಮಾಡಿದ್ದಾರೆ. ಆದ್ದರಿಂದ ಸತ್ಯ ಶೋಧಿಸಿ ಅಧ್ಯಯನ ಮಾಡಿ ಸತ್ಯಾಂಶಗಳನ್ನು ಹೊರತೆಗೆಯುವುದು ಮುಖ್ಯವಾಗಿದೆ. ನಮ್ಮ ಬಗ್ಗೆ ನಾವೇ ತಿಳಿದುಕೊಂಡಿಲ್ಲ. ನಮ್ಮನ್ನೇ ನಾವು ಅಂಧಕಾರದೊಳಗೆ ತಳ್ಳುತ್ತಿದ್ದೇವೆ. ಅಂಧಕಾರದಿಂದ ಹೊರಗೆ ಬಂದು ಹೊಸ ಪ್ರಕಾಶವನ್ನು ಜಗತ್ತಿಗೆ ನೀಡುವ ಶಕ್ತಿ ಭಾರತಕ್ಕಿದೆ ಎಂಬುದನ್ನು ಡಾ.ರಾಗೌ ಅವರ ಕೃತಿಗಳು ಸ್ಪಷವಾಗಿ ಅರ್ಥಮಾಡಿಸುತ್ತವೆ ಎಂದು ಹೇಳಿದರು.

ಮೈಸೂರು, ಫೆ.15(ಎಂಕೆ)– ಮಂಡ್ಯದ ಕರ್ನಾಟಕ ಸಂಘ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸಂವಹನ ಪ್ರಕಾಶನ ಹಾಗೂ ಡಾ.ರಾಗೌ(ಪ್ರೊ.ರಾಮೇಗೌಡ) ಶಿಷ್ಯರು–ಅಭಿಮಾನಿ ಬಳಗದ ವತಿಯಿಂದ 'ಡಾ.ರಾಗೌ –80 ನುಡಿಗೌರವ ಅಭಿನಂದನಾ ಗ್ರಂಥ ಹಾಗೂ ಡಾ.ರಾಗೌ ಅವರ ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು' ಕೃತಿಗಳನ್ನು ಬುಧವಾರ ಲೋಕಾರ್ಪಣೆಗೊಳಿಸಲಾಯಿತು.

ಮೈಸೂರು ವಿವಿ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಿದ್ದ ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಹಾಗೂ ಮಾಜಿ ಕೇಂದ್ರ ಸಚಿವ ಎಂ.ವೀರಪ್ಪ ಮೊಯಿಲಿ ಎರಡೂ ಕೃತಿಗಳನ್ನು ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಅತ್ಯಂತ ಸೌಮ್ಯ, ಸತ್ವಶಾಲಿ ಪ್ರಾಧ್ಯಾಪಕರು, ಕವಿಗಳು, ಲೇಖಕರೂ ಆಗಿದ್ದಾರೆ ಡಾ.ರಾಗೌ, ಅನೇಕ ವಿದ್ವನ್ಮಣಿಗಳನ್ನು ನಾಡಿಗೆ ಸಮರ್ಪಿಸಿದ ಪ್ರಾಚಾರ್ಯರಾಗಿದ್ದಾರೆ. 'ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು' ಎಂಬ ಅವರ ಪಿಹೆಚ್‌ಡಿ ಮಹಾ ಪ್ರಬಂಧ, ಕನ್ನಡ ಸಾರಸ್ವತ ಲೋಕಕ್ಕೆ ತಿಲಕಪ್ರಾಯವಾದ ಕೃತಿಯಾಗಿದೆ ಎಂದು ಬಣ್ಣಿಸಿದರು.

ಕನ್ನಡದಲ್ಲಿ ಸಾಹಿತ್ಯ, ಭಾಷೆ, ಜಾನಪದ ಕುರಿತು ಅನೇಕ ಅಧ್ಯಯನಗಳು, ಸಂಶೋಧನೆಗಳು ನಡೆದಿದೆ. ಇತ್ತೀಚೆಗೆ ಸಾಹಿತ್ಯೇತರವಾದ ಅಧ್ಯಯನಗಳು ನಡೆಯುತ್ತಿವೆ. ಸಾಹಿತ್ಯ ಮತ್ತು ದಾಖಲೆಗಳು ಬೇರೆ ಬೇರೆ. ಸಾಹಿತ್ಯ ಭಾವನಾತ್ಮಕತೆಯನ್ನು ತುಂಬಿಕೊಂಡಿದ್ದರೆ, ದಾಖಲೆಗಳು ಶಾಸನಗಳಿಂದ ಕೂಡಿರುತ್ತವೆ. ಇತಿಹಾಸವನ್ನು ನಾವು ನಿಜವಾಗಿಯೂ ಅಧ್ಯಯನ ಮಾಡಬೇಕು ಮತ್ತು ತಿಳಿದುಕೊಳ್ಳಬೇಕು. ಈ ನಿಟ್ಟಿನಲ್ಲಿ ದಾಖಲಾತ್ಮಕ ಮತ್ತು ಭಾವನಾತ್ಮಕ ಚರಿತ್ರೆಗಳ ಸಮ್ಮಿಳಿತವಾದಂತಹ ಅಧ್ಯಯನವನ್ನು ಸಾಹಿತ್ಯ ಲೋಕಕ್ಕೆ ರಾಗೌ ನೀಡಿದ್ದಾರೆ ಎಂದರು.

ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದಂತೆ ಸಾಹಿತ್ಯವಿಲ್ಲದ ಅಸ್ತಿ ಪಂಜರದಂತಹ ಹಲವಾರು ಕೃತಿಗಳು ಬಂದಿವೆ. ಅದಕ್ಕೆ ರಕ್ತ, ಮಾಂಸದ ರೀತಿಯಲ್ಲಿ ಸಾಹಿತ್ಯದ ವಿಚಾರಗಳನ್ನು ತುಂಬಿ ಸಮಗ್ರತೆಯನ್ನು, ಪರಿಪೂರ್ಣತೆಯನ್ನು ನೀಡಿದಂತಹ ನಾಡಿನ ಏಕೈಕ ಕೃತಿ ರಾಗೌ ಅವರದ್ದಾಗಿದೆ. ರಾಷ್ಟ್ರೀಯ ಸಾಹಿತ್ಯ ಕ್ಷೇತ್ರದಲ್ಲಿದ್ದ ಕೊರತೆಯನ್ನು ನೀಗಿಸಿದ್ದಾರೆ. ಇತಿಹಾಸದ ಒಂದು ಘಟನೆಯನ್ನು ಅನೇಕ ಆಧಾರಗಳಿಂದ ಪುಷ್ಟೀಕರಿಸಿ, ಸ್ಪಷ್ಟಪಡಿಸಿದ್ದಾರೆ. ರಾಷ್ಟ್ರಕವಿ ಗೋವಿಂದ ಪೈ ಅವರ ಅಧ್ಯಯನಗಳಂತೆಯೇ ರಾಗೌ ಅವರ ಅಧ್ಯಯನವಿದ್ದು, ಇತಿಹಾಸದ ಮೇಲೆ ದೊಡ್ಡ ಪ್ರಕಾಶವನ್ನು ನೀಡಿದ ದೊಡ್ಡ ವಿದ್ವಾಂಸರಾಗಿದ್ದಾರೆ. ಸತ್ಯ ಹುಡುಕುವವರೆಗೂ ಅವರು ವಿರಮಿಸುವುದಿಲ್ಲ ಅವರ ಅಧ್ಯಯನದಲ್ಲಿ ಸ್ಪಷ್ಟತೆ, ಶಿಸ್ತು ಮತ್ತು ಸರಳತೆಯನ್ನು ನೋಡಬಹುದಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಚಾರಿತ್ರಿಕ ಪ್ರಜ್ಞೆ ಇದೆ: ಮೆಕ್‌ಡೊನಾಲ್ಡ್ ಎಂಬ ವಿದ್ವಾಂಸ, ಭಾರತೀಯರಿಗೆ ಚಾರಿತ್ರಿಕ ಪ್ರಜ್ಞೆಯೇ ಇಲ್ಲವೆಂದು ಹೇಳಿದ್ದಾನೆ. ಆದರೆ ಚಾರಿತ್ರಿಕ ಪ್ರಜ್ಞೆ ಇದೆ ಎಂಬುದನ್ನು ನಾವಿಂದು ಸಾಬೀತು ಮಾಡಬೇಕಾಗಿದೆ. ಪ್ರಜ್ಞೆ ಇದೆ ಎಂಬುದಕ್ಕೂ ಸಾಕಷ್ಟು ಪುರಾವೆಗಳನ್ನು ಕೊಡಬಲ್ಲೆ. ರಾಗೌ ಅವರ ಕೃತಿಗಳು ಭಾರತೀಯರಿಗೆ ಚಾರಿತ್ರಿಕ ಪ್ರಜ್ಞೆ ಇರುವುದನ್ನು ಸಾಬೀತುಪಡಿಸಿರುವುದು ಕನ್ನಡ ನಾಡಿಗೆ ಹೆಮ್ಮೆಯಾಗಿದೆ. ಇತಿಹಾಸವನ್ನು ಅಳಿಸಬೇಡಿ. ಹೊಸ ಇತಿಹಾಸವನ್ನು ಬರೆಸಬೇಕು ಎಂಬ ಸಂದೇಶವನ್ನು ರಾಗೌ ಅವರ ಕೃತಿಗಳಲ್ಲಿ ಕಾಣುತ್ತೇವೆ. ಅವರ ಜಾನಪದ ನಿಘಂಟು ಸಾಹಿತ್ಯ, ಸಂಸ್ಕೃತಿಯ ನಿಧಿಯಾಗಿದ್ದು, ಅದನ್ನು ಉಳಿಸಿಕೊಂಡು ಹೋಗಬೇಕು ಎಂದು ತಿಳಿಸಿದರು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಆದಿಚುಂಚನಗಿರಿ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಶಾಖಾ ಮಠದ ಸೋಮನಾಥೇಶ್ವರ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಹಿರಿಯ ಸಾಹಿತಿ ಪ್ರೊ.ಸಿ.ಪಿ. ಕೃಷ್ಣಕುಮಾರ್(ಸಿಪಿಕೆ), ಮಾಜಿ ಶಾಸಕ ವಾಸು, ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್, ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್ ಗೌಡ ಮತ್ತಿತರರು ಉಪಸ್ಥಿತರಿದ್ದರು.

ಕಾವೇರಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ 14ನೇ ವಾರ್ಷಿಕೋತ್ಸವ



ಮೈಸೂರು, ಫೆ15– ಮೈಸೂರಿನ ಬನ್ನೂರು ಮುಖ್ಯ ರಸ್ತೆಯಲ್ಲಿರುವ ಕಾವೇರಿ ಹೃದಯ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ 14ನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಆಸ್ಪತ್ರೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಶುಭಕೋರಿದರು. ಆಸ್ಪತ್ರೆಯ ಮುಖ್ಯಸ್ಥ ಡಾ.ಜಿ.ಆರ್. ಚಂದ್ರಶೇಖರ್, ವ್ಯವಸ್ಥಾಪಕ ನಿರ್ದೇಶಕಿ ಡಾ.ಸರಳಾ ಚಂದ್ರಶೇಖರ್, ವೈದ್ಯಕೀಯ ಅಧೀಕ್ಷಕ ಡಾ.ಬಿ.ಎನ್. ರಾಜೀವ, ಸ್ನಾತಕೋತ್ತರ ಪದವೀಧರರು, ವೈದ್ಯರು, ನರ್ಸಿಂಗ್, ಅರೆವೈದ್ಯಕೀಯ, ವೈದ್ಯಕೀಯ ಸಿಬ್ಬಂದಿಗಳು ಹಾಜರಿದ್ದರು.

ಈ ವೇಳೆ ಆಸ್ಪತ್ರೆಯ ಮುಖ್ಯಸ್ಥ ಡಾ.ಜಿ.ಆರ್.ಚಂದ್ರಶೇಖರ್ ಮಾತನಾಡಿ, 2009ರಲ್ಲಿ ಆರಂಭಗೊಂಡ ಕಾವೇರಿ ಹೃದಯ ಮತ್ತು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯು ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸುತ್ತಿದ್ದು, ಜನರ ಆರೋಗ್ಯ ರಕ್ಷಣೆ ಮಾಡುವ ನಿಟ್ಟಿನಲ್ಲಿ ಶ್ರೇಷ್ಠತೆಯ ಕೇಂದ್ರವಾಗಿ ವಿಕಸನಗೊಂಡಿದೆ. ಸಮಾಜದ ಎಲ್ಲಾ ವರ್ಗಗಳಿಗೆ ಗುಣಮಟ್ಟದ ವೈದ್ಯಕೀಯ ಚಿಕಿತ್ಸೆ ಹಾಗೂ 200 ಹಾಸಿಗೆ ಸೌಲಭ್ಯವನ್ನು ಒಳಗೊಂಡಿದೆ ಎಂದು ತಿಳಿಸಿದರು.

ಮೈಸೂರಿಗೆ ಪ್ರಸಕ್ತ ರಾಜ್ಯ ಬಜೆಟ್‌ನಲ್ಲಿ ವಿಶೇಷ ಪ್ಯಾಕೇಜ್ ಕಲ್ಪಿಸಲು ಆಗ್ರಹಿಸಿ ಪ್ರತಿಭಟನೆ

ಮೈಸೂರು, ಫೆ15(ಪಿಎಂ)– ಪ್ರಸಕ್ತ ಸಾಲಿನ ರಾಜ್ಯ ಬಜೆಟ್‌ನಲ್ಲಿ ಮೈಸೂರು ಜಿಲ್ಲೆಗೆ ವಿಶೇಷ ಪ್ಯಾಕೇಜ್ ಘೋಷಿಸಬೇಕೆಂದು ಒತ್ತಾಯಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಮೊದಲು ರಾಜ್ಯದ ರಾಜಧಾನಿಯಾಗಿದ್ದ, ಮಹಾರಾಜರು ಆಳಿದ ನಮ್ಮ ಮೈಸೂರು ನಗರ, ಜಿಲ್ಲೆಯಲ್ಲಿ ಒಂದು ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಇಲ್ಲದಿರುವುದು ಅತ್ಯಂತ ನೋವಿನ ಸಂಗತಿ. ನೆರೆ ಜಿಲ್ಲೆಗಳಲ್ಲಿ ಈಗಾಗಲೇ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿದ್ದು, ಮೈಸೂರಿನಲ್ಲಿ ಇಲ್ಲದಿರುವುದು ವಿಪರ್ಯಾಸ. ಹಾಗಾಗಿ ಸರ್ಕಾರ ಈ ಸಾಲಿನ ಬಜೆಟ್‌ನಲ್ಲಿ ಮೈಸೂರಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಹಾಗೂ ಸುಸಜ್ಜಿತ ಹಾಸ್ಟೆಲ್ ಆರಂಭಿಸುವ ಘೋಷಣೆ ಮಾಡಿ ಅಗತ್ಯ ಅನುದಾನ ಮೀಸಲಿರಿಸಬೇಕು ಎಂದು ಒತ್ತಾಯಿಸಿದರು.

ಮೈಸೂರಿನಲ್ಲಿ ಸುಸಜ್ಜಿತ 'ಕನ್ನಡ ಭವನ' ನಿರ್ಮಿಸಬೇಕು. ಇಲ್ಲಿನ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಬೇಕು. ಮೈಸೂರಿಗೆ ಐಟಿ–ಬಿಟಿ ಟೆಕ್‌ಪಾರ್ಕ್ ನೀಡಬೇಕು. ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಗೆ ಶ್ರೀ ಆದಿಚುಂಚನಗಿರಿ ಮಠದ ಭೈರವೈಕ್ಯ ಡಾ.ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಹೆಸರು ನಾಮಕರಣ ಮಾಡಬೇಕು. ಜೊತೆಗೆ ಬಜೆಟ್‌ನಲ್ಲಿ ಮೇಕೆದಾಟು ಅಣೆಕಟ್ಟು ಯೋಜನೆ ಪ್ರಾರಂಭದ ಘೋಷಣೆ ಮಾಡಬೇಕೆಂದು ಆಗ್ರಹಿಸಿದರು.

ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಮುಖಂಡರಾದ ಸಿ.ಹೆಚ್. ಕೃಷ್ಣಯ್ಯ, ಡಾ.ಶಾಂತರಾಜೇಅರಸ್, ಮೊಗಣ್ಣಾಚಾರ್, ಪ್ರದೀಶ್, ಪ್ರಭುಶಂಕರ್, ವಿಜಯೇಂದ್ರ ಅನಿಲ್, ಯೋಗೀಶ್ ಉಪ್ಪಾರ್, ಮನು ನಾಯಕ್, ಪ್ರಭಾಕರ, ಡಾ.ನರಸಿಂಹೇಗೌಡ, ಪದ್ಮಾ, ಬಸವರಾಜು, ಸ್ವರಾಜ್ ಜೈನ್, ಗೊರೂರು ಮಲ್ಲೇಶ್, ಸಂತೋಷ್, ಮಿನಿ ಬಂಗಾರಪ್ಪ ಪ್ರದೀಪ್, ದಿಲೀಪ್, ಕುಮಾರ್, ಕೃಷ್ಣಮೂರ್ತಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಂಸ್ಕೃತಿ, ಸಂಸ್ಕೃತ ಭಾಷೆ ರಕ್ಷಣೆ ಎಲ್ಲರ ಹೊಣೆಯಾಗಬೇಕು

ಸೋಸಲೆ ಶ್ರೀ ವ್ಯಾಸರಾಜರ ಮಠದ ಡಾ.ವಿದ್ಯಾಶ್ರೀಶತೀರ್ಥರ ಸಲಹೆ



ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಹೆಚ್ಚು ಗೌರವ ಸಲ್ಲಬೇಕು...

ಮೈಸೂರು ವಿವಿ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿರುವ ಸಂಪತ್ತಿಗೆ ಮತ್ತು ಅಲ್ಲಿ ನಡೆಯುವ ಕಾರ್ಯಚಟುವಟಿಕೆಗಳಿಗೆ ಹೆಚ್ಚು ಗೌರವ ಸಲ್ಲಬೇಕಾಗಿದೆ ಎಂದು ಸಂಸ್ಕೃತ ವಿದ್ವಾಂಸ ಹೆಚ್.ವಿ.ನಾಗರಾಜರಾವ್ ಹೇಳಿದರು.

'ಕಾಳಿದಾಸ ಕೃತಿ ಸಮೀಕ್ಷಾ' ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಾಚೀನ ಕಾಲದ ತಾಳೆಗರಿಗಳನ್ನು ಸಂರಕ್ಷಿಸುವುದು ಬಹಳ ಕಷ್ಟ. ಈ ನಿಟ್ಟಿನಲ್ಲಿ ಅತ್ಯುತ್ತಮ ಕಾರ್ಯವನ್ನು ಮಾಡುತ್ತಿರುವ ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಬೆಂಬಲ ನೀಡಿದರೆ ದೇಶದ ಸಂಸ್ಕೃತಿಯನ್ನು ಉಳಿಸಿದಂತಾಗುತ್ತದೆ ಎಂದರು.

ಕಾಳಿದಾಸನಂತಹ ಮಹಾಕವಿ ನಮ್ಮಲ್ಲಿ ಹುಟ್ಟಿದ್ದ ಎಂಬುದಕ್ಕೆ ರವಿಕೀರ್ತಿ ತನ್ನ ಶಾಸನದಲ್ಲಿ ಬರೆದಿದ್ದಾನೆ. ಇಡೀ ದೇಶದಲ್ಲಿ ಕಾಳಿದಾಸನ ಹೆಸರೇಳುವ ಶಾಸನ ಇರುವುದು ರಾಜ್ಯದ ಐಹೊಳೆಯಲ್ಲಿ 500ಕ್ಕೂ ಹೆಚ್ಚು ಮಂದಿ ಕಾಳಿದಾಸನ ಹೆಸರಿನಲ್ಲಿ ಪಿಹೆಚ್‌ಡಿ ಮಾಡಿದ್ದಾರೆ. ಸಾಕಷ್ಟು ಪುಸ್ತಕಗಳು ಬಂದಿವೆ. ನೂರಾರು ಕಾರ್ಯಾಗಾರಗಳನ್ನು ಮಾಡಿದರೂ ಕಾಳಿದಾಸನ ಕುರಿತ ವಿಷಯಗಳು ದೊರೆಯುತ್ತವೆ ಎಂದು ತಿಳಿಸಿದರು.

ನಾಡಿನ ಸಾಧಕರನ್ನು ಸ್ಮರಿಸಬೇಕು: ಕನ್ನಡನಾಡಿನಲ್ಲೇ ಹುಟ್ಟಿ ನಮ್ಮಲ್ಲೇ ಅದ್ಭುತವಾದ ಕೆಲಸಗಳನ್ನು ಮಾಡಿರುವವರನ್ನು ಸ್ಮರಿಸುವುದು ಮುಖ್ಯವಾಗಿದೆ. ನಾಲ್ಕು ವೇದಗಳಿಗೆ ಭಾಷ್ಯವನ್ನು ಬರೆದಂತಹ ಶಯನಾಚಾರ್ಯರು, ಟಿಪ್ಪು ಸುಲ್ತಾನನ ಕಾಲದಲ್ಲಿದ್ದ ಪ್ರಧಾನ್ ವೆಂಕಪ್ಪಯ್ಯ ಅತ್ತಿಮಬ್ಬೆಯಂತಹ ವ್ಯಕ್ತಿಗಳ ವ್ಯಕ್ತಿತ್ವವನ್ನು ಜನರಿಗೆ ಪರಿಚಯಿಸುವ ನಿಟ್ಟಿನಲ್ಲಿ ಕಾರ್ಯಾಗಾರಗಳನ್ನು ಆಯೋಜಿಸುವಂತೆ ಮನವಿ ಮಾಡಿದರು. ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಉಪಸ್ಥಿತರಿದ್ದರು.

ಮೈಸೂರು, ಫೆ.15(ಎಂಕೆ)– ಸನಾತನ ಭಾರತೀಯ ಸಂಸ್ಕೃತಿ ಮತ್ತು ಸಂಸ್ಕೃತ ಭಾಷೆ ರಕ್ಷಣೆ ಎಲ್ಲರ ಹೊಣೆಯಾಗಬೇಕು ಎಂದು ಸೋಸಲೆ ಶ್ರೀ ವ್ಯಾಸರಾಜರ ಮಠದ ಡಾ.ಶ್ರೀ ವಿದ್ಯಾಶ್ರೀಶತೀರ್ಥ ಸ್ವಾಮೀಜಿ ಹೇಳಿದರು.

ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮೈಸೂರು ವಿವಿ ಪ್ರಾಚ್ಯವಿದ್ಯಾ ಸಂಶೋಧನಾಲಯ ಹಾಗೂ ಶ್ರೀ ವ್ಯಾಸತೀರ್ಥ ಸಂಶೋಧನಾ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ 'ಕಾಳಿದಾಸ ಕೃತಿ ಸಮೀಕ್ಷಾ' ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರದಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ಹೆಚ್ಚಿನ ಪ್ರೋತ್ಸಾಹ, ಅನುದಾನ ಮತ್ತು ಮಾನ್ಯತೆ ದೊರಕುತ್ತಿರುವುದು ಶ್ಲಾಘನೀಯ. ಆದರೆ ಇದರೊಂದಿಗೆ ನಮ್ಮ ನೆಲದ ಮಹತ್ವಕ್ಕೆ ವಿಶ್ವಮಟ್ಟದಲ್ಲಿ ಮನ್ನಣೆ ತಂದುಕೊಡಲು ಕಾರಣವಾದ ಸಂಸ್ಕೃತ ಸಾಹಿತ್ಯದ ರಕ್ಷಣೆಗೂ ಆದ್ಯತೆ ಲಭ್ಯವಾಗಬೇಕು. ವಿಜ್ಞಾನ ಮತ್ತು ತಂತ್ರಜ್ಞಾನ ನೀಡಿದ ಕೊಡುಗೆಗಳನ್ನು ಸ್ವೀಕರಿಸುವುದರ ಜೊತೆಗೆ ಪ್ರಾಚೀನ ಜ್ಞಾನ ಸಂಪತ್ತುಗಳನ್ನು ಮುಂದಿನ ಪೀಳಿಗೆಗೆ ಬಳುವಳಿಯಾಗಿ ನೀಡುವುದು ನಮ್ಮ ಗುರುತರ ಜವಾಬ್ದಾರಿಯಾಗಬೇಕು ಎಂದರು.

ಪ್ರಾಚೀನ ವಿದ್ಯೆಗಳ ರಕ್ಷಣೆ, ತಾಳೆಗರಿ ಗ್ರಂಥಗಳ ಸಂರಕ್ಷಣೆಗಾಗಿ 123 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಸೇವೆಯನ್ನು ಶ್ಲಾಘಿಸಿದ ಸ್ವಾಮೀಜಿ, ಕಾಳಿದಾಸ ವಿಶ್ವಮಾನ್ಯ ಕವಿ. ಆತನಿಗೆ ಸರಿಸಾಟಿ ಯಾರೂ ಇಲ್ಲ. ಜಡವನ್ನು ಚೇತನ ಮಾಡುವ, ಚೇತನವನ್ನು ಮಹಾ ಚೈತನ್ಯಗೊಳಿಸುವ ಕಾವ್ಯಶಕ್ತಿ ಆತನಿಗೆ ಇದೆ. ಕಾಳಿದಾಸನ ಕಾವ್ಯಗಳ ಬಗ್ಗೆ ಆಧುನಿಕ ದೃಷ್ಟಿಕೋನದಿಂದಲೂ ನೋಡುವ, ಹೊಸ ಹೊಸ ಅಂಶಗಳತ್ತ ಬೆಳಕು ಚೆಲ್ಲುವ ಕೆಲಸ ಯುವ ವಿದ್ವಾಂಸರಿಂದ ಆಗಬೇಕು. ಕಾವ್ಯರಸ ಆಸ್ವಾದಿಸುವವರ ಸಂಖ್ಯೆ ಹೆಚ್ಚಾಗಬೇಕು. ನಮ್ಮ ಪರಂಪರೆಗೆ ಮೈಸೂರಿನ ಕೊಡುಗೆ ಅನನ್ಯವಾಗಿದೆ. ಇಂತಹ ಸಾಂಸ್ಕೃತಿಕ ರಾಜಧಾನಿಯಲ್ಲಿ ಕಾವ್ಯಾಸಕ್ತರು ಕೇವಲ ವಿಚಾರಸಂಕಿರಣಗಳಿಗಾಗಿ ನಿರೀಕ್ಷೆ ಮಾಡದೇ ಪ್ರತಿ ತಿಂಗಳೂ ಒಂದೆಡೆ ಸೇರಿ ಒಂದು ಆಪ್ತ ಸಂವಾದ, ಗೋಷ್ಠಿಗಳನ್ನು ಆಯೋಜನೆ ಮಾಡಬೇಕು ಎಂದರು.

ಇದೇ ಸಂದರ್ಭ ಪದ್ಮಶ್ರೀ ಪುರಸ್ಕೃತ ಹಿರಿಯ ಸಂಶೋಧಕ ಎಸ್. ಸುಬ್ಬರಾಮನ್ ಅವರನ್ನು ಎರಡೂ ಸಂಸ್ಥೆಗಳ ಪರವಾಗಿ ಸನ್ಮಾನಿಸಲಾಯಿತು. ನಂತರ ನಡೆದ ವಿಚಾರ ಸಂಕಿರಣದಲ್ಲಿ ವಿದ್ವಾಂಸರುಗಳಾದ ಡಾ.ಜಿ. ಕೃಷ್ಣಪ್ರಸಾದ್, ಡಾ.ಶರತ್‌ಚಂದ್ರ ಸ್ವಾಮಿ, ಡಾ.ಟಿ.ವಿ. ಸತ್ಯನಾರಾಯಣ, ಪ್ರೊ.ತಿರುಮಲಾಚಾರ್ಯ ಕುಲಕರ್ಣಿ, ಡಾ.ಉಮಾಕಾಂತ ಭಟ್, ಡಾ.ಹೆಚ್.ವಿ. ನಾಗರಾಜರಾವ್ ಉಪನ್ಯಾಸ ನೀಡಿದರು. ಶ್ರೀ ವ್ಯಾಸತೀರ್ಥ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕ ಸಿ.ಹೆಚ್.ಶ್ರೀನಿವಾಸಮೂರ್ತಿ, ಮೈಸೂರು ವಿವಿ ಪ್ರಾಚ್ಯವಿದ್ಯಾ ಸಂಶೋಧನಾಲಯ ನಿರ್ದೇಶಕ ಡಾ.ಡಿ.ಪಿ. ಮಧುಸೂದನಾಚಾರ್ಯ ಉಪಸ್ಥಿತರಿದ್ದರು.

ಸಿಟಿ ಬಸ್‌ನಲ್ಲಿ ಮಹಿಳೆ ಸರ ಕಳವು

ಮೈಸೂರು, ಫೆ 15– ಸಿಟಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಗೃಹಿಣಿಯ ಮಾಂಗಲ್ಯ ಸರ ಕಳವು ಮಾಡಿರುವ ಘಟನೆ ಮೈಸೂರಿನಲ್ಲಿ ನಡೆದಿದೆ. ಹೆಬ್ಬಾಳ್ 2ನೇ ಹಂತದ ನಿವಾಸಿ ಭಾರತಿ(47) ಸರ ಕಳೆದುಕೊಂಡವರು. ಇವರು ತಮ್ಮ ಸಂಬಂಧಿಕರ ಮನೆಯ ಸತ್ಯನಾರಾಯಣ ಪೂಜೆ ಮುಗಿಸಿಕೊಂಡು ಫೆಬ್ರವರಿ 13ರಂದು ಮಧ್ಯಾಹ್ನ 3.45ರ ಸುಮಾರಿನಲ್ಲಿ ಮಾರ್ಗ ಸಂಖ್ಯೆ 119ರ ಸಿಟಿ ಬಸ್‌ಗೆ ಕೆಆರ್ ಆಸ್ಪತ್ರೆ ಬಳಿ ಹತ್ತಿದ್ದಾರೆ. ಅವರು ಆಕಾಶವಾಣಿ ಸರ್ಕಲ್‌ಗೆ ಬರುವಷ್ಟರಲ್ಲಿ ಅವರ ಕತ್ತಿನಲ್ಲಿದ್ದ 50 ಗ್ರಾಂ ತೂಕದ ಮಾಂಗಲ್ಯ ಸರವನ್ನು ಕಳವು ಮಾಡಲಾಗಿದೆ. ಈ ಸಂಬಂಧ ವಿವಿ ಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾವರೆಕಟ್ಟೆ ಬಳಿ ಯುವಕನ ಹತ್ಯೆ

ಮೈಸೂರು, ಫೆ. 15(ಆರ್‌ಕೆ)– ತಲೆಯನ್ನು ಕಲ್ಲಿನಿಂದ ಜಜ್ಜಿ ಯುವಕನೋರ್ವನನ್ನು ಹತ್ಯೆಗೈದಿರುವ ಘಟನೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ತಾವರೆಕಟ್ಟೆ ಬಳಿ ಕಳೆದ ರಾತ್ರಿ ಸಂಭವಿಸಿದೆ.

ಇಂದು ಬೆಳಗ್ಗೆ ಮೃತದೇಹ ನೋಡಿದ ವಾಯು ವಿಹಾರಿಗಳು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿದ ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಸಂತೋಷ್ ಹಾಗೂ ಸಿಬ್ಬಂದಿ ಮಹಜರು ನಡೆಸಿದಾಗ ಮೃತದೇಹದ ಮೇಲೆ ಬಟ್ಟೆ ಇರಲಿಲ್ಲ. ತಲೆ ಭಾಗದಲ್ಲಿ ಕಲ್ಲಿನಿಂದ ಜಜ್ಜಿದ ಗುರುತಿದ್ದು, ಹೊಟ್ಟೆ ಭಾಗದಲ್ಲಿ ತರಚಿದ ಗಾಯಗಳಿದ್ದ ಕಾರಣ ದುಷ್ಕರ್ಮಿಗಳು ಹತ್ಯೆಗೈದು ಪರಾರಿಯಾಗಿರಬಹುದೆಂದು ಶಂಕಿಸಲಾಗಿದೆ.

ಹತ್ಯೆಯಾಗಿರುವ ಯುವಕ ಸುಮಾರು 24 ವರ್ಷದವನಾಗಿದ್ದು, ತೆಳ್ಳನೆ ಶರೀರ ಹೊಂದಿದ್ದಾನೆ. ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿರಿಸಲಾಗಿದ್ದು, ವಾರಸುದಾರರಿದ್ದಲ್ಲಿ ನಜರ್‌ಬಾದ್ ಠಾಣೆ (0821–2418309) ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ (0821–2418339) ಸಂಪರ್ಕಿಸುವಂತೆ ಕೋರಿದ್ದಾರೆ.

ಜೋಡಿ ಚಿರತೆ ಸೆರೆ ಸಿಕ್ಕಿದ್ದ ಸ್ಥಳದಲ್ಲೇ ಮತ್ತೊಂದು ಚಿರತೆ ಮರಿ ಸೆರೆ

● ಫೆ.10ರಂದು ಎರಡು ಚಿರತೆ ಸೆರೆ ಸಿಕ್ಕಿದ್ದವು ● ಕಳೆದ ರಾತ್ರಿ ಬೋನಿಗೆ ಬಿದ್ದ ಗಂಡು ಚಿರತೆ ಮರಿ

ತಿ.ನರಸೀಪುರ, ಫೆ.15(ಎಂಟಿವೈ)– ತಿ.ನರಸೀಪುರ ತಾಲೂಕಿನ ಮುಸುವಿನ ಕೊಪ್ಪಲು ಗ್ರಾಮದಲ್ಲಿ ಫೆ10ರಂದು ಜೋಡಿ ಚಿರತೆ ಸೆರೆ ಸಿಕ್ಕಿದ್ದ ಸ್ಥಳದಲ್ಲಿಯೇ ಕಳೆದ ರಾತ್ರಿ ಗಂಡು ಚಿರತೆ ಮರಿಯೊಂದು ಬೋನ್‌ಗೆ ಬಿದ್ದಿದ್ದು, ಕೂರ್ಗಳ್ಳಿಯಲ್ಲಿರುವ ಪುನರ್ವಸತಿ ಕೇಂದ್ರಕ್ಕೆ ರವಾನಿಸಲಾಗಿದೆ.



ಐದು ದಿನದ ಹಿಂದೆ ಸೆರೆ ಸಿಕ್ಕಿದ್ದ ಐದು ವರ್ಷದ ಹೆಣ್ಣು ಚಿರತೆಯ ಇನ್ನೊಂದು ಮರಿಯೇ ಇಂದು ಬೋನಿಗೆ ಬಿದ್ದಿದೆ ಎಂದು ವಿಶ್ಲೇಷಿಸಲಾಗಿದೆ. ಚಿರತೆ ಉಪಟಳದ ಹಿನ್ನೆಲೆಯಲ್ಲಿ ಜ.28ರಂದು ಮುಸುವಿನ ಕೊಪ್ಪಲಿನ ಚಂದ್ರಪ್ಪ ಎಂಬುವರ ಜಮೀನಿನಲ್ಲಿ ತುಮಕೂರಿನಿಂದ ತಂದಿರುವ ದೊಡ್ಡ ಬೋನ್ ಇಡಲಾಗಿತ್ತು. ಆಹಾರ ಅರಸಿ ಮರಿಯೊಂದಿಗೆ ಬಂದಿದ್ದ ತಾಯಿ ಚಿರತೆ ಹೆಣ್ಣು ಮರಿಯೊಂದಿಗೆ ಏಕಕಾಲಕ್ಕೆ ಸೆರೆ ಸಿಕ್ಕಿದ್ದವು. ಅಂದು ತಾಯಿಯೊಂದಿಗೆ ಬಂದಿದ್ದ ಗಂಡು ಮರಿ ಗಾಬರಿಯಾಗಿ ಸ್ಥಳದಿಂದ ಪರಾರಿಯಾಗಿತ್ತು ಎಂದು ಶಂಕಿಸಲಾಗಿತ್ತು.

ಫೆ.10ರಂದು ಎರಡು ಚಿರತೆ ಸೆರೆ ಸಿಕ್ಕಿದ್ದರೂ, ದೊಡ್ಡ ಬೋನ್ ಅನ್ನು ಅಲ್ಲಿಯೇ ಇರಿಸಿ, ಅದರೊಳಗೆ ಘಾರಂ ಕೋಳಿ ಇರಿಸಲಾಗಿತ್ತು. ಮಂಗಳವಾರ (ಫೆ.14) ರಾತ್ರಿ ಆಹಾರ ಅರಸಿ ಬಂದು ಬೋನ್‌ನಲ್ಲಿದ್ದ ಕೋಳಿಯನ್ನು ತಿನ್ನಲು ಮುಂದಾಗಿ ಚಿರತೆ ಮರಿ ಸೆರೆ ಸಿಕ್ಕಿದೆ. ಬೋನ್‌ಗೆ ಚಿರತೆ ಬಿದ್ದಿರುವ ವಿಚಾರ ಅರಿತು ಆರ್‌ಎಫ್‌ಓ ನದೀಮ್, ಡಿಆರ್‌ಎಫ್ ಉಮೇಶ್, ನಾಗರಾಜು, ರಕ್ಷಕ ಲೋಕೇಶ್ ಸೇರಿದಂತೆ ಇನ್ನಿತರ ಸಿಬ್ಬಂದಿ ರಾತ್ರಿಯೇ ಚಿಕ್ಕ ಬೋನ್ ಕೊಂಡೊಯ್ದು, ಯಾವುದೇ ಅರವಳಿಗೆ ಮದ್ದು ನೀಡದೆ ಚಿರತೆ ಮರಿಯನ್ನು ವಶಕ್ಕೆ ಪಡೆದಿದ್ದರು. ದೊಡ್ಡ ಬೋನ್ ಬಾಗಿಲಿಗೆ, ಚಿಕ್ಕ ಬೋನ್‌ನ ಬಾಗಿಲು ಸೇರಿಸಿ ಚಿರತೆ ಮರಿಯನ್ನು ಸುರಕ್ಷಿತವಾಗಿ ಸೆರೆ ಹಿಡಿದು, ಡಿಸಿಎಫ್ ಬಸವರಾಜ್ ಅವರ ಆದೇಶ ಮೇರೆಗೆ ಮೈಸೂರಿನ ಕೂರ್ಗಳ್ಳಿಯಲ್ಲಿರುವ ಪುನರ್ವಸತಿ ಕೇಂದ್ರಕ್ಕೆ ತಂದಿದ್ದಾರೆ.

ಈ ಹಿಂದೆ ಸಿಕ್ಕಿದ್ದ ಹೆಣ್ಣು ಮರಿಯೊಂದಿಗೆ ತಾಯಿ ಚಿರತೆಯನ್ನು ಕೂರ್ಗಳ್ಳಿ ಪುನರ್ವಸತಿ ಕೇಂದ್ರದಲ್ಲೇ ಆರೈಕೆ ಮಾಡಲಾಗುತ್ತಿದ್ದು, ಕಳೆದ ರಾತ್ರಿ ಸೆರೆ ಸಿಕ್ಕಿರುವ ಮರಿಯನ್ನು ತಾಯಿ ಮಡಿಲಿಗೆ ಸೇರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸೆರೆ ಸಿಕ್ಕ ಹುಲಿ ಚೇತರಿಕೆ



ಮೈಸೂರು, ಫೆ.15(ಎಂಟಿವೈ)– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಬಳ್ಳೆ ಹಾಡಿ ಬಳಿ ಸೆರೆ ಸಿಕ್ಕ ಹೆಣ್ಣು ಹುಲಿಗೆ ಕೂರ್ಗಳ್ಳಿ ಪುನರ್ವಸತಿ ಕೇಂದ್ರದಲ್ಲಿ ಚಿಕಿತ್ಸೆ ಮುಂದುವರೆಸಲಾಗಿದೆ.

ಹುಲಿಯ ಪಾದ, ಕಿವಿ, ಮೊಣಕಾಲು, ಹಿಂಭಾಗದ ಕಾಲು, ಕಿಬ್ಬೊಟ್ಟೆ, ಇನ್ನಿತರೆಡೆ ಗಂಭೀರ ಸ್ವರೂಪದ ಗಾಯವಾಗಿದ್ದು, ಕೆಲವೆಡೆ ಗಾಯದಲ್ಲಿ ಹುಳು ಪತ್ತೆಯಾಗಿವೆ. ತೀವ್ರ ತರನಾದ ನೋವಿನಿಂದ ಕಂಗೆಟ್ಟಿದ್ದ ಹುಲಿ, ಆಹಾರಕ್ಕಾಗಿ ಹಾಡಿಯಲ್ಲಿನ ಜಾನುವಾರುಗಳನ್ನೇ ಗುರಿಯಾಗಿಸಿಕೊಂಡಿರುವುದು ದೃಢಪಟ್ಟಿದೆ. ಮೃಗಾಲಯದ ಪಶುವೈದ್ಯರ ತಂಡ ಚಿಕಿತ್ಸೆ ನೀಡುತ್ತಿದ್ದು, ಅದರ ಆರೋಗ್ಯದಲ್ಲಿ ಚೇತರಿಕೆ ಕಂಡಿದೆ.

ವಿದ್ಯುತ್ ಸ್ಪರ್ಶದಿಂದ ಅಸ್ವಸ್ಥಗೊಂಡ ಆನೆ ಚೇತರಿಕೆ

ಗುಂಡ್ಲುಪೇಟೆ, ಫೆ.15(ಎಂಟಿವೈ)– ವಿದ್ಯುತ್ ಸ್ಪರ್ಶದಿಂದ ನಿತ್ರಾಣಗೊಂಡು ಸಕಾಲಕ್ಕೆ ಚಿಕಿತ್ಸೆ ನೀಡಿದ್ದರಿಂದ ಸುಧಾರಿಸಿಕೊಂಡ ಹೆಣ್ಣಾನೆ ಬುಧವಾರ ಮಧ್ಯಾಹ್ನ ಮತ್ತಷ್ಟು ಚೇತರಿಕೆ ಕಂಡ ಬಳಿಕ ಟ್ರಂಚ್ ದಾಟಿ ಅರಣ್ಯ ಸೇರಿದೆ.



ಮಂಗಳವಾರ ಮಧ್ಯಾಹ್ನದಿಂದ ರಾತ್ರಿಯೆಲ್ಲಾ ಕಾಡಂಚಿನ ಗ್ರಾಮ ನಾಗಪಟ್ಟಣ ವ್ಯಾಪ್ತಿಯ ಜಮೀನಿನಲ್ಲೇ ಇದ್ದ ಹೆಣ್ಣಾನೆ ಬುಧವಾರ ಮಧ್ಯಾಹ್ನ ಮತ್ತಷ್ಟು ಸುಧಾರಿಸಿಕೊಂಡಿತು. ಅರಣ್ಯ ಇಲಾಖೆಯ ಸಿಬ್ಬಂದಿಗಳ ಕಣ್ಗಾವಲಿನಲ್ಲಿದ್ದ ಹೆಣ್ಣಾನೆ. ಮಧ್ಯಾಹ್ನದ ನಂತರ ಟ್ರಂಚ್ ದಾಟಿ ಕಾಡಿನತ್ತ ಹೆಜ್ಜೆ ಹಾಕಿದೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಒಂದನೇ ಪುಟದಿಂದ

ಕಾಂಗ್ರೆಸ್ 'ಟೆಂಡರ್ ಬಾಂಬ್'

ಆರೋಪಗಳನ್ನೂ ಅವೆಲ್ಲವನ್ನೂ ಬಯಲಿಗೆಳೆಯುತ್ತೇವೆ. ಇದಕ್ಕೆ ಪೂರಕವಾಗಿ ಗೋಳಿಹಟ್ಟಿ ಶೇಖರ್ ಅವರು ಜಲಸಂಪನ್ಮೂಲ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿ ಅವರಿಗೆ ಪತ್ರ ಬರೆದು ಜೆಬಿಜಿಎನ್‌ಎಲ್, ವಿಜೆಎನ್‌ಎಲ್, ಕೆಎನ್‌ಎನ್‌ಎಲ್ ಹೀಗೆ ಹಲವು ನೀರಾವರಿ ನಿಗಮಗಳಲ್ಲಿ ಅಕ್ರಮವಾಗಿ ನಡವಳಿಕೆಗಳನ್ನು ಮಾಡಿಕೊಂಡು ಒಂದೇ ದಿನ ಸುಮಾರು 18,000 ಕೋಟಿಗೆ ನೀಡಿರುವ ಟೆಂಡರ್, ವರ್ಕ್ ಆರ್ಡರ್ ರದ್ದುಪಡಿಸಿ ಮರು ಟೆಂಡರ್‌ಗೆ ಆದೇಶ ನೀಡಿರುವುದನ್ನು ರದ್ದು ಮಾಡಬೇಕು ಎಂದು ಪತ್ರ ಬರೆದಿದ್ದಾರೆ. ಈ ರೀತಿ ಎಲ್ಲಾ ಶಾಸಕರು ಹೇಳಿದ್ದಾರೆ, ಚುನಾವಣೆ ಕಾಲ ಬಂದಿರುವುದರಿಂದ ಹಣ ಸಂಗ್ರಹ ಮಾಡಿಕೊಳ್ಳಲು ರಾಜ್ಯದ ಖಜಾನೆಯನ್ನು ಲೂಟಿ ಮಾಡಲು ಹೊರಟಿದ್ದಾರೆ. ಪ್ರತೀ ಓಟಿಗೆ 6000 ರೂ. ನೀಡುತ್ತೇವೆ ಎಂದು ಬಹಿರಂಗವಾಗಿ ಹೇಳುತ್ತಿದ್ದಾರೆ. ಇಂಥ ಕೆಟ್ಟ ರಾಜಕೀಯವನ್ನು ನಾನು ಎಂದೂ ನೋಡಿರಲಿಲ್ಲ. ಇದನ್ನು ತಡೆಗಟ್ಟದೇ ಹೋದರೆ ರಾಜ್ಯ ಉಳಿಯುವುದಿಲ್ಲ. ಹೀಗಾಗಿ ಮಾಧ್ಯಮಗಳ ಮೂಲಕ ಅಧಿಕಾರಿಗಳಿಗೆ, ಸರ್ಕಾರಕ್ಕೆ ಎಚ್ಚರಿಕೆ ನೀಡಬೇಕೆಂದೇ ಈ ತುರ್ತು ಪತ್ರಿಕಾಗೋಷ್ಠಿ ನಡೆಸಿದ್ದೇವೆ ಎಂದರು.

ಈಗ ನಮ್ಮ ಮೇಲೆ ಹೊರಿಸುತ್ತಿದ್ದಾರೆ...

ಬಂಜಿಸುವ ಭೂಪತಿಯರು. ಜನರ ಕಣ್ಣಲ್ಲಿ ಮಣ್ಣೆರಚುವ ಕಾರ್ಯವನ್ನು ಕಾಂಗ್ರೆಸ್ ಮಾಡಿಕೊಂಡು ಬಂದಿದೆ. ಅವರ ಅವಧಿಯಲ್ಲಿ ರಾಜ್ಯವು ಎಲ್ಲಾ ರಂಗಗಳಲ್ಲಿ ಹಿಂದುಳಿದಿತ್ತು. ಅವರ ಆಡಳಿತದಲ್ಲೇ ಭ್ರಷ್ಟಾಚಾರ ಎಲ್ಲೆ ಮೀರಿ ನಿಂತಿತ್ತು ಎಂದು ಆ ಪಕ್ಷದ ಮುಖಂಡರ ವಿರುದ್ಧ ಹರಿಹಾಯ್ದಿದ್ದಾರೆ. ಪಕ್ಷ ಏರ್ಪಡಿಸಿದ್ದ ಮಂಡಲ ಪ್ರಭಾರಿಗಳ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದ ಅವರು, ಕಾಂಗ್ರೆಸ್‌ನವರ ಹಿಂದಿನ ಹಗರಣಗಳ ಬಗ್ಗೆ ಲೋಕಾಯುಕ್ತ ತನಿಖೆ ನಡೆಯುತ್ತಿದೆ. ಅವರ ಮೇಲಿರುವ ಆರೋಪಗಳಿಗೆ ಉತ್ತರ ಕೊಡಲಿ. ಅವರ ಕಾಲದಲ್ಲಿ ಆಗಿದ್ದ ಟೆಂಡರ್ ಹಗರಣಗಳ ಬಗ್ಗೆ ಉತ್ತರ ಕೊಡಲಿ ಎಂದು ಸವಾಲು ಹಾಕಿದರು. ಕಾಂಗ್ರೆಸ್‌ನವರು ಹಿಂದೆ ಮಾಡಿರುವ ಕರ್ಮಕಾಂಡಗಳನ್ನು ನೆನಪು ಮಾಡಿಕೊಂಡು ಮಾತನಾಡುತ್ತಾರೆ. ಯಾವ ಗುತ್ತಿಗೆದಾರರನ್ನು ನೀಡಬೇಡಿ. ಮುಂದೆ ಅಧಿಕಾರಕ್ಕೆ ಬಂದು ತನಿಖೆ ಮಾಡಿಸುತ್ತೇವೆ ಎಂದು ಧಮಕಿ ಹಾಕುತ್ತಿದ್ದಾರೆ. ಇದರ ಅರ್ಥ ಏನೆಂದರೆ ಅಧಿಕಾರಕ್ಕೆ ಬಂದರೆ ಸುಲಿಗೆ ಮಾಡಲು ನಿರ್ಧರಿಸಿದ್ದಾರೆ ಎನ್ನುವುದು ಬಹಳ ಸ್ಪಷ್ಟವಾಗಿದೆ. ಅವರ ಅಜೆಂಡಾ ಏನು ಎಂಬುದನ್ನು ಅವರೇ ಹೇಳಿಕೊಂಡಿದ್ದಾರೆ. ಶೇ. 40 ಕಮಿಷನ್ ಆರೋಪ ಯಾವುದೂ ನಿರೂಪಿತವಾಗಿಲ್ಲ. ನ್ಯಾಯಾಲಯದಲ್ಲಿ ಕೊಡುವುದಾಗಿ ಹೇಳಿದ್ದು ಇನ್ನೂ ಕೊಟ್ಟಿಲ್ಲ. ಅವರು ಎಲ್ಲಿ ಬೇಕಾದರೂ ನಿರ್ದಿಷ್ಟ ಪ್ರಕರಣ ದಾಖಲು ಮಾಡಿದರೆ ತನಿಖೆಯಾಗುತ್ತದೆ. ಅದನ್ನು ಮಾಡುವುದು ಬಿಟ್ಟು ಗಾಳಿಯಲ್ಲಿ ಗುಂಡು ಹೊಡೆದರೆ ಏನೂ ಪ್ರಯೋಜನವಿಲ್ಲ ಎಂದರು.

ಡಿ.ಕೆ.ಶಿವಕುಮಾರ್ ಅವರು ನೀರಾವರಿ ಸಚಿವರಿದ್ದಾಗ ಟೆಂಡರ್ ಪರಿಶೀಲನಾ ಸಮಿತಿಯನ್ನು ತೆಗೆದುಹಾಕಿದ್ದರು. ಟಿ.ಎ.ಸಿ.ಯನ್ನೂ ತೆಗೆದುಹಾಕಿದ್ದರು. ನಿಗಮದಲ್ಲಿ ಎರಡು ಹಂತದ ಪರಿಶೀಲನೆಯನ್ನು ತೆಗೆದಿದ್ದರು ಅವರೇ. ಅವರು ಭ್ರಷ್ಟಾಚಾರಕ್ಕೆ ರಹದಾರಿ ಮಾಡಿಕೊಂಡಿದ್ದರು. ನಾವು ಬಂದ ನಂತರ ಅದನ್ನು ಪುನಃ ಸ್ಥಾಪನೆ ಮಾಡಿದ್ದೇವೆ. ಹೀಗಾಗಿ ಅವರಿಗೆ ಯಾವುದೇ ನೈತಿಕ ಹಕ್ಕಿಲ್ಲ ಎಂದರು.

ತಲೆ ತಿರುಕ ಕಾಂಗ್ರೆಸ್ ನಾಯಕರು

ತಲೆ ಸರಿಯಿಲ್ಲದವರು ಮಾತ್ರ ಹೀಗೆ ಮಾತನಾಡಲು ಸಾಧ್ಯ. ತಾವು ಅಧಿಕಾರಕ್ಕೆ ಬಂದೇ ಬಿಟ್ಟಿದ್ದೇವೆ ಎಂಬ ಭ್ರಮೆಯಲ್ಲಿದ್ದಾರೆ. ಹೀಗಾಗಿ ಹುಚ್ಚು ಹುಚ್ಚಾಗಿ ಮಾತನಾಡುತ್ತಿದ್ದಾರೆ. ಇವರ ಆರೋಪದಲ್ಲಿ ಯಾವುದೇ ಹುರುಳಿಲ್ಲ ಎಂದರು. ನಮ್ಮ ಸರ್ಕಾರದ ಮೇಲೆ ಶೇಕಡ 40 ಲಂಚದ ಆರೋಪ ಮಾಡಿದರು. ಆದರೆ ಇದುವರೆಗೂ ಒಂದು ದಾಖಲೆ ನೀಡಿಲ್ಲ. ತನಿಖಾ ಸಂಸ್ಥೆಗಳಿಗೂ ದೂರು ಕೊಟ್ಟಿಲ್ಲ. ಕೇವಲ ಪ್ರಚಾರಕ್ಕಾಗಿ ತಮ್ಮ ಮೇಲೆ ಆರೋಪ ಮಾಡುತ್ತಿದ್ದಾರೆ ಎಂದು ದೂರಿದರು. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ನವರು ಏನೆಲ್ಲ ಕರ್ಮಕಾಂಡ ಮಾಡಿದ್ದಾರೆ ಎಂಬುದನ್ನು ನೆನಪು ಮಾಡಿಕೊಳ್ಳಲಿ. ಮುಂದೆ ಸುಲಿಗೆ ಮಾಡುವ ಉದ್ದೇಶದಿಂದಲೇ ಅಧಿಕಾರಕ್ಕೆ ಬರಬೇಕೆಂದು ಹಾತೊರೆಯುತ್ತಿದ್ದಾರೆ.

ಬಡಿದು ಕೊಂದವರ ಬಂಧನ

ಅವರು, ಮಾರ್ಕೆಟ್ ಬಳಿ ಮಗನ ಕಾರು ನಿಂತಿದ್ದು, ಅದರಲ್ಲಿ ಚಪ್ಪಲಿ ಮಾತ್ರ ಇರುವುದನ್ನು ಗಮನಿಸಿದ್ದಾರೆ. ಅಲ್ಲದೆ ಕಾರು ಬಳಿಯಿಂದ ರಕ್ತದ ಕಲೆಗಳು ಕೆಲವು ದೂರ ಇರುವುದನ್ನು ನೋಡಿ ಸಂಶಯದ ಮೇರೆಗೆ ಬ್ರೂಸ್‌ಲೀ ಮತ್ತು ಜೈನುದ್ದೀನ್ ತನ್ನ ಮಗನನ್ನು ಅಪಹರಿಸಿರಬಹುದು ಎಂದು ಅಂದು ರಾತ್ರಿ 11.30ರಲ್ಲಿ ಎನ್‌ಆರ್ ಠಾಣೆಗೆ ದೂರು ಸಲ್ಲಿಸಿದ್ದರು. ತಕ್ಷಣವೇ ಕಾರ್ಯಪ್ರವೃತ್ತರಾದ ಎನ್‌ಆರ್ ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ತಳವಾರ್ ನೇತೃತ್ವದ ತಂಡ ಸ್ಥಳ ಪರಿಶೀಲಿಸಿದಾಗ ಮನ್ಸೂರ್ ಕಾರು ನಿಂತಿದ್ದ ಸ್ಥಳದಿಂದ ಜೆಪಿ ಫಾರ್ಚೂನ್ ಹೋಟೆಲ್‌ನ ಹಿಂಭಾಗದ ಗಲ್ಲಿವರೆಗೂ ರಕ್ತದ ಕಲೆಗಳು ಕಂಡುಬಂದರೆ, ಗಲ್ಲಿಯಲ್ಲಿ ಅಪಾರ ಪ್ರಮಾಣದ ರಕ್ತ ಚೆಲ್ಲಿರುವುದು ಗೋಚರಿಸಿದೆ. ಮನ್ಸೂರ್ ಕಾರು ನಿಂತಿದ್ದ ರಸ್ತೆಯಲ್ಲಿದ್ದ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಮನ್ಸೂರ್‌ನನ್ನು ಬ್ರೂಸ್‌ಲೀ ಹೊತ್ತೊಯ್ಯುತ್ತಿರುವ ದೃಶ್ಯ ಕಂಡುಬಂದಿದೆ. ಹೀಗಾಗಿ ಕಾರಿನ ಬಳಿ ಮನ್ಸೂರ್‌ನನ್ನು ಇರಿದು ಹೊತ್ತೊಯ್ಯಲಾಗಿದೆ ಎಂದು ಪೊಲೀಸರು ಶಂಕಿಸಿದ್ದರು. ಮನ್ಸೂರ್‌ನನ್ನು ಹತ್ಯೆ ಮಾಡಿರಬಹುದು ಎಂದು ಪೊಲೀಸರು ಅನುಮಾನಿಸಿದ್ದರಾದರೂ, ಮೃತದೇಹ ದೊರೆಯದ ಕಾರಣ ಬ್ರೂಸ್‌ಲೀ ಹಾಗೂ ಜೈನುದ್ದೀನ್ ಪತ್ತೆಗಾಗಿ ಎರಡು ತಂಡಗಳನ್ನು ರಚಿಸಿ, ಹುಡುಕಾಟ ನಡೆಸಿದರು. ಇಬ್ಬರಲ್ಲಿ ಓರ್ವ ಬಂಡೀಪಾಳ್ಯದಲ್ಲಿ ಸಿಕ್ಕಿಬಿದ್ದರೆ, ಮತ್ತೋರ್ವ ಆತನ ಮನೆಯಲ್ಲೇ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ. ಇಬ್ಬರನ್ನೂ ವಶಕ್ಕೆ ಪಡೆದ ಪೊಲೀಸರು, ತೀವ್ರ ವಿಚಾರಣೆಗೊಳಪಡಿಸಿದಾಗ ಹುಡುಗಿ ಚುಡಾಯಿಸಿದ ವಿಚಾರಕ್ಕೆ ಬ್ರೂಸ್‌ಲೀ ಮೇಲೆ ಮನ್ಸೂರ್ ಹಲ್ಲೆ ನಡೆಸಿದ ಕಾರಣ ಬ್ರೂಸ್‌ಲೀ, ಜೈನುದ್ದೀನ್, ಶಾರೀಕ್ ಮತ್ತು ಇಕ್ಬಾಲ್ ಭಾನುವಾರ ರಾತ್ರಿ ಕಾರಿನಲ್ಲಿ ಕುಳಿತಿದ್ದ ಮನ್ಸೂರ್‌ನನ್ನು ಹೊರಗೆಳೆದು ಮುಖದ ಮೇಲೆ ಪ್ರಹಾರ ಮಾಡಿದ್ದಾರೆ. ಬಾಯಿ ಮತ್ತು ಮೂಗಿನಲ್ಲಿ ರಕ್ತ ಸೋರುತ್ತಿದ್ದಾಗಲೇ ಆತನನ್ನು ಹೆಗಲ ಮೇಲೆ ಹೊತ್ತುಕೊಂಡು ಹೋಗಿ ಜೆಪಿ ಫಾರ್ಚೂನ್ ಹೋಟೆಲ್ ಹಿಂಭಾಗದ ಗಲ್ಲಿಯಲ್ಲಿ ಕೆಳಗೆ ಹಾಕಿ, ತಲೆ ಮೇಲೆ ಕಲ್ಲು ಎತ್ತಿಹಾಕಿ ಹತ್ಯೆಗೈದ ನಂತರ ಶವವನ್ನು ಗೋಣಿಚೀಲದಲ್ಲಿ ತುಂಬಿಕೊಂಡು ಫಾರೂಕ್ ಎಂಬಾತನ ಆಟೋದಲ್ಲಿ ಕೊಂಡೊಯ್ದು ಶ್ರೀರಂಗಪಟ್ಟಣ ತಾಲೂಕು ಬಲ್ಲೇನಹಳ್ಳಿ ಬಳಿ ಸಿಡಿಎಸ್ ನಾಲೆಯಲ್ಲಿ ಶವವನ್ನು ಬಿಸಾಕಿದ್ದರು ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ. ತಕ್ಷಣವೇ ಪೊಲೀಸರು ಆರೋಪಿಗಳನ್ನು ಕರೆದೊಯ್ದು ಸಿಡಿಎಸ್ ನಾಲೆಯಲ್ಲಿ ಗೋಣಿಚೀಲದಲ್ಲಿ ಕಟ್ಟಿದ ಸ್ಥಿತಿಯಲ್ಲಿದ್ದ ಮನ್ಸೂರ್‌ನ ಶವವನ್ನು ವಶಪಡಿಸಿಕೊಂಡ ನಂತರ ಇಕ್ಬಾಲ್ ಮತ್ತು ಶಾರೀಕ್‌ನನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಮನ್ಸೂರ್‌ನ ಶವವನ್ನು ಸಾಗಿಸಿದ ಆಟೋ ಮಾಲೀಕ ಫಾರೂಕ್‌ಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.

ಡಿಕೆಶಿ ಭವಿಷ್ಯ

ಮಂದಿ ಕಾರ್ಯಕರ್ತರು ಬೈಕ್ ರ್‍ಯಾಲಿ ನಡೆಸಿದರು. ಕಾರ್ಯಕ್ರಮದಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗಿತ್ತು ಕಾರ್ಯಕ್ರಮದ ನಂತರ ಯಾತ್ರೆ ಹೆಚ್.ಡಿ.ಕೋಟೆ ಕಡೆಗೆ ಪ್ರಯಾಣ ತೆರಳಿತು. ಕಾರ್ಯಕ್ರಮದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಶಾಸಕ ಎಚ್.ಎಂ. ರೇವಣ್ಣ, ಜಿ.ಸಿ.ಚಂದ್ರಶೇಖರ್, ಧರ್ಮಸೇನಾ, ಸಚಿನ್, ಝಿಯಾ, ಸೂರಜ್ ಹೆಗ್ಡೆ, ಲಕ್ಷ್ಮಣ್, ಸೋಮಣ್ಣ, ಮಂಜುಳ, ಜಿಪಂ ಮಾಜಿ ಅಧ್ಯಕ್ಷ ಮರಿಗೌಡ, ಹೆಚ್.ಎನ್.ಪ್ರೇಮ್ ಕುಮಾರ್, ರಾಮನಾಥ್, ಎಸ್.ಬಸವರಾಜ್, ನರೇಂದ್ರ, ಸೋಮಶೇಖರ್, ಶಿವನಾಗಪ್ಪ, ಬ್ಲಾಕ್ ಅಧ್ಯಕ್ಷರಾದ ಟಿ.ವಿ.ನಾರಾಯಣ್, ರಮೇಶ್, ದೇವರಾಜ್, ಪುಟ್ಟರಾಜು, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಉದ್ಯಮಿ ಹೆಚ್.ಪಿ.ಅಮರ್‌ನಾಥ್ ಸೇರಿದಂತೆ ನೂರಾರು ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಉಸಿರುಗಟ್ಟಿಸಿ ಪತಿ ಹತ್ಯೆ; ಪತ್ನಿ ಬಂಧನ

ಮತ್ತೆ ನಿಖಿತಾಳನ್ನು ಗಂಡ ಅನುಮಾನದಿಂದಲೇ ನೋಡುತ್ತಿದ್ದ. ಅಲ್ಲದೇ, ಪ್ರತೀದಿನ ಶೀಲ ಶಂಕಿಸಿ ಮಾನಸಿಕ ಹಾಗೂ ದೈಹಿಕವಾಗಿ ಕಿರುಕುಳ ನೀಡುತ್ತಿದ್ದು ಮಾತ್ರವಲ್ಲದೇ ಪದೇ ಪದೆ ಅಕ್ಕಪಕ್ಕದವರನ್ನು ಕರೆದು ಪತ್ನಿಯ ಶೀಲದ ಬಗ್ಗೆ ತುಚ್ಛವಾಗಿ ಮಾತನಾಡುತ್ತಿದ್ದ. ಹೀಗಾಗಿ ಆತನನ್ನು ಉಸಿರುಗಟ್ಟಿಸಿ ಕೊಂದಿರುವುದಾಗಿ ನಿಖಿತಾ ಪೊಲೀಸರಿಗೆ ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾಳೆ.

ವಿವರ: ಮಂಗಳವಾರ ರಾತ್ರಿ 11 ಗಂಟೆ ಸುಮಾರಿನಲ್ಲಿ ನಿಖಿತಾ ತಮ್ಮ ಮನೆ ಸಮೀಪದಲ್ಲೇ ಇರುವ ಮಂಜುನಾಥ್‌ನ ಅಕ್ಕ ಸುನೀತಾ ಅವರ ಮನೆಗೆ ತೆರಳಿ ತನ್ನ ಪತಿ ವಿಪರೀತವಾಗಿ ಕುಡಿದು ಬಂದು ಮನೆಯಲ್ಲಿ ಬಿದ್ದುಬಿಟ್ಟಿದ್ದಾನೆ. ಅವನನ್ನು ನಾನು ಸೋಫಾ ಮೇಲೆ ಮಲಗಿಸಿದ್ದೇನೆ. ಮಾತನಾಡುತ್ತಲೇ ಇಲ್ಲ ಬಂದು ನೋಡಿ ಎಂದು ಹೇಳಿದ್ದಾಳೆ. ತಮ್ಮನ ಸ್ಥಿತಿ ನೋಡಿದ ಅಕ್ಕ ಸುನೀತಾ, ತಕ್ಷಣವೇ ಆತನನ್ನು ಜಯದೇವ ಆಸ್ಪತ್ರೆಗೆ ಕರೆದೊಯ್ದಿದ್ದು, ವೈದ್ಯರು ಅದಾಗಲೇ ಮಂಜುನಾಥ್ ಮೃತಪಟ್ಟಿದ್ದಾನೆ ಎಂದು ತಿಳಿಸಿದ್ದಾರೆ. ಮಂಜುನಾಥ್ ಮತ್ತು ನಿಖಿತಾ ನಡುವಿನ ವೈಮನಸ್ಸನ್ನು ಅರಿತಿದ್ದ ಅಕ್ಕಪಕ್ಕದವರು ಹೆಂಡತಿಯೇ ಗಂಡನನ್ನು ಕೊಲೆ ಮಾಡಿದ್ದಾಳೆ ಎಂದು ಆರೋಪಿಸಿ, ಗಲಾಟೆ ಮಾಡುತ್ತಿದ್ದರು. ಈ ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಪ್ರದೀಪ್ ನೇತೃತ್ವದ ಪೊಲೀಸರ ತಂಡ ಅನುಮಾನದ ಮೇರೆಗೆ ನಿಖಿತಾಳನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಆಕೆಯೇ ಪತಿಯನ್ನು ಹತ್ಯೆ ಮಾಡಿರುವುದು ಬಯಲಾಗಿದೆ. ಕೊಲೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ನಿಖಿತಾಳನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಆಕೆಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮಂಜುನಾಥನ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದ ಪೊಲೀಸರು, ಆತನ ಸಹೋದರಿ ಸುನಿತಾ ನೀಡಿದ ದೂರಿನನ್ವಯ ಕೊಲೆ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅಪ್ಪ ಕೊಲೆಯಾದರು, ಅಮ್ಮ ಜೈಲಿಗೋದರು, ಪರಿಣಾಮ ಅನಾಥರಾದ ಇಬ್ಬರು ಗಂಡು ಮಕ್ಕಳಿಗೆ ಅಜ್ಜಿ ಮನೆಯವರು ಸದ್ಯಕ್ಕೆ ಆಶ್ರಯ ನೀಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜ್ಯದಲ್ಲಿ ಬೊಮ್ಮಾಯಿ ಸರ್ಕಾರ ಜಾಹೀರಾತು ಮೂಲಕ ಉಸಿರಾಡುತ್ತಿದೆ

● ಮಾಜಿ ಮುಖ್ಯಮಂತ್ರಿ, ಹಿರಿಯ ನಾಯಕ ಎಂ.ವೀರಪ್ಪ ಮೊಯ್ಲಿ ಲೇವಡಿ ● ಬಿಜೆಪಿ ಆಡಳಿತದಲ್ಲಿ ರಾಜ್ಯಕ್ಕೆ ಅಳಿಸಲಾಗದ ಕಪ್ಪುಚುಕ್ಕೆ ● ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಶತಸಿದ್ಧ



ಮೈಸೂರು,ಫೆ.15(ಎಂಟಿವೈ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರ ಜನಮನ್ನಣೆ ಕಳೆದುಕೊಂಡಿದ್ದರೂ, ಮಾಧ್ಯಮಗಳಲ್ಲಿ ಪ್ರಕಟವಾಗುವ ಜಾಹೀರಾತು ಮೂಲಕ ಉಸಿರಾಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿ ಟೀಕಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು, ಮಿತಿ ಮೀರಿದ ಭ್ರಷ್ಟಾಚಾರ, ಕಮಿಷನ್ ದಂಧೆ ಸೇರಿದಂತೆ ದುರಾಡಳಿತದಿಂದಾಗಿ ಬಿಜೆಪಿ ಸರ್ಕಾರ ಜನರ ವಿಶ್ವಾಸ ಕಳೆದುಕೊಂಡಿದೆ. ಆದರೂ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಪ್ರತಿದಿನವೂ ಜಾಹೀರಾತು ನೀಡುವ ಮೂಲಕ ನಮ್ಮ ಸರ್ಕಾರ ಇನ್ನೂ ಜೀವಂತವಿದೆ ಎಂದು ತೋರಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ರಾಜ್ಯಕ್ಕೆ ಅಂಟಿದ ಕಪ್ಪುಚುಕ್ಕೆ: ರಾಜ್ಯದಲ್ಲಿ ಬಿಜೆಪಿ ಸರ್ಕಾರವನ್ನು ಬಿ.ಎಸ್. ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಮುನ್ನಡೆಸಿದ್ದಾರೆ. ಆದರೆ, ಈ ಇಬ್ಬರ ನಾಯಕತ್ವದ ಸರ್ಕಾರ ರಾಜ್ಯ ಜನರಿಗೆ ಹೊರೆಯಾಗಿ ಪರಿಣಮಿಸಿದೆ. ದೇಶದ ರಾಜಕೀಯ ಇತಿಹಾಸದಲ್ಲೇ ಮುಖ್ಯಮಂತ್ರಿಯಾಗಿದ್ದಾಗಲೇ ಜೈಲಿಗೆ ಹೋಗಿದ್ದ ಉದಾಹರಣೆ ಇರಲಿಲ್ಲ. ಆ ದಾಖಲೆಯನ್ನು ಬಿ.ಎಸ್.ಯಡಿಯೂರಪ್ಪ ಮಾಡಿದ್ದಾರೆ. ಮುಖ್ಯಮಂತ್ರಿಯಾಗಿ ರಾಜ್ಯಕ್ಕೆ ಕಪ್ಪುಚುಕ್ಕೆ ತಂದಿದ್ದಾರೆ. ಈ ಕಪ್ಪು ಚುಕ್ಕೆಯನ್ನು ಯಾರಿಂದಲೂ ಅಳಿಸಲು ಸಾಧ್ಯವಿಲ್ಲ. ಹಾಲಿ ಸಿಎಂ ಬಸವ ರಾಜ ಬೊಮ್ಮಾಯಿಗೆ ಧೈರ್ಯವಿಲ್ಲ. ಯಾವುದೇ ಕೆಲಸವನ್ನು ಮಾಡುತ್ತಿಲ್ಲ. ಕೇವಲ ಜಾಹೀರಾತು ಮೂಲಕ ನಮ್ಮ ಸರ್ಕಾರ ಇನ್ನೂ ಇದೆ ಎಂದು ತೋರಿಸಿಕೊಳ್ಳಲು ಹರಸಾಹಸ ಪಡುತ್ತಿದ್ದಾರೆ. ಹಾಗಾಗಿ ಬಿಜೆಪಿ ಸರ್ಕಾರದಿಂದ ರಾಜ್ಯಕ್ಕೆ ಪ್ರಯೋಜನವಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರ: ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ. ಮನಮೋಹನ ಸಿಂಗ್ ಸರ್ಕಾರದಲ್ಲಿ ನರೇಗಾ ಯೋಜನೆ ಜಾರಿಗೊಳಿಸಿದಂತೆ ಗೃಹಲಕ್ಷ್ಮಿ ಯೋಜನೆಯನ್ನು ಜಾರಿಗೊಳಿಸುತ್ತೇವೆ. ಬಡವರ ಹಿತ ಕಾಯುವ ಏಕೈಕ ಪಕ್ಷವಾಗಿ ಕಾಂಗ್ರೆಸ್ ಸೇವೆ ಸಲ್ಲಿಸುತ್ತಾ ಬಂದಿದೆ. ಈ ಹಿಂದಿನಿಂದಲೂ ಜನಪರ ಕಾರ್ಯಕ್ರಮಗಳ ಮೂಲಕ ಜನರ ವಿಶ್ವಾಸ ಗಳಿಸಿದೆ. ಈ ಹಿಂದೆ ನೀಡಿರುವ ಯೋಜನೆಗಳೇ ಕಾಂಗ್ರೆಸ್‌ಗೆ ಶ್ರೀರಕ್ಷೆಯಾಗಿದ್ದು, ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಶತಸಿದ್ಧ ಎಂದರು.

ಮೂಲ, ವಲಸೆ ಇಲ್ಲ: ಕಾಂಗ್ರೆಸ್‌ನಲ್ಲಿ ಮೂಲ, ವಲಸೆ ಕಾಂಗ್ರೆಸ್ಸಿಗ ಎಂಬ ಭೇದವಿಲ್ಲ. ಟಿಕೆಟ್ ಹಂಚಿಕೆ ವೇಳೆ ಕೆಲವು ಕ್ಷೇತ್ರಗಳಲ್ಲಿ ಮೂಲ, ವಲಸಿಗ ಎಂದು ಚರ್ಚೆಯಾಗುತ್ತದೆ. ಚುನಾವಣೆ ಬಳಿಕ ಎಲ್ಲಾ ಒಂದೇ. ಹಾಗಾಗಿ ಕಾಂಗ್ರೆಸ್‌ನಲ್ಲಿ ಸದ್ಯ ಮೂಲ ಮತ್ತು ವಲಸಿಗ ಎಂಬ ಚರ್ಚೆ ಅಪ್ರಸ್ತುತ ಎಂದರು.

ಸೈದ್ಧಾಂತಿಕ ನೆಲೆಗಟ್ಟಿನಲ್ಲಿ: ಮುಂಬರುವ ಚುನಾವಣೆಯಲ್ಲಿ ಪಕ್ಷ ಟಿಕೆಟ್ ನೀಡಲು ಸೈದ್ಧಾಂತಿಕ ನೆಲೆಗಟ್ಟು, ಬಲವನ್ನು ಮಾನದಂಡವಾಗಿಟ್ಟುಕೊಳ್ಳಲು ನಿರ್ಧರಿಸಲಾಗಿದೆ. ಗೆಲುವಿಗೆ ಹಣ ಬಲ, ಜಾತಿ ಬಲ ಮುಖ್ಯವಲ್ಲ, ವೈಯಕ್ತಿಕ ವರ್ಚಸ್ಸು ಮುಖ್ಯ. ಆಮಿಷಗಳಿಗೆ ಒಳಗಾಗುವವರು, ಪಕ್ಷಾಂತರಕ್ಕೆ ಕಾಯುವವರನ್ನು ತಿರಸ್ಕರಿಸಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಶೇ.40 ಕಮಿಷನ್: ಈ ಹಿಂದೆ ರಾಜ್ಯಕ್ಕೆ ಆಗಮಿಸಿದ್ದ ಪ್ರಧಾನಿ ನರೇಂದ್ರ ಮೋದಿ, ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ಸಿದ್ದರಾಮಯ್ಯ ನೇತೃತ್ವದ ಸರ್ಕಾರವನ್ನು ಶೇ. 10 ಕಮಿಷನ್ ಸರ್ಕಾರ ಎಂದು ದೂರಿದ್ದರು. ಅದಕ್ಕೆ ಪುಷ್ಟಿ ನೀಡುವ ಯಾವುದೇ ದಾಖಲೆ ನೀಡಿರಲಿಲ್ಲ. ಆದ್ದರಿಂದ ಆ ಆರೋಪ ಜನರ ಮನ ಮುಟ್ಟಲಿಲ್ಲ. ಪ್ರಸ್ತುತ ರಾಜ್ಯದ ಬಿಜೆಪಿ ಸರ್ಕಾರ ಶೇ.40 ಕಮಿಷನ್ ಪಡೆಯುತ್ತಿರುವುದು ಜನರಿಗೆ ಗೊತ್ತಿದೆ. ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ಕರ್ಮಕಾಂಡದಿಂದ ಬೇಸತ್ತಿದ್ದಾರೆ ಎಂದು ಕಿಡಿಕಾರಿದರು.

ಶಾಸಕರ ಅಭಿಪ್ರಾಯ ಪಡೆದು ಸಿಎಂ ಅಭ್ಯರ್ಥಿ ಆಯ್ಕೆ: ಪ್ರಶ್ನೆಯೊಂದಕ್ಕೆ ಉತ್ತರಿಸಿದ ಮೊಯ್ಲಿ, ಕಾಂಗ್ರೆಸ್‌ನಲ್ಲಿ ನಾನೇ ಸಿಎಂ ಎಂದು ಹೇಳಿಕೊಳ್ಳುವ ಸಂಪ್ರದಾಯವಿಲ್ಲ. ಆದರೆ, ಮುಂದಿನ ಸಿಎಂ ಅಭ್ಯರ್ಥಿ ನಾನೇ ಎಂದು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ತಮ್ಮ ಆಕಾಂಕ್ಷೆ ವ್ಯಕ್ತಪಡಿಸುವುದಕ್ಕೆ ಅಡ್ಡಿಪಡಿಸಲು ಆಗುವುದಿಲ್ಲ. ಈ ಇಬ್ಬರ ಅಭಿಪ್ರಾಯದಿಂದಾಗಿ ಕಾಂಗ್ರೆಸ್ ಸಂಪ್ರದಾಯ ಬದಲಾಗುವುದಿಲ್ಲ. ಚುನಾವಣೆ ನಂತರ ಕೇಂದ್ರದಿಂದ ವೀಕ್ಷಕರು ಬರುತ್ತಾರೆ. ಶಾಸಕರ ಅಭಿಪ್ರಾಯ ಪಡೆದು ಸಿಎಲ್‌ಪಿ ನಾಯಕನನ್ನು ಆಯ್ಕೆ ಮಾಡುತ್ತಾರೆ ಎಂದು ತಿಳಿಸಿದರು.

ತ್ರಿಕೋನ ಸ್ಪರ್ಧೆ: ರಾಜ್ಯದಲ್ಲಿ ಈ ಬಾರಿ ತ್ರಿಕೋನ ಸ್ಪರ್ಧೆ ಏರ್ಪಡಲಿದೆ. ಪ್ರಮುಖ 3 ಪಕ್ಷಗಳ ನಾಯಕರು ಅತ್ಯಂತ ಚುರುಕಾಗಿ ರಾಜ್ಯ ಸುತ್ತುತ್ತಿದ್ದಾರೆ. ಕಾಂಗ್ರೆಸ್ ಪ್ರತಿಸ್ಪರ್ಧಿ ಯಾರು ಎಂದು ಒಂದು ಪಕ್ಷವನ್ನು ಬೊಟ್ಟು ಮಾಡಿ ತೋರಿಸಿದರೆ, ಮತ್ತೊಂದು ಪಕ್ಷವನ್ನು ಕಡೆಗಣಿಸಿದಂತಾಗುತ್ತದೆ. ಹಾಗಾಗಿ ತ್ರಿಕೋನ ಸ್ಪರ್ಧೆ ಏರ್ಪಡುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಬಿಜೆಪಿಯವರು ಟಿಪ್ಪು–ಸಾವರ್ಕರ್ ನಡುವಿನ ಚುನಾವಣೆ ಎಂದು ಬಿಂಬಿಸುತ್ತಿದ್ದಾರೆ. ಆದರೆ, ನಮ್ಮದು ಅಭಿವೃದ್ಧಿ, ಸಾಮಾಜಿಕ ನ್ಯಾಯ ಮತ್ತು ಶುದ್ಧ ಆಡಳಿತದ ಧ್ಯೇಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಉಪಾಧ್ಯಕ್ಷ ಎಂ.ಎಸ್.ಬಸವಣ್ಣ, ಕಾರ್ಯದರ್ಶಿ ರಂಗಸ್ವಾಮಿ, ಧರ್ಮಾಪುರ ನಾರಾಯಣ ಇದ್ದರು.

> **ಸತ್ತ ಮೇಲೆ ಉತ್ತರ ಸಿಗಲಿದೆ**
>
> ನನ್ನನ್ನು ಕಾಂಗ್ರೆಸ್ ವರಿಷ್ಠರು ಕಡೆಗಣಿಸಿಲ್ಲ. ಅಭ್ಯರ್ಥಿಗಳ ಆಯ್ಕೆಗಾಗಿ ರಾಷ್ಟ್ರ ಮಟ್ಟದ ಸಮಿತಿಯಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ಆ ಸಮಿತಿಯಲ್ಲಿರುವ ಏಕೈಕ ಕನ್ನಡಿಗ ನಾನಾಗಿದ್ದೇನೆ. ಯಾವುದೇ ಕಾರಣಕ್ಕೂ ನಾನು ಕಾಂಗ್ರೆಸ್ ತೊರೆಯುವುದಿಲ್ಲ. ಪಕ್ಷ ಬಿಡುವ ವಿಚಾರಕ್ಕೆ ಸಂಬಂಧಿಸಿದ ಪ್ರಶ್ನೆಗೆ ನಾನು ಸತ್ತ ಮೇಲೆ ಉತ್ತರ ಸಿಗಲಿದೆ ಎಂದು ತಿಳಿಸಿದರು.
>
> – ಎಂ.ವೀರಪ್ಪ ಮೊಯ್ಲಿ, ಮಾಜಿ ಮುಖ್ಯಮಂತ್ರಿ

ಪ್ರಧಾನಿ ಮೋದಿ ಕುರಿತು ಸಾಕ್ಷ್ಯಚಿತ್ರ ರಚನೆ ಹಿನ್ನೆಲೆಯಲ್ಲಿ ಬಿಬಿಸಿ ಕಚೇರಿ ಮೇಲೆ ಐಟಿ ದಾಳಿ

● ಮಾಜಿ ಸಿಎಂ ವೀರಪ್ಪ ಮೊಯ್ಲಿ ಆರೋಪ ● ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿ ಅಸಾಧ್ಯ ● ಕೊಲಿಜಿಯಂ ಪ್ರಶ್ನಿಸುವುದರಿಂದ ನ್ಯಾಯಾಂಗ ವ್ಯವಸ್ಥೆ ಮೇಲೆ ಅಪನಂಬಿಕೆ ಅಪಾಯ

ಮೈಸೂರು,ಫೆ.15(ಎಂಟಿವೈ)– ಪ್ರಧಾನಿ ನರೇಂದ್ರ ಮೋದಿ ಅವರ ದುರಾಡಳಿತ ಕುರಿತು ಸಾಕ್ಷ್ಯಚಿತ್ರ ನಿರ್ಮಿಸಿದ ಏಕೈಕ ಕಾರಣಕ್ಕೆ ದೆಹಲಿ ಹಾಗೂ ಮುಂಬೈನ ಬಿಬಿಸಿ ಕಚೇರಿಗಳ ಮೇಲೆ ದಾಳಿ ವಿಷಾದಕರ. ಇದು ಮಾಧ್ಯಮಗಳಲ್ಲಿ ಭಯ, ಆತಂಕ ಹುಟ್ಟಿಸಿ ವಶೀಕರಣ ಮಾಡುವ ಅಪಾಯಕಾರಿ ಸಂಚಾಗಿದೆ ಎಂದು ಕೇಂದ್ರದ ಮಾಜಿ ಕಾನೂನು ಸಚಿವ ಎಂ.ವೀರಪ್ಪ ಮೊಯ್ಲಿ ಕಿಡಿಕಾರಿದ್ದಾರೆ.



ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಧ್ಯಮವನ್ನು ನಾಲ್ಕನೇ ಅಂಗ ಎಂದು ಕರೆಯುತ್ತೇವೆ. ಮಾಧ್ಯಮ ಸಂಸ್ಥೆಗಳಲ್ಲಿ ಹಸ್ತಕ್ಷೇಪ ಮಾಡುವ ಮುನ್ನ ಎಚ್ಚರವಹಿಸಬೇಕು. ಯುಪಿಎ ಸರ್ಕಾರದಲ್ಲಿ ಮಾಧ್ಯಮದವರಿಗೆ ಸಂವಿಧಾನಾತ್ಮಕ ರಕ್ಷಣೆ ನೀಡಬೇಕೆಂದು ಆಲೋಚನೆ ಮಾಡಿದ್ದೆವು. ಆದರೆ, ಇಂದು ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಎಲ್ಲಾ ಹಕ್ಕುಗಳನ್ನು ಕಿತ್ತುಕೊಳ್ಳುವ ಮೂಲಕ ಸರ್ವಾಧಿಕಾರಿ ಧೋರಣೆ ತಾಳುತ್ತಿದೆ. ಇದು ದೇಶಕ್ಕೆ ಗಂಡಾಂತರ ತಂದೊಡ್ಡಲಿದೆ ಎಂದರು.

ಏಕರೂಪ ನಾಗರಿಕ ಸಂಹಿತೆ ಜಾರಿ ಕಷ್ಟ: ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವುದು ಸುಲಭವಲ್ಲ. ರಾಷ್ಟ್ರೀಯ ಒಮ್ಮತಕ್ಕೆ ಬರದೇ ಇದನ್ನು ಜಾರಿಗೆ ತರಲು ಸಾಧ್ಯವಿಲ್ಲ. ಸ್ವಾತಂತ್ರ್ಯ ಪಡೆದ ದಿನದಿಂದಲೂ ಏಕರೂಪ ನಾಗರಿಕ ಸಂಹಿತೆ ಜಾರಿ ಸಂಬಂಧ ಚರ್ಚೆಯಾಗುತ್ತಿದೆ. ಇದು ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಸಮುದಾಯಗಳ ಚರ್ಚಾ ವಸ್ತುವಲ್ಲ. ನಮ್ಮ ದೇಶದಲ್ಲಿ ಹಲವು ಸಮುದಾಯಗಳಿವೆ. ಆದಿವಾಸಿ ಪಂಗಡ ಸೇರಿದಂತೆ ಒಂದೊಂದು ಸಮುದಾಯಕ್ಕೂ ಒಂದೊಂದು ಕಾನೂನು, ಆಚಾರ–ವಿಚಾರವಿದೆ. ಅವುಗಳನ್ನೆಲ್ಲಾ ಬದಿಗೊತ್ತಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವುದು ಕಷ್ಟ ಎಂದು ಅಭಿಪ್ರಾಯಪಟ್ಟರು.

ಕೊಲಿಜಿಯಂ ವಿಚಾರವಾಗಿ ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟ ಬಳಿಕವೂ ಕೇಂದ್ರದ ಕಾನೂನು ಸಚಿವರು ಪ್ರಶ್ನೆ ಮಾಡುವುದು ಜನರಿಗೆ ನ್ಯಾಯಾಂಗದ ಮೇಲೆ ಅವಿಶ್ವಾಸ ಮೂಡಿಸುತ್ತದೆ. ಇಡೀ ಕಾನೂನು ವ್ಯವಸ್ಥೆ ಮೇಲೆ ಪರಿಣಾಮ ಬೀರುತ್ತದೆ. ಈ ಹಿಂದೆ ವ್ಯವಸ್ಥಿತವಾದ ಕೊಲಿಜಿಯಂ ಫಾರ್ಮುಲಾ ಕೊಟ್ಟಿದ್ದೆವು. ಆ ಕಾನೂನನ್ನು ತಿದ್ದುಪಡಿ ಮಾಡಿದ್ದನ್ನು ಕೋರ್ಟ್ ರದ್ದುಪಡಿಸಿತು. ನ್ಯಾಯಾಂಗ ವ್ಯವಸ್ಥೆಯಲ್ಲಿ ಯಾವ ರೀತಿ ಸುಧಾರಣೆ ತರಬೇಕೆಂಬುದನ್ನು ವಿವರಿಸದೇ ಪ್ರಶ್ನೆ ಮಾಡುವುದು ಸರಿಯಲ್ಲ ಎಂದು ಪ್ರತಿಕ್ರಿಯಿಸಿದರು.

ದುರಹಂಕಾರದ ಪರಮಾವಧಿ: 2024ರ ಚುನಾವಣೆ ವೇಳೆ ಬಿಜೆಪಿಗೆ ಕಾಂಗ್ರೆಸ್ ಪಕ್ಷ ಸ್ಪರ್ಧಿಯೇ ಆಗಿರುವುದಿಲ್ಲ ಎಂಬ ಅಮಿತ್ ಶಾ ಸಂದರ್ಶನವೊಂದರಲ್ಲಿ ನೀಡಿರುವ ಹೇಳಿಕೆ ದುರಹಂಕಾರದ್ದಾಗಿದೆ. ಇವರ ದುರಹಂಕಾರ ತುತ್ತತುದಿ ಮುಟ್ಟಿದ್ದು, ಇದೇ ಕಾರಣದಿಂದಾಗಿ ಆ ಚುನಾವಣೆಯಲ್ಲಿ ಅಧಿಕಾರದಿಂದ ಕೆಳಗಿಳಿಯಲಿದ್ದಾರೆ.

ಈ ಹಿಂದೆ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಜನರನ್ನು ಬಡತನ ರೇಖೆಗಿಂತ ಮೇಲೆತ್ತುವ ಕೆಲಸ ಮಾಡಲಾಗುತ್ತಿತ್ತು. ಆದರೆ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಬಹಳಷ್ಟು ಜನರು ಬಡತನ ರೇಖೆಗಿಂತ ಕೆಳಗೆ ಜಾರುವಂತಾಗಿದೆ. ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ. ಶೇ.57ರಷ್ಟು ಸಂಪತ್ತು ಕೇವಲ ಶೇ.1ರಷ್ಟು ಜನರ ಕೈಯ್ಯಲ್ಲಿದೆ. ಹೀಗಾಗಿ ದೇಶದ ಎಲ್ಲರಿಗೂ ಆರ್ಥಿಕ ಸ್ವಾವಲಂಬನೆ ದೊರಕಿಸಿಕೊಡುವ ಕೆಲಸ ಕೇವಲ ಕಾಂಗ್ರೆಸ್‌ನಿಂದ ಮಾತ್ರವೇ ಸಾಧ್ಯ ಎಂದರು.

ಲೋಕಸಭಾ ಚುನಾವಣೆ ವೇಳೆ ಜೆಡಿಎಸ್‌ನೊಂದಿಗೆ ಮೈತ್ರಿ ಏರ್ಪಡಿಸಿಕೊಂಡ ಕಾರಣ ಕೈಸುಟ್ಟುಕೊಂಡ ಅನುಭವವಿದ್ದು, ಈ ಬಾರಿ ಯಾವುದೇ ಕಾರಣಕ್ಕೂ ಆ ಪಕ್ಷದೊಡನೆ ಮತ್ತೆ ಮೈತ್ರಿ ಏರ್ಪಡಿಸಿಕೊಳ್ಳುವುದಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಮೈಸೂರಿನ ಕಡಕೊಳ ಗ್ರಾಮದ ಗಾಣಿಗ ಸಮುದಾಯದ ಶ್ರೀ ಮಾಸ್ತಮ್ಮ ದೇವಾಲಯವನ್ನು ಶಾಸಕ ಜಿ.ಟಿ.ದೇವೇಗೌಡರು ಬುಧವಾರ ಲೋಕಾರ್ಪಣೆ ಮಾಡಿದರು. ಈ ವೇಳೆ ಗೆಜ್ಜಗಳ್ಳಿ ಲೋಕೇಶ್, ಗಾಣಿಗ ಸಮುದಾಯದ ಮುಖಂಡರಾದ ವೆಂಕಟರಮಣ, ಮಾದೇಶ್, ನಂಜುಂಡ, ನಾರಾಯಣ, ಕೆ.ಆರ್.ಮಹದೇವು, ಗೌಡಿಕೆ ಮಹೇಶ್, ಸಿದ್ದರಾಮಯ್ಯಗೌಡ್ರು, ಎಲ್ಲಪ್ಪ ನಾಯಕ, ನಾಗರಾಜು, ಕುಮಾರಸ್ವಾಮಿ, ರಂಗಪ್ಪ, ನರಸಿಂಹ ಗೌಡ, ಚಂದ್ರಪ್ಪ, ಡೈರಿ ಮಹದೇವಣ್ಣ ಇನ್ನಿತರರು ಉಪಸ್ಥಿತರಿದ್ದರು.

ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಪ್ರಕ್ರಿಯೆ ವಿಳಂಬ ತಪ್ಪಿಸಿ

ಸರ್ಕಾರಕ್ಕೆ ಎಂಎಲ್‌ಸಿ ಸಿ.ಎನ್.ಮಂಜೇಗೌಡ ಒತ್ತಾಯ

ಮೈಸೂರು, ಫೆ.15(ಪಿಎಂ)– ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಿಕೊಳ್ಳಲು ವರ್ಷಕ್ಕೂ ಹೆಚ್ಚು ಸಮಯ ತೆಗೆದುಕೊಳ್ಳುವುದನ್ನು ತಪ್ಪಿಸಲು ನೇರವಾಗಿ ಭೂ ಪರಿವರ್ತನೆ ಮಾಡಿಕೊಡಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸರ್ಕಾರವನ್ನು ಒತ್ತಾಯಿಸಿದರು.



ವಿಧಾನಪರಿಷತ್‌ನಲ್ಲಿ ಬುಧವಾರ ನಡೆದ ಕಲಾಪದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಮೇಲೆ ಮಾತನಾಡಿದ ಅವರು, ಕೈಗಾರಿಕೆಗಳು ಹಾಗೂ ಇನ್ನಿತರೆ ವಾಣಿಜ್ಯ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಿರುವ ಜಮೀನುಗಳನ್ನು ವಸತಿ ಯೋಜನೆಗೆ ಪರಿವರ್ತಿಸಲು ಉಪವಿಭಾಗಾಧಿಕಾರಿಯವರ ನ್ಯಾಯಾಲಯಕ್ಕೆ ಪ್ರಕರಣ ದಾಖಲಿಸಿ ಅಲ್ಲಿಂದ ಆದೇಶವಾದ ಬಳಿಕ ಭೂ ಪರಿವರ್ತನೆಯ ಆದೇಶ ಹೊರಡಿಸುವುದರಲ್ಲಿ ವಿಳಂಬವಾಗುತ್ತಿದೆ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ಎಂದು ಪ್ರಶ್ನಿಸಿದರು.

ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು, ಇಂತಹ ಪ್ರಕರಣಗಳಲ್ಲಿ ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ದಾವೆ ಹೂಡುವುದನ್ನು ರದ್ದುಪಡಿಸಿ, ನೇರವಾಗಿ ಭೂ ಪರಿವರ್ತನೆ ಮಾಡಿಕೊಡುವ ಬಗ್ಗೆ ಸರ್ಕಾರ ಕೂಡಲೇ ಆದೇಶ ಹೊರಡಿಸಬೇಕೆಂದು ಕೋರಿದರು.

ಇದಕ್ಕೆ ಉತ್ತರಿಸಿದ ಕಂದಾಯ ಸಚಿವ ಆರ್.ಅಶೋಕ್, ಭೂ ಪರಿವರ್ತನೆ ಪ್ರಕ್ರಿಯೆಯು ವಿಳಂಬವಾಗುತ್ತಿರುವುದನ್ನು ಸರ್ಕಾರ ಗಮನಿಸಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 97ರಲ್ಲಿ ಒಂದು ನಿರ್ದಿಷ್ಟ ಉದ್ದೇಶ ಹೊಂದಿರುವ ಕೃಷಿಯೇತರ ಭೂಮಿಯ ಬದಲಿಕೆಗೆ ಅವಕಾಶವಿರುವ ಹಿನ್ನೆಲೆಯಲ್ಲಿ 2022ರ ಮಾ.7ರಂದು ಹೊರಡಿಸಿರುವ ಆದೇಶವನ್ನು ಜ.30ರಂದು ಹಿಂಪಡೆಯಲಾಗಿದೆ ಎಂದು ತಿಳಿಸಿದರು.



ಮೈಸೂರು ಜಿಲ್ಲೆಯ ನೂತನ ಉಪವಿಭಾಗಾಧಿಕಾರಿ ಕೆ.ಆರ್. ರಕ್ಷಿತ್ ಅವರನ್ನು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡರಾದ ಎನ್. ಅರುಣ್ ಕುಮಾರ್ ಗೌಡ, ಗೆಜ್ಜಗಳ್ಳಿ ಮಹೇಶ್, ರವಿ ಇಲವಾಲ ಹಾಗೂ ರವಿಕುಮಾರ್ ಎನ್.ಕೆ. ಅಭಿನಂದಿಸಿದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ


ಮೈಸೂರು, ಫೆ15– ಕಾಮಗಾರಿ ಕೆಲಸದ ನಿಮಿತ್ತ ಫೆ17 ಶುಕ್ರವಾರ ಬೆಳಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಜನತಾನಗರ, ಬೋಗಾದಿ 2ನೇ ಹಂತ ಉತ್ತರ ಮತ್ತು ದಕ್ಷಿಣ, ಗಂಗೋತ್ರಿ ಕ್ಯಾಂಪಸ್, ಗಂಗೋತ್ರಿ ಕ್ವಾಟ್ರಸ್, ದಾಸನಕೊಪ್ಪಲು, ಮರಟಿಕ್ಯಾತನಹಳ್ಳಿ, ರೂಪನಗರ, ದೀಪಾನಗರ, ಬೋಗಾದಿ ಗ್ರಾಮ, ಪ್ರೀತಿ ಲೇಔಟ್, ಆರ್.ಎಂ.ಪಿ ಲೇಔಟ್, ವಿಜಯನಗರ 3ನೇ ಹಂತ, ಹಿನಕಲ್, ವಿಜಯನಗರ 4ನೇ ಹಂತ, ವಿಜಯಶ್ರೀಪುರ, ಸುಧಾ ಲೇಔಟ್, ರೈಲ್ವೆ ಲೇಔಟ್, ಎಸ್.ಬಿ.ಎಂ ಲೇಔಟ್, ವಾಗ್ದೇವಿನಗರ, ಸಿ.ಎಫ್.ಟಿ.ಆರ್.ಐ ಲೇಔಟ್, ಯುನಿವರ್ಸಿಟಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸಬೇಕೆಂದು ವಿ.ವಿ. ಮೊಹಲ್ಲಾ ವಿಭಾಗದ ಸೆಸ್ಕ್ ಪ್ರಕಟಣೆ ತಿಳಿಸಿದೆ.

'ಲಾ ಗೈಡ್' ವತಿಯಿಂದ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ

ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನ್ಯಾಯಾಂಗ ವ್ಯವಸ್ಥೆಯಲ್ಲಿ ಸುಧಾರಣೆ ತನ್ನಿ: ಮೊಯ್ಲಿ

ಮೈಸೂರು, ಫೆ.15(ಎಂಟಿವೈ)– ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನ್ಯಾಯಾಂಗ ವ್ಯವಸ್ಥೆಯಲ್ಲಿ ಸುಧಾರಣೆ ಇಲ್ಲವೇ ಬದಲಾವಣೆಗಳನ್ನು ತರುವ ಅವಶ್ಯಕತೆ ಇದೆ ಎಂದು ಕೇಂದ್ರದ ಮಾಜಿ ಸಚಿವ ಎಂ.ವೀರಪ್ಪ ಮೊಯ್ಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಚಾಮರಾಜಪುರಂನ ಹೋಟೆಲ್ ಏರ್‌ಲೈನ್ಸ್ ಆವರಣದಲ್ಲಿ ಹೆಗ್ಡೆ ಗ್ರೂಪ್ಸ್ ಮತ್ತು ಕನ್ನಡ ಕಾನೂನು ಮಾಸ ಪತ್ರಿಕೆ ಬಳಗದ ವತಿಯಿಂದ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರ ಗೌರವಿಸಿ ಮಾತನಾಡಿದರು. ವ್ಯವಸ್ಥೆಯ ವಿಚಾರದಲ್ಲಿ ಕೇವಲ ನ್ಯಾಯಾಂಗ, ನ್ಯಾಯಾಧೀಶರನ್ನು ದೂಷಿಸಿದರೆ ಸಾಲದು. ಯಾವ ರೀತಿ ಸುಧಾರಣೆ ತರಬಹುದು ಎಂದು ಚಿಂತಿಸಬೇಕು. ಅದಕ್ಕಾಗಿ ಎಲ್ಲರ ವಿಶ್ವಾಸಕ್ಕೆ ತೆಗೆದುಕೊಂಡು ಸಾಗಿದಾಗ ಮಾತ್ರ ಸುಧಾರಣೆ ಸಾಧ್ಯ ಎಂದರು.



ವಕೀಲರ ಹುದ್ದೆ ನನಗೆ ಬಹುಪ್ರಿಯವಾದ ಹುದ್ದೆಯಾಗಿದೆ. ಡಿ.ದೇವರಾಜ ಅರಸು ಅವರ ಪ್ರೇರಣೆಯಿಂದ ಚಿಕ್ಕ ವಯಸ್ಸಿನಲ್ಲೇ ವಕೀಲಿ ವೃತ್ತಿ ಆರಂಭಿಸಿದ್ದೆ. ರಾಜ್ಯದ ಕಾನೂನು ಸಚಿವನಾಗಿದ್ದಾಗ ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಪಾಲು ಕೊಡುವುದಕ್ಕೆ ಬಿಲ್ ತಂದಿದ್ದೆ. ಅದೇ ರೀತಿ ಕೇಂದ್ರದಲ್ಲಿ ಸಚಿವನಾಗಿದ್ದಾಗ ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಶೇ.33ರಷ್ಟು ಮಹಿಳಾ ಮೀಸಲಾತಿ ನೀಡಲು ಮಸೂದೆ ಸಿದ್ಧವಾಗಿತ್ತು. ಆದರೆ, ಅಷ್ಟೊತ್ತಿಗೆ ಸರ್ಕಾರ ಅಧಿಕಾರ ಕಳೆದುಕೊಂಡಿದ್ದರಿಂದ ಈ ವಿಚಾರ ಮತ್ತೆ ಪ್ರಸ್ತಾಪಕ್ಕೆ ಬರಲೇ ಇಲ್ಲ ಎಂದು ವಿಷಾದಿಸಿದರು.

ಅನೇಕ ಸಂದರ್ಭದಲ್ಲಿ ನಿಷ್ಠುರತೆಯಿಂದ ಮಸೂದೆ ತರಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಕೊಲಿಜಿಯಂ ವ್ಯವಸ್ಥೆಯಲ್ಲಿ ಬದಲಾವಣೆ ತರುವ ಬಗ್ಗೆ ನಾನು ಕೊಟ್ಟಿದ್ದ ಸಲಹೆಗಳನ್ನು ಪರಿಗಣಿಸಿದ್ದರೆ ಇಷ್ಟೊತ್ತಿಗೆ ಅನೇಕ ಅನುಕೂಲವಾಗುತ್ತಿತ್ತು. ಆದರೆ, ಅದು ಕೂಡ ಕಾರ್ಯಗತ ಆಗಲಿಲ್ಲ. ಬೆಂಗಳೂರಿನಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ಕಾನೂನು ವಿವಿಯನ್ನು ತೆರೆಯಲು 50 ಎಕರೆ ಜಮೀನು ಮಂಜೂರು ಮಾಡಿದಾಗ ದೊಡ್ಡ ಚರ್ಚೆಯೇ ನಡೆದಿತ್ತು. ಆದರೆ, ಅಂದು ದೇಶದಲ್ಲೇ ದೊಡ್ಡ ಕಾನೂನು ಶಾಲೆಯಾಗಲಿದೆ ಎನ್ನುವ ಮಾತನ್ನು ಹೇಳಿದ್ದೆ. ಈಗ ಅದೇ ಒಳ್ಳೆಯ ಹೆಸರುಗಳಿಸಿ ದೇಶದ ಗಮನ ಸೆಳೆದಿದೆ. ನ್ಯಾಯಾಂಗದಂತೆ ಮಾಧ್ಯಮ ಕ್ಷೇತ್ರವು ಪವಿತ್ರವಾಗಿದೆ. ಸಮಾಜದ ಅಂಕುಡೊಂಕುಗಳನ್ನು ತಿದ್ದುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ವಾಸು ಮಾತನಾಡಿ, ಇಂಜಿನಿಯರಿಂಗ್, ವೈದ್ಯಕೀಯ ಕ್ಷೇತ್ರದಲ್ಲಿ ಸಿಇಟಿ ವ್ಯವಸ್ಥೆ ಜಾರಿಗೆ ತಂದಿದ್ದರಿಂದ ಅನೇಕರಿಗೆ ಅನುಕೂಲವಾಯಿತು. ಸಿಇಟಿ ಜಾರಿಗೆ ಅನೇಕ ವಿರೋಧ ಬಂದರೂ ಅದನ್ನು ಲೆಕ್ಕಿಸದೆ ಜಾರಿಗೊಳಿಸಿದ್ದರಿಂದ ಬಡವರು, ಮಧ್ಯಮ ವರ್ಗದವರ ಮಕ್ಕಳು ಅಮೆರಿಕಾದಲ್ಲಿ ವೈದ್ಯರಾಗಿ ಕೆಲಸ ಮಾಡಲು ಕಾರಣವಾಗಿದೆ. ಅದಕ್ಕೆ ವೀರಪ್ಪ ಮೊಯ್ಲಿ ಅವರೇ ಕಾರಣವಾಗಿದ್ದಾರೆ. ನಾನೊಬ್ಬ ಮೊಯ್ಲಿ ಅವರ ಅನುಯಾಯಿಯಾಗಿದ್ದೇನೆ. ಯಾವುದೇ ಜಾತಿ, ಧರ್ಮವನ್ನು ನೋಡದೆ ಪ್ರೋತ್ಸಾಹಿಸಿಕೊಂಡು ಬರುವ ರಾಜಕಾರಣಿಯಾಗಿದ್ದಾರೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹೆಗ್ಡೆ ಗ್ರೂಪ್ಸ್ ಆಫ್ ಕಂಪೆನಿ ವ್ಯವಸ್ಥಾಪಕ ನಿರ್ದೇಶಕ ಎಂ.ಡಿ.ಹರೀಶ್ ಕುಮಾರ್ ಹೆಗ್ಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಲಾ ಗೈಡ್ ಕಾನೂನು ಮಾಸಪತ್ರಿಕೆಯ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಸನ್ಮಾನಿತರ ಕುರಿತು ಮಾತನಾಡಿದರು. ಈ ವೇಳೆ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಪತ್ರಕರ್ತರಾದ ದಿ ಹಿಂದೂ ಹಿರಿಯ ವರದಿಗಾರ ಶಂಕರ್ ಬೆನ್ನೂರು, ಪಬ್ಲಿಕ್ ಟಿವಿ ಹಿರಿಯ ವರದಿಗಾರ ಕೆ.ಪಿ.ನಾಗರಾಜ್, ಆಂದೋಲನ ಹಿರಿಯ ವರದಿಗಾರ ಕೆ.ಬಿ.ರಮೇಶ ನಾಯಕ, ವಿಜಯಕರ್ನಾಟಕ ಛಾಯಾಗ್ರಾಹಕ ನಾಗೇಶ್ ಪಾಣತ್ತಲೆ ಅವರನ್ನು ಸನ್ಮಾನಿಸಲಾಯಿತು. ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಉಮೇಶ್, ಹೆಗ್ಡೆ ಗ್ರೂಪ್ಸ್ ಆಫ್ ಕಂಪೆನಿ ನಿರ್ದೇಶಕ ಅಭಿಜಿತ್ ಹೆಗ್ಡೆ ಉಪಸ್ಥಿತರಿದ್ದರು.

—— ಅಂತರಸಂತೆಯಲ್ಲಿ 6ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ——

ಸರ್ಕಾರ ವ್ಯವಸ್ಥಿತವಾಗಿ ಕನ್ನಡ ಶಾಲೆಗಳನ್ನು ಮುಚ್ಚುತ್ತಿದೆ

ಹಿರಿಯ ಲೇಖಕ, ಸಮ್ಮೇಳನಾಧ್ಯಕ್ಷ ಡಾ.ಅಮ್ಮಸಂದ್ರ ಸುರೇಶ್ ಖಂಡನೆ

ಹೆಚ್.ಡಿ.ಕೋಟೆ, ಫೆ.15– ಕನ್ನಡ ಶಾಲೆಗಳು ಉಳಿದು, ಬೆಳೆದರೆ ಕನ್ನಡ ಭಾಷೆ ಸಮೃದ್ಧವಾಗಿ ಬೆಳೆಯುತ್ತದೆ. ಆದರೆ ಇಂದು ವಿವಿಧ ಕಾರಣ ನೀಡಿ ವ್ಯವಸ್ಥಿತವಾಗಿ ಕನ್ನಡ ಶಾಲೆ ಮುಚ್ಚುವ ಕೆಲಸ ನಡೆಯುತ್ತಿದ್ದು, ಸಾವಿರಾರು ಸರ್ಕಾರಿ ಕನ್ನಡ ಶಾಲೆಗಳನ್ನು ಮುಚ್ಚುವಂತೆ ಸಮಿತಿಯೊಂದು ರಾಜ್ಯ ಸರ್ಕಾರಕ್ಕೆ ವರದಿ ನೀಡಿದೆ. ಇದನ್ನು ನಾನು ಖಂಡಿಸುತ್ತೇನೆ ಎಂದು ಹಿರಿಯ ಲೇಖಕ ಹಾಗೂ ಸಮ್ಮೇಳನಾಧ್ಯಕ್ಷ ಡಾ.ಅಮ್ಮಸಂದ್ರ ಸುರೇಶ್ ತಿಳಿಸಿದರು.

ತಾಲೂಕಿನ ಅಂತರಸಂತೆ ಗ್ರಾಮ ಆವರಣದಲ್ಲಿ ಬುಧವಾರ ನಡೆದ 6ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರ ಕನ್ನಡ ಶಾಲೆಗಳನ್ನು ಮುಚ್ಚುವಂತೆ ನಿರ್ಧರಿಸುವ ವರದಿ ಜಾರಿಗೊಳಿಸದೇ, ಎಲ್ಲಾ ಸರ್ಕಾರಿ ಶಾಲೆಗಳನ್ನು ಮೇಲ್ದರ್ಜೆಗೇರಿಸಬೇಕು ಎಂದ ಅವರು ಕರ್ನಾಟಕ ಏಕೀಕರಣವಾಗಿ ಇಷ್ಟು ವರ್ಷ ಕಳೆದರೂ ಗಡಿ ಭಾಗಗಳಲ್ಲಿ ಕನ್ನಡ ಉಳಿವಿಗೆ ಹೋರಾಡುತ್ತಿರುವ ಹೋರಾಟಗಾರರ ಮೇಲೆ ದಾಖಲಾಗಿರುವ ಎಲ್ಲಾ ಪ್ರಕರಣಗಳನ್ನು ವಜಾಗೊಳಿಸಬೇಕು ಎಂದು ಆಗ್ರಹಿಸಿದರು.



1999ರಲ್ಲಿ ನಾನು ಈ ತಾಲೂಕಿನಲ್ಲಿ ವೃತ್ತಿ ಜೀವನ ಆರಂಭಿಸಿದೆ. ಹೆಚ್.ಡಿ.ಕೋಟೆ ಸಂಪದ್ಭರಿತವಾದ ಇತಿಹಾಸ ಹೊಂದಿದೆ. 1927ರಲ್ಲಿ ಬೊಪ್ಪನಹಳ್ಳಿ ಜಮೀನಿನಲ್ಲಿ ದೊರೆತ ಶಿಲಾ ಶಾಸನ ಹೆಗ್ಗಡೆಗಳ ಆಳ್ವಿಕೆಯಿಂದ ಇಲ್ಲಿಗೆ 'ಹೆಗ್ಗಡದೇವನಕೋಟೆ' ಎಂಬ ಹೆಸರು ಬಂದಿದೆ ಎಂದು ದೃಢೀಕರಿಸಿದೆ. ಕೋಟೆ ತಾಲೂಕು ಪೊನ್ನಾಟರು, ಹೊಯ್ಸಳರು, ರಾಷ್ಟ್ರಕೂಟರು ಮತ್ತು ವಿಜಯನಗರದ ಅರಸರು ಆಳ್ವಿಕೆಗೆ ಒಳಪಟ್ಟಿತ್ತು. ತಾಲೂಕಿನ ಎಂ.ವೆಂಕಟಕೃಷ್ಣಯ್ಯ, ಹೆಚ್.ಪಿ.ಲಿಂಗಯ್ಯ, ನೂರಲಕುಪ್ಪೆ ಎನ್.ಟಿ. ಸುಂದರ್ ದಾಸ್, ಮಾದಾಪುರದ ಎಸ್. ಪುಟ್ಟಸ್ವಾಮಿ, ಹೊಮ್ಮರಗಳ್ಳಿಯ ಹೆಚ್.ಕೆ. ತಿಮ್ಮಯ್ಯ ಸೇರಿದಂತೆ ಅನೇಕರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿದ್ದರು. ಅನೇಕರು ದಲಿತ, ರೈತ ಮತ್ತು ಪ್ರಗತಿಪರ ಚಳವಳಿಗಳಲ್ಲಿ ಮುಂಚೂಣಿಯಲ್ಲಿದ್ದರು. ಸಿಗ್ಗೇಮರು ಶಿವಣ್ಣ ಪುಟ್ಟರಾಗಯ್ಯ ಬೆಟ್ಟಯ್ಯ ಕೋಟೆ ಸೇರಿದಂತೆ ಹಲವರು ಚಳವಳಿಗಳಿಗೆ ನಾಂದಿ ಹಾಡಿದರು ಎಂದರು.

ಸಾಹಿತ್ಯ ಕ್ಷೇತ್ರದಲ್ಲಿ ತಾಲೂಕಿನ ಹಲವು ಹೆಸರು ಮಾಡಿದ್ದಾರೆ. ಅಲನಹಳ್ಳಿ ಕೃಷ್ಣ ಅವರ ಕಾದಂಬರಿಗಳು ಸಿನಿಮಾಗಳಾಗಿವೆ. ಕಾನೂನು ಲೇಖಕ ಬಿ.ಎಚ್.ಗೌಡ ಹೊಸಹಳ್ಳಿಯವರು, ಹಳೆಗನ್ನಡ ವಿದ್ವಾಂಸ ಪ್ರಾ. ನಾಗರಾಜಯ್ಯ ಕಿತ್ತೂರಿನವರು. ಪ್ರಸಿದ್ಧ ಲೇಖಕ ಸ.ಚ.ಮಹದೇವನಾಯಕ, ಕ್ಯಾತನಹಳ್ಳಿ ಬಸವರಾಜು ಮುಂತಾದವರಿದ್ದಾರೆ ಎಂದ ಅವರು, ಪತ್ರಿಕೋದ್ಯಮದ ಪಿತಾಮಹ ಎಂ.ವೆಂಕಟಕೃಷ್ಣಯ್ಯ ತಾಲೂಕಿನ ಅಂತರಸಂತೆ ಹೋಬಳಿ ಮಗ್ಗೆಯಲ್ಲಿ ಜನಿಸಿ ಅನೇಕ ಪತ್ರಿಕೆಗಳನ್ನು ಮುನ್ನಡೆಸಿದ್ದಾರೆ. ಇಂತಹ ಮಹಾನ್ ಸಾಧಕರ ಹುಟ್ಟೂರಿನಲ್ಲಿ ಅವರ ಸ್ಮಾರಕವಾಗಬೇಕು ಎಂಬುದು ನನ್ನ ಬಯಕೆ ಎಂದರು.

ತಾಲೂಕಿನಲ್ಲಿ ಸಂಪದ್ಭರಿತ ಅರಣ್ಯ ಪ್ರದೇಶ, ಜಲಾಶಯಗಳಿವೆ. ಆದರೆ ಜಲಾಶಯ ನಿರ್ಮಾಣದ ವೇಳೆ ಮುಳುಗಡೆಗೊಂಡ ಅನೇಕ ಹಾಡಿ, ಗ್ರಾಮಗಳ ನಿರಾಶ್ರಿತರಿಗೆ ಇನ್ನೂ ಸೌಲ್ಯ ನೀಡಲಾಗಿಲ್ಲ ಎಂಬುದು ಬೇಸರದ ಸಂಗತಿ. ಸರ್ಕಾರ ಈ ಬಗ್ಗೆ ತುರ್ತು ಕ್ರಮ ವಹಿಸಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಅಂತರಸಂತೆ ಗ್ರಾಮ ಅಧ್ಯಕ್ಷ ಸುಬ್ರಹ್ಮಣ್ಯ, ಉಪಾಧ್ಯಕ್ಷೆ ಲೋಲಮ್ಮ, ಪುರಸಭೆ ಉಪಾಧ್ಯಕ್ಷೆ ಗೀತಾ, ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ವೈ.ಡಿ.ರಾಜಣ್ಣ, ಜಾನಪದ ವಿದ್ವಾಂಸ ಸ.ಚ. ಮಹದೇವನಾಯಕ, ರಾಜ್ಯ ಬೀಜ ನಿಗಮ ಮಂಡಳಿ ಮಾಜಿ ಅಧ್ಯಕ್ಷ ಡಿ. ಸುಂದರ ದಾಸ್, ಕೆ.ಪಿ.ಬಸವೇಗೌಡ, ಜಿಪಂ ಮಾಜಿ ಸದಸ್ಯ ವೆಂಕಟಸ್ವಾಮಿ, ರವಿ, ಎ.ಎನ್. ಜಗದೀಶ್, ಯುವ ಮುಖಂಡ ನವೀನ್ ದಾಸ್, ಪ್ರಕಾಶ್, ಎಂ.ಚಂದ್ರಶೇಖರ್, ಶಿವರಾಂ, ಲತಾ, ಬಾಲಯ್ಯ ಸರಗೂರು ತಾಲೂಕು ಕಸಾಪ ಅಧ್ಯಕ್ಷ ಕೆಂಡಗಣ್ಣ, ನೂರಲಕುಪ್ಪೆ ಗ್ರಾಪಂ ಅಧ್ಯಕ್ಷೆ ಜ್ಯೋತಿ, ಉಪಾಧ್ಯಕ್ಷ ಚೆಲುವರಾಜು ಸೇರಿದಂತೆ ವಿವಿಧ ಗ್ರಾಪಂಗಳ ಅಧ್ಯಕ್ಷರು, ಚುನಾಯಿತ ಪ್ರತಿನಿಧಿಗಳು, ಸದಸ್ಯರು ಹಾಜರಿದ್ದರು.

ಕವಿಗೋಷ್ಠಿ: ಕವಿಗೋಷ್ಠಿಯಲ್ಲಿ ಡಾ.ಎಂ.ಎನ್.ರವಿಶಂಕರ್, ಡಾ.ಕಿರಣ್ ಸಿಡ್ಲೇಹಳ್ಳಿ, ಭಾಸ್ಕರ್ ಕಿತ್ತೂರು, ಶಿ.ರ. ನಂದಿನಿ ಕೋಣನೂರು, ಹೇಮಮಾಲಿನಿ, ಗ್ರಾಮೀಣ ಮಹೇಶ್, ಪುನೀತ್ ಅಂಬ್ಲೆ, ಕೆ.ರಮೇಶ್, ಎಂ.ಕುಮಾರಿ, ಮಂಜುಳ ಹೊಮ್ಮರಗಳ್ಳಿ, ಅಂಬುಂಪಾಷ, ಬಾಲ ಸುಬ್ರಹ್ಮಣ್ಯ, ಜಾನ್‌ಕೆನಡಿ, ಸಂಜಯ್ ರಾಮೇನಹಳ್ಳಿ, ಎಸ್.ಎಸ್.ಮಹದೇವಯ್ಯ ಕವಿತೆ ವಾಚನ ಮಾಡಿದರು.

> ಸರ್ಕಾರ ಮಠಾಧೀಶರಿಗೆ 570 ಕೋಟಿ ರೂ.ಅನುದಾನ ನೀಡುತ್ತದೆ. ಆದರೆ 2019ರಲ್ಲಿ ಮುದ್ರಣವಾದ ಕನ್ನಡ ಪುಸ್ತಕಗಳಿಗೆ ಇನ್ನೂ ಹಣ ನೀಡಿಲ್ಲ. ಕೊರೊನಾ ನಂತರ ಸರ್ಕಾರಿ ಶಾಲೆಗಳ ಸ್ಥಿತಿ ಅಧೋಗತಿ ತಲುಪಿದ್ದು, ಅವುಗಳನ್ನು ಸುಧಾರಿಸಲು ಮುಂದಾಗಿಲ್ಲ. ಮಾಜಿ ಸಿಎಂ ಎಸ್.ಎಂ.ಕೃಷ್ಣ ಕಾಲದಲ್ಲಿ ಬಿಸಿಯೂಟ ಜಾರಿಯಾಗಿ ಅನೇಕ ಹಸಿದ ಮಕ್ಕಳು ಊಟ ಮಾಡುವಂತಾಯಿತು. ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಯೋಜನೆಗಳು ಬರಬೇಕು. ಸಾಹಿತ್ಯ ಪ್ರಕಾರಗಳಲ್ಲಿ ಬಂಡಾಯ, ಶರಣ ಸಾಹಿತ್ಯಗಳಿರುವಂತೆ ರಾಜಕೀಯ ಸಾಹಿತ್ಯವೂ ಬರಬೇಕು.
>
> - ಅಡಗೂರು ಹೆಚ್.ವಿಶ್ವನಾಥ್, ವಿಧಾನ ಪರಿಷತ್ ಸದಸ್ಯ

> ನಮ್ಮ ತಂದೆ ಕಾಲದಲ್ಲಿ ಹೆಚ್.ಡಿ.ಕೋಟೆಯಲ್ಲಿ 2 ತಾಲೂಕು ಹಾಗೂ ಒಂದು ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆದಿದೆ. ತಾಲೂಕು 3 ಜಲಾಶಯ, ಮಹದೇಶ್ವರ ಹಾಗೂ ಚಿಕ್ಕದೇವಮ್ಮನವರ ಪುಣ್ಯಕ್ಷೇತ್ರ ಹೊಂದಿದೆ. ಗಡಿ ಅಂಚಿನಲ್ಲಿ ಕನ್ನಡದ ಬಗ್ಗೆ ಜಾಗೃತಿ ಮೂಡಿಸಲು ಅಂತರಸಂತೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ. ಕ್ಷೇತ್ರದ ಸರ್ಕಾರಿ ಶಾಲೆಗಳಿಗೆ ಸೂಕ್ತ ಸೌಲಭ್ಯ ಕಲ್ಪಿಸಲಾಗಿದೆ. ನಾನು ಅಧಿಕಾರಕ್ಕೆ ಬಂದ ನಂತರ 156 ಸರ್ಕಾರಿ ಶಾಲೆಗಳನ್ನು ನವೀಕರಣಗೊಳಿಸಲಾಗಿದೆ. ಆದರೆ ಇನ್ನೂ ಸಹ ಸಾಕಷ್ಟು ಸಮಸ್ಯೆಗಳನ್ನು ಎದುರಿಸುವಂತಾಗಿದ್ದು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಸಮಸ್ಯೆ ನಿವಾರಿಸಲಾಗುತ್ತದೆ.
>
> - ಅನಿಲ್ ಚಿಕ್ಕಮಾದು, ಶಾಸಕ.

ಅದ್ದೂರಿ ಮೆರವಣಿಗೆ



ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಅಂತರಸಂತೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಿಂದ ಸಮ್ಮೇಳನಾಧ್ಯಕ್ಷ ಡಾ.ಅಮ್ಮಸಂದ್ರ ಸುರೇಶ್ ಅವರನ್ನು ಪೂರ್ಣಕುಂಭದೊಂದಿಗೆ ಬೆಳ್ಳಿರಥದಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಜಾನಪದ ಕಲಾ ಪ್ರಕಾರಗಳಾದ ಗೊರವರ ಕುಣಿತ, ವೀರಗಾಸೆ, ಕೋಲಾಟ, ಆದಿವಾಸಿ ಕುಣಿತ, ಡೊಳ್ಳು ಕುಣಿತ ಹಾಗೂ ಶಾಲಾ ಮಕ್ಕಳಿಂದ ಸ್ವಚ್ಛ ಚಿತ್ರ ಮತ್ತು ಬ್ರ್ಯಾಂಡ್ ಸೆಟ್ ಗಮನ ಸೆಳೆದವು. ಸಾಹಿತ್ಯ ಸಮ್ಮೇಳನದ ವಿಚಾರಗೋಷ್ಠಿಯಲ್ಲಿ ಕನ್ನಡ ನೆಲ, ಜಲ, ಭಾಷೆ ವಿಚಾರವಾಗಿ ಡಾ.ಕಿರಣ್ ಸಿಡ್ಲೇಹಳ್ಳಿ, ಗಡಿಯಲ್ಲಿ ಕನ್ನಡದ ಸ್ಥಿತಿಗತಿಗಳ ವಿಚಾರವಾಗಿ ಡಾ.ಕುಮಾರ್ ಅಂಕನಹಳ್ಳಿ, ಶೋಷಿತ ಸಮುದಾಯಗಳ ಹೋರಾಟದ ವಿಚಾರವಾಗಿ ಡಾ.ಕೆ.ಪಿ.ಪ್ರಸನ್ನ ಹಾಗೂ ಮಹಿಳಾ ಸಬಲೀಕರಣ–ಸಾಧಕರು ವಿಚಾರವಾಗಿ ಬೋರಮ್ಮ ವಿಚಾರ ಮಂಡಿಸಿದರು.

ವಿಜೃಂಭಣೆಯ ಮಾರಮ್ಮನ ಜಾತ್ರೆ



ದೊಡ್ಡಕವಲಂದೆ, ಫೆ.15– ನಂಜನಗೂಡು ತಾಲೂಕಿನ ದೊಡ್ಡ ಕವಲಂದೆ ಹಾಗೂ ಗಟ್ಟವಾಡಿ ಗ್ರಾಮದಲ್ಲಿ ಮಾರಮ್ಮನವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಸುಮಾರು 4 ದಿನಗಳ ಕಾಲ ನಡೆಯುವ ಜಾತ್ರಾ ಮಹೋತ್ಸವವನ್ನು ಹಲವು ಕಟ್ಟುಪಾಡುಗಳಿಂದ ಆಚರಣೆ ಮಾಡಲಾಯಿತು. ಹೆಬ್ಬರಕ್ಕೆ ಗ್ರಾಮಸ್ಥರು ಮತ್ತು ಮಹಿಳೆಯರು ಅಕ್ಕಿ, ಎಣ್ಣೆ ಹಾಕಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು.

ಮಾರಮ್ಮನವರ ದೇವಾಲಯದಲ್ಲಿ ಮಾರಮ್ಮನವರ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಹೂವಿನಿಂದ ಅಲಂಕಾರ ಮಾಡಿ ಗ್ರಾಮಸ್ಥರು ವಿಶೇಷ ಪೂಜೆಯನ್ನು ಸಲ್ಲಿಸಿದರು. ಹರಕೆ ಹೊತ್ತ ಭಕ್ತರು ದೇವಾಲಯದ ಮುಂಭಾಗ ಎಳನೀರು, ಬಾಳೆಹಣ್ಣು, ಹೂವಿನ ಹಾರ ಕಟ್ಟಿ ಹರಕೆ ತೀರಿಸಿದರೆ, ಮಹಿಳೆಯರು ಮತ್ತು ಪುರುಷರು ಬಾಯಿ ಬೀಗವನ್ನು ಹಾಕಿಕೊಂಡು ಪುನೀತರಾದರು. ಹೆಬ್ಬರದ ಜೊತೆ ಮಹಿಳೆಯರು ತಂಪು (ತಂಬಿಟ್ಟು) ತಂದು ದೇವಾಲಯದಲ್ಲಿ ಪೂಜೆಯನ್ನು ಸಲ್ಲಿಸಿದರು. ಹೆಬ್ಬರದ ಜೊತೆ ಕೇಲು ತಂದು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಜಾತ್ರಾ ಮಹೋತ್ಸವದಲ್ಲಿ ಸತ್ತಿಗೆ, ಸುರಪಾನಿ, ಮಂಗಳವಾದ್ಯ ತಮಟೆ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಭಾಗವಹಿಸಿ ಮತ್ತಷ್ಟು ಮೆರುಗು ತಂದವು.

ಗಟ್ಟವಾಡಿ ಮಾರಮ್ಮನವರ ಜಾತ್ರಾ ಮಹೋತ್ಸವವನ್ನು ಸುತ್ತಮುತ್ತಲಿನ ಗ್ರಾಮಗಳಾದ ಹರಗನಪುರ, ಗಟ್ಟವಾಡಿಪುರ, ಭುಜಗನಪುರ, ಹಳೇಪುರ, ನೇರಳೆ, ಹಂಪಾಪುರ, ದೊಡ್ಡ ಕವಲಂದೆ, ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಆಚರಣೆ ಮಾಡಲಾಗುತ್ತದೆ.

ತಿ.ನರಸೀಪುರ ನೂತನ ಬಿಇಓ ಶ್ರೀನಿವಾಸ್ ಅಧಿಕಾರ ಸ್ವೀಕಾರ



ತಿ.ನರಸೀಪುರ, ಫೆ.15– ತಾಲೂಕಿನ ನೂತನ ಶಿಕ್ಷಣಾಧಿಕಾರಿಯಾಗಿ ಸಿ.ಶ್ರೀನಿವಾಸ್ ಬುಧವಾರ ಅಧಿಕಾರ ವಹಿಸಿಕೊಂಡರು.

ನಿಕಟಪೂರ್ವ ಬಿಇಓ ಮರಿಸ್ವಾಮಿ ಉಪನಿರ್ದೇಶಕರಾಗಿ ಪದೋನ್ನತಿ ಹೊಂದಿ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಅವರಿಂದ ತೆರವಾಗಿದ್ದ ಸ್ಥಾನಕ್ಕೆ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ನೇಮಕಗೊಂಡ ಶ್ರೀನಿವಾಸ್ ಅಧಿಕಾರ ವಹಿಸಿಕೊಂಡರು.

ಶ್ರೀನಿವಾಸ್ ಮಾತನಾಡಿ, ಶೈಕ್ಷಣಿಕವಾಗಿ ಉತ್ತಮ ಹಿನ್ನೆಲೆವುಳ್ಳ ತಾಲೂಕಿನ ಬಿಇಓ ಆಗಿ ಅಧಿಕಾರ ವಹಿಸಿಕೊಂಡಿರುವುದು ಖುಷಿ ತಂದಿದೆ. ನಿಕಟಪೂರ್ವ ಶಿಕ್ಷಣಾಧಿಕಾರಿಗಳು ಕಾಪಾಡಿಕೊಂಡು ಬಂದಿರುವ ಶೈಕ್ಷಣಿಕ ಉತ್ಕೃಷ್ಟತೆ ಉಳಿಸಿಕೊಂಡು ಹೋಗುವುದಾಗಿ ತಿಳಿಸಿದರು. ತಾಲೂಕಿನ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸಾಧನೆಗೈಯಲು ಶಿಕ್ಷಕ ವೃಂದ ಮತ್ತು ಕಚೇರಿ ಸಿಬ್ಬಂದಿ ಸಹಕರಿಸಲು ಮನವಿ ಮಾಡಿದರು.

ಡಿಡಿಪಿಐಯಾಗಿ ಮುಂಬಡ್ತಿ ಪಡೆದ ಮರಿಸ್ವಾಮಿ ಮಾತನಾಡಿ, ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸಲು ಸಹಕರಿಸಿದ ಶಿಕ್ಷಕ ವೃಂದ ಮತ್ತು ನೌಕರ ವರ್ಗಕ್ಕೆ ಧನ್ಯವಾದ ತಿಳಿಸಿದರು. ಶಿಕ್ಷಕರ ಅಚ್ಚುಮೆಚ್ಚಿನ ಶಿಕ್ಷಣಾಧಿಕಾರಿಗಳಿಗೆ ಶಿಕ್ಷಕ ವೃಂದ ಮತ್ತು ನೌಕರ ವರ್ಗ ಹಾರ ತುರಾಯಿ ಹಾಕಿ ಭಾವುಕವಾಗಿ ಬೀಳ್ಕೊಟ್ಟರು.

ಕಾರ್ಯಕ್ರಮದಲ್ಲಿ ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರ ಮೂರ್ತಿ, ಬಿಆರ್‌ಸಿ ನಾಗೇಶ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಮದ್ದಾನಪ್ಪ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಚ್.ಡಿ.ಮಾದಪ್ಪ, ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ, ಕಾರ್ಯದರ್ಶಿ ಸುಬ್ರಹ್ಮಣ್ಯ, ಇಸಿಒಗಳಾದ ಮಹದೇವಸ್ವಾಮಿ, ಗಜೇಂದ್ರ, ರೇವಣ್ಣ, ವಿಶ್ವನಾಥರೆಡ್ಡಿ, ಸೂರ್ಯಕುಮಾರ, ಸೋಸಲೆ ನಾಗೇಶ, ಬಿಆರ್‌ಪಿಗಳಾದ ಕೆ.ಪಿ.ಮಹದೇವಸ್ವಾಮಿ, ಪ್ರಶಾಂತ, ಶ್ರೀದೇವಿ, ರಾಜಶೇಖರ್, ಐಆರ್‌ಟಿ ವೆಂಕಟೇಶ, ಸಿದ್ದರಾಜಪ್ಪ, ಮಂಟೇಶಸ್ವಾಮಿ, ನಾಗೇಂದ್ರ ಇತರರಿದ್ದರು.

ಗುರುಗಳ ಮಾರ್ಗದರ್ಶನದಲ್ಲಿ ಕಲಿತಾಗ ಮಾತ್ರ ಯಶಸ್ಸು ಸಾಧ್ಯ



ಪಿರಿಯಾಪಟ್ಟಣ, ಫೆ.15– ವಿದ್ಯಾರ್ಥಿಗಳು ಸಾಧನೆಯ ಗುರಿಯೊಂದಿಗೆ ಗುರುಗಳ ಮಾರ್ಗದರ್ಶನದಲ್ಲಿ ಕಲಿತಾಗ ಮಾತ್ರ ಯಶಸ್ಸು ಪಡೆಯಬಹುದು ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ಪದವಿ ಪೂರ್ವ ಕಾಲೇಜು ವತಿಯಿಂದ ನಡೆದ ಕಿರಿಯ ವಿದ್ಯಾರ್ಥಿಗಳಿಂದ ಹಿರಿಯ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು, ವಿದ್ಯಾರ್ಥಿ ಜೀವನದಲ್ಲಿ ಪಿಯುಸಿ ಪ್ರಮುಖ ಘಟ್ಟವಾಗಿದೆ, ಸಾಧನೆ ಯಾರೊಬ್ಬರ ಸ್ವತ್ತಲ್ಲ. ಕಠಿಣ ಪರಿಶ್ರಮದ ಅಭ್ಯಾಸದೊಂದಿಗೆ ಗುರು ಹಾಗೂ ಪೋಷಕರಿಗೆ ಗೌರವ ತಂದುಕೊಡಬೇಕು, ವಿದ್ಯಾರ್ಥಿಗಳು ಜೀವನದಲ್ಲಿ ತಾಳ್ಮೆ, ಸಹನೆ, ಏಕಾಗ್ರತೆ, ಶಿಸ್ತು, ಸಂಯಮ ಮೈಗೂಡಿಸಿಕೊಂಡು ಅಪನಂಬಿಕೆ ಅಸೂಯೆ ದ್ವೇಷ ಭಾವನೆ ಅಳಿಸಿ ಡಾ.ಅಬ್ದುಲ್ ಕಲಾಂ ರಂತಹ ಮಹನೀಯರ ಜೀವನ ಆದರ್ಶನಗಳನ್ನು ಮೈಗೂಡಿಸಿಕೊಳ್ಳುವಂತೆ ತಿಳಿಸಿದರು.

ಮೈಸೂರಿನ ಡಯಟ್ ಉಪನ್ಯಾಸಕ ನಂಜುಂಡಾರಾಧ್ಯ ಮಾತನಾಡಿ, ಪ್ರತಿಯೊಬ್ಬರ ಜೀವನದಲ್ಲೂ ಒಂದಲ್ಲ ಒಂದು ರೀತಿ ಪರೀಕ್ಷೆ ಎದುರಾಗುತ್ತದೆ ಏಕಾಗ್ರತೆ ಮೂಲಕ ಸಿಕ್ಕ ಸಮಯವನ್ನು ಸದ್ಬಳಕೆ ಮಾಡಿಕೊಂಡಾಗ ಯಶಸ್ಸು ಸಿಗುತ್ತದೆ. ವಿದ್ಯಾರ್ಥಿಗಳು ಪತ್ರಿಕೆಗಳನ್ನು ಓದುವ ಹವ್ಯಾಸ ಮೈಗೂಡಿಸಿಕೊಂಡು ಜ್ಞಾನಾರ್ಜನೆ ಬೆಳೆಸಿಕೊಳ್ಳುವಂತೆ ತಿಳಿಸಿದರು.

ಸಿಡಿಪಿಓ ಮಮತಾ ಮಾತನಾಡಿ, ನಮ್ಮ ನಡವಳಿಕೆಗಳು ಇತರರಿಗೆ ಮುಜುಗರ ಉಂಟು ಮಾಡುವಂತಿರಬಾರದು, ಆತ್ಮಸ್ಥೈರ್ಯದಿಂದ ಸಾಧಿಸುವ ಛಲ ಬಿಡದೆ ಮುನ್ನುಗ್ಗಿದಾಗ ಯಾವುದೇ ಸಾಧನೆ ಸಾಧ್ಯ ಎಂದರು

ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಆಶೀರ್ವಚನ ನೀಡಿದರು.

ಈ ಸಂದರ್ಭ ಎಸ್.ಸಿ.ವಿ.ಡಿ.ಎಸ್ ಶಾಲೆ ಮುಖ್ಯ ಶಿಕ್ಷಕ ತಿಪ್ಪೇರುದ್ರಸ್ವಾಮಿ, ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ, ಪ್ರಾಂಶುಪಾಲ ಗೋವಿಂದೇಗೌಡ, ಹಿಟ್ನೆಹೆಬ್ಬಾಗಿಲು ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಶ್ರೀನಿವಾಸ್, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬೆಕ್ಕರೆ ಸತೀಶ್ ಆರಾಧ್ಯ, ಪುಷ್ಪ ಶಾಲೆ, ದೈಹಿಕ ಶಿಕ್ಷಕ ಶ್ರೀನಿವಾಸ್, ಮುಖ್ಯಶಿಕ್ಷಕಿ ದಿವ್ಯ, ಉಪನ್ಯಾಸಕರು, ವಿದ್ಯಾರ್ಥಿಗಳು ಇದ್ದರು.

ನಂಜನಗೂಡಲ್ಲಿ ಸರಣಿ ಕಳ್ಳತನ

ನಂಜನಗೂಡು, ಫೆ.15– ಇಲ್ಲಿನ ವಿದ್ಯಾನಗರದಲ್ಲಿ ದುಷ್ಕರ್ಮಿಗಳು ಕಬ್ಬಿಣದ ರಾಡ್‌ನಿಂದ 3 ಮನೆಗಳ ಬಾಗಿಲು ಮೀಟಿ ಸರಣಿ ಕಳ್ಳತನ ನಡೆಸಿ ಚಿನ್ನಾಭರಣ, ನಗದು ಕಳವು ಮಾಡಿ ಪರಾರಿಯಾಗಿರುವ ಘಟನೆ ಮಂಗಳವಾರ ರಾತ್ರಿ ನಡೆದಿದೆ.

ವಿದ್ಯಾನಗರ ನಿವಾಸಿ ನಾಗೇಂದ್ರಮೂರ್ತಿ ಅವರ ಮನೆಯಲ್ಲಿ 60 ಗ್ರಾಂ ಚಿನ್ನ, 2.50 ಲಕ್ಷ ನಗದು ದೋಚಿದ್ದಾರೆ. ಶಿವಪುನೀತ್ ಮನೆಯಲ್ಲಿ 167 ಗ್ರಾಂ ಚಿನ್ನ, ಮಹೇಶ್ ನಾಯಕ ಮನೆಯಲ್ಲಿ 2 ಲಕ್ಷ 40 ಸಾವಿರ ಮೌಲ್ಯದ 70 ಗ್ರಾಂ ಚಿನ್ನ ಕದ್ದು ಪರಾರಿಯಾಗಿದ್ದಾರೆ. ವೃತ್ತ ನಿರೀಕ್ಷಕ ಬಸವರಾಜು 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿ, ಮನೆ ಮಾಲೀಕರು ಕಳೆದ 3 ದಿನದಿಂದ ಬಾಗಿಲಿಗೆ ಬೀಗ ಹಾಕಿ ಬೇರೆ ಊರುಗಳಿಗೆ ತೆರಳಿದ್ದಾರೆ. ಇದನ್ನು ಗಮನಿಸಿದ ದುಷ್ಕರ್ಮಿಗಳು ಕಬ್ಬಿಣದ ಹಾರೆಯಿಂದ ಬಾಗಿಲನ್ನು ಮೀಟಿ ಚಿನ್ನ, ನಗದು ಕದ್ದು ಪರಾರಿಯಾಗಿದ್ದಾರೆ. ಆರೋಪಿಗಳ ಪತ್ತೆಗಾಗಿ ಶೋಧ ಕಾರ್ಯ ಮುಂದುವರೆದಿದ್ದು, ಶೀಘ್ರ ಬಂಧಿಸಲಾಗುವುದು ಎಂದರು.

ಸ್ಥಳಕ್ಕೆ ವೃತ್ತ ನಿರೀಕ್ಷಕ ಬಸವರಾಜು ಶ್ವಾನದಳ, ಬೆರಳಚ್ಚು ತಜ್ಞರು ತಂಡದೊಂದಿಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಈ ಸಂಬಂಧ ನಂಜನಗೂಡು ಟೌನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಿಜೆಪಿ ಸರ್ಕಾರದ ವೈಫಲ್ಯ ತಿಳಿಸಲು ಪ್ರಜಾಧ್ವನಿ ಯಾತ್ರೆ

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್



ಹೆಚ್.ಡಿ.ಕೋಟೆ, ಫೆ.15– ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ಜನತೆಗೆ ತಿಳಿಸಲು ಕಾಂಗ್ರೆಸ್ ವತಿಯಿಂದ ಪ್ರಜಾಧ್ವನಿ ಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ತಿಳಿಸಿದರು.

ಪಟ್ಟಣದ ಬಸ್ ನಿಲ್ದಾಣದ ಮುಂಭಾಗ ಬುಧವಾರ ಆಯೋಜಿಸಿದ್ದ ಪ್ರಜಾಧ್ವನಿ ಯಾತ್ರೆ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 2018ರ ಚುನಾವಣೆಯಲ್ಲಿ ವಿಧಾನ ಸಭೆಗೆ ಕಿರಿಯ ವಯಸ್ಸಿನ ಶಾಸಕರನ್ನು ಆಯ್ಕೆ ಮಾಡಿದ್ದೀರಾ. ಕೋವಿಡ್ ಸಂದರ್ಭ ಅನಿಲ್ ಚಿಕ್ಕಮಾದು ಸಾಕಷ್ಟು ಕೆಲಸ ಮಾಡಿದ್ದಾರೆ. ರಾಜ್ಯದಲ್ಲಿ ನಮ್ಮ ಸರ್ಕಾರ ಇಲ್ಲದಿದ್ದರೂ, 700 ಕೋಟಿ ರೂ.ಗಳಿಗೂ ಹೆಚ್ಚು ಅನುದಾನ ತಂದು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅನುದಾನ ಕೊಡುವ ವಿಚಾರದಲ್ಲಿ ತಾರತಮ್ಯ ಮಾಡುತ್ತಿದೆ ಎಂದು ಆರೋಪಿಸಿದರು.

ಚುನಾವಣೆಗೆ ಇನ್ನೆರಡು ತಿಂಗಳು ಬಾಕಿ ಇದ್ದು, ನಮ್ಮ ಕಾರ್ಯಕರ್ತರು ಮನೆ ಮನೆಗೆ ತೆರಳಿ ಪ್ರಚಾರ ಮಾಡಬೇಕು. ಮುಂದಿನ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ತರಲು ಹೋರಾಟ ಮಾಡಬೇಕಾಗಿದೆ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಮ್ಮ ತಂದೆಗೆ ಸಾಕಷ್ಟು ಸಹಾಯ ಮಾಡಿದ್ದಾರೆ. ಹುಣಸೂರು ಉಪಚುನಾವಣೆ ನಡೆದಾಗ ನನ್ನ ತಂದೆಗೆ ಹಾಗೂ ಕಳೆದ ಚುನಾವಣೆಯಲ್ಲಿ ನನ್ನ ಮೇಲೆ ನಂಬಿಕೆ ಇಟ್ಟು ಹೆಚ್.ಡಿ ಕೋಟೆ ಟಿಕೆಟ್ ನೀಡಿದರು ಎಂದ ಅವರು, ಬಿಜೆಪಿ ಸರ್ಕಾರದಲ್ಲಿ ಸರಿಯಾದ ಅನುದಾನ ಕೊಟ್ಟಿಲ್ಲ ಆದರೂ ನಾನು ಹೋರಾಟ ಮಾಡಿ ಅನುದಾನ ತಂದು ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ನಮ್ಮ ತಂದೆ ಶಾಸಕರಾಗಿದ್ದ ಸಂದರ್ಭ ಸಂಸದರಾಗಿದ್ದ ಧ್ರುವನಾರಾಯಣ್ ಜೊತೆ ಜೋಡೆತ್ತಿನ ರೀತಿ ಕೆಲಸ ಮಾಡಿ ತಾಲೂಕನ್ನು ಅಭಿವೃದ್ಧಿ ಮಾಡಿದ್ದಾರೆ. ಹಾಗಾಗಿ ನಾನು ಶಾಸಕನಾಗಿ ಆಯ್ಕೆ ಆಗಲು ಸಾಧ್ಯವಾಯಿತು ಎಂದರು.

ಗ್ರಾಮ ವಾಸ್ತವ್ಯ ಮಾಡಿದ ಏಕೈಕ ಶಾಸಕ ನಾನು. ಡಿ.ಕೆ.ಶಿವಕುಮಾರ್ ಅಧ್ಯಕ್ಷರಾದ ಮೇಲೆ ಬಡವರ ಪರ ಕೆಲಸ ಮಾಡಲು ಸೂಚನೆ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತೆ ಆಗ ಸಾಕಷ್ಟು ಅಭಿವೃದ್ಧಿ ಪಡಿಸಲು ಸಾಧ್ಯವಾಗುತ್ತದೆ ಹಾಗಾಗಿ ಮುಂದಿನ ಚುನಾವಣೆಯಲ್ಲಿ ನನಗೆ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ತಾಲೂಕಿನ ಜನತೆ ನನ್ನ ಹಾಗೂ ಪಕ್ಷ ಅಭ್ಯರ್ಥಿ ಕೈ ಹಿಡಿಯುತ್ತಾರೆ ಎಂಬ ನಂಬಿಕೆಯಿಂದ ಬಹಳ ಅಭಿಮಾನಪೂರ್ವಕವಾಗಿ ನಿಮ್ಮ ಕ್ಷೇತ್ರಕ್ಕೆ ಬಂದಿದ್ದೇನೆ. ಅನಿಲ್ ಚಿಕ್ಕಮಾದು ಒಬ್ಬ ಸರಳ, ಪರಿಶಿಷ್ಟ ಪಂಗಡದ ಯುವಕ ಸಣ್ಣ ದುರಹಂಕಾರವೂ ಇಲ್ಲ. ನಿಮ್ಮ ಸೇವೆಯನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದಾನೆ ಎಂದರು.

ಕೆಂಪೇಗೌಡ ಜಯಂತಿಯಲ್ಲಿ ತಾಲೂಕಿನ ಒಕ್ಕಲಿಗರ ಭವನಕ್ಕೆ 50 ಲಕ್ಷ ಕೊಡುತ್ತೇನೆಂದು ಈಗಾಗಲೇ ಘೋಷಣೆ ಮಾಡಿದ್ದೇನೆ. ಅದರಂತೆ ನಡೆದುಕೊಳ್ಳುತ್ತೇನೆ. ಹಾಗಾಗಿ ನಿಮ್ಮ ಜೊತೆ ನಾನಿದ್ದೇನೆ ನನ್ನ ಕೈ ಬಲಪಡಿಸಿ ಎಂದು ಒಕ್ಕಲಿಗರಲ್ಲಿ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಡಾ.ಹೆಚ್.ಸಿ. ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಹೆಚ್.ಎಂ. ರೇವಣ್ಣ, ಮಾಜಿ ಸಚಿವೆ ರಾಣಿ ಸತೀಶ್, ಯೂತ್ ಕಾಂಗ್ರೆಸ್ ರಾಜ್ಯಾಧ್ಯಕ್ಷ ನಲ ಪಾಡ್, ಕೇರಳ ಶಾಸಕರಾದ ರೋಜಿ ಜಾನ್, ಅನಿಲ್ ಕುಮಾರ್, ಜಿಲ್ಲಾ ಅಧ್ಯಕ್ಷ ವಿಜಯ ಕುಮಾರ್, ಗ್ರಾಪಂ ಅಧ್ಯಕ್ಷ ನರೇಂದ್ರ, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷಾ, ಯೂತ್ ಕಾಂಗ್ರೆಸ್ ಅಧ್ಯಕ್ಷರಾದ ನಯಾಜ್, ಹೋಂಡಾ ಶಿವರಾಜ್, ಮೈಮುಲ್ ನಿರ್ದೇಶಕ ಹಿರೇಗೌಡ, ಮುಖಂಡರಾದ ಚಿಕ್ಕವೀರನಾಯಕ, ದೊಡ್ಡ ನಾಯಕ, ಮಂಜುನಾಥ್, ಸತೀಶ್‌ಗೌಡ, ಸೋಮೇಶ್, ನರಸಿಂಹಮೂರ್ತಿ, ಪ್ರದೀಪ್, ರವಿ, ಶ್ರೀನಿವಾಸ್, ನಾಗರಾಜ್, ರಾಜನಾಯಕ, ಅಶೋಕ್, ಪ್ರೇಮ್‌ಸಾಗರ್, ಶಿವಪ್ಪ ಕೋಟೆ, ರಾಮು, ಪ್ರಭುಸ್ವಾಮಿ, ಸೋಮು, ಪರಶಿವಮೂರ್ತಿ, ಗಣೇಶ್ ಆಚಾರ್, ಬಿ.ಪಿ.ಭಾಸ್ಕರ್, ಕಾವೇರ, ಸುರೇಂದ್ರ, ಶಿವಮಲ್ಲಪ್ಪ ಜಯರಾಮ್, ಪಟೇಲ್ ಸೋಮು, ಮಾದಪ್ಪ, ನಂದಿನಿ, ಬಸವರಾಜು, ದಾಕ್ಷಾಯಿಣಿ, ಸೌಮ್ಯ ಇನ್ನಿತರರಿದ್ದರು.

ಖಾಸಗಿ ಕಾರ್ಖಾನೆಯಿಂದ ಶಾಲಾ ಕಟ್ಟಡ ಕಳಪೆ ಕಾಮಗಾರಿ

ರೈತ ಸಂಘದಿಂದ ಪ್ರತಿಭಟನೆ



ನಂಜನಗೂಡು, ಫೆ.15– ಸೋಲಾರ್ ಆಸ್ಟೀನ್ ಫಾರ್ಮಾ ಸೈನ್ಸ್ ಕಾರ್ಖಾನೆ ತನ್ನ ಸಿಎಸ್‌ಆರ್ ಅನುದಾನದಲ್ಲಿ ತಾಲೂಕಿನ ಇಮ್ಮಾವುಹುಂಡಿ (ಉಪ್ಪಿಲಿಗರಹುಂಡಿ) ಗ್ರಾಮದಲ್ಲಿ ನಿರ್ಮಿಸುತ್ತಿರುವ ಸರ್ಕಾರಿ ಶಾಲೆ ಕಟ್ಟಡ ಕಾಮಗಾರಿ ಸಂಪೂರ್ಣ ಕಳಪೆಯಾಗಿದ್ದು, ಶಾಲಾ ಕಟ್ಟಡ ತೆರವುಗೊಳಿಸಿ ಹೊಸ ಸುಸಜ್ಜಿತ ಕಟ್ಟಡ ನಿರ್ಮಿಸಬೇಕೆಂದು ಒತ್ತಾಯಿಸಿ ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ತಾಲೂಕಿನ ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿರುವ ಸೋಲಾರ್ ಆಸ್ಟೀನ್ ಫಾರ್ಮಾ ಸೈನ್ಸ್ ಕಾರ್ಖಾನೆ ಮುಂಭಾಗ ಜಮಾಯಿಸಿದ ರೈತ ಸಂಘದ ಕಾರ್ಯಕರ್ತರು ಕಾರ್ಖಾನೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್ ಮಾತನಾಡಿ, ತಾಲೂಕಿನ ಉಪ್ಪಿಲಿಗರಹುಂಡಿಯಲ್ಲಿ ಸೋಲಾರ್ ಆಸ್ಟೀನ್ ಫಾರ್ಮಾ ಸೈನ್ಸ್ ಕಾರ್ಖಾನೆ ತನ್ನ ಸಿಎಸ್‌ಆರ್ ಅನುದಾನದಲ್ಲಿ ನಿರ್ಮಿಸುತ್ತಿರುವ ಶಾಲಾ ಕಟ್ಟಡ ಸಂಪೂರ್ಣ ಕಳಪೆಯಾಗಿದೆ. ಕಟ್ಟಡದ ಅಡಿಪಾಯವನ್ನು ಸಿಮೆಂಟ್ ಇಟ್ಟಿಗೆಯಿಂದ ಹಾಕಲಾಗಿದೆ. ಅಲ್ಲದೆ ಪಿಲ್ಲರ್ ಅನ್ನೂ ಇಟ್ಟಿಗೆಯಿಂದ ನಿರ್ಮಿಸಿ ಪ್ಲಾಸ್ಟರಿಂಗ್ ಮಾಡಿಸಲಾಗಿದೆ. ಅಲ್ಲದೆ ಕಳಪೆ ಗುಣಮಟ್ಟದ ಸಿಮೆಂಟ್ ಡಸ್ಟ್ ಬಳಕೆ ಮಾಡಿ ಕಟ್ಟಡ ನಿರ್ಮಿಸಿದ್ದು, ಈ ಕಟ್ಟಡ ಯಾವ ಸಂದರ್ಭದಲ್ಲಾದರೂ ಬಿದ್ದು ಹೋಗಬಹುದು. ಈ ಶಾಲೆಯಲ್ಲಿ ಬಡವರ, ಮಕ್ಕಳು ವ್ಯಾಸಾಂಗ ಮಾಡುತ್ತಿದ್ದು, ಏನಾದರೂ ಅಚಾತುರ್ಯವಾದರೆ ಶಾಲಾ ಮಕ್ಕಳ ಜೀವಕ್ಕೆ ಯಾರು ಜವಾಬ್ದಾರರು? ಅಲ್ಲದೆ ಯಾವುದೇ ಕಾರ್ಖಾನೆಯವರು ತನ್ನ ಸಿಎಸ್‌ಆರ್ ಅನುದಾನವನ್ನು ಶೈಕ್ಷಣಿಕ, ಆರೋಗ್ಯ ಕ್ಷೇತ್ರಗಳಿಗೆ ಖರ್ಚು ಮಾಡಬೇಕು. ಆದರೆ ಕಾರ್ಖಾನೆಗಳು ಅನುದಾನ ದುರ್ಬಳಕೆ ಮಾಡಿಕೊಳ್ಳುವ ಜೊತೆಗೆ ಕಾಟಾಚಾರಕ್ಕೆ ಶಾಲಾ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದಾರೆ ಎಂದು ಕಿಡಿಕಾರಿದರು.

ಕಳಪೆ ಕಟ್ಟಡ ನಿರ್ಮಿಸುವ ಜೊತೆಗೆ ಶಾಲಾ ಕಟ್ಟಡದಲ್ಲಿದ್ದ 3 ಟನ್ ಕಬ್ಬಿಣ, ಬೆಲೆ ಬಾಳುವ ಮರಮುಟ್ಟುಗಳನ್ನು ಶಾಲಾ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರ ಗಮನಕ್ಕೆ ತರದೇ ರಾತ್ರೋ ರಾತ್ರಿ ಕದ್ದೊಯ್ದಿದ್ದಾರೆ. ಶಾಲೆಯಿಂದ ಗುತ್ತಿಗೆದಾರ ಕಳ್ಳತನ ಮಾಡಿರುವ ಶಾಲಾ ಪರಿಕರಗಳನ್ನು ವಾಪಸ್ ತಂದು ಕೊಡಬೇಕು, ಕಳಪೆಯಾಗಿರುವ ಕಟ್ಟಡವನ್ನು ತೆರವುಗೊಳಿಸಿ ಸುಸಜ್ಜಿತ ಕಟ್ಟಡ ನಿರ್ಮಿಸಬೇಕು. ಇಲ್ಲವಾದಲ್ಲಿ ಅನಿರ್ದಿಷ್ಟಾವಧಿಗೆ ಪ್ರತಿಭಟನೆ ಮುಂದುವರೆಸಲಾಗುವುದು. ಜೊತೆಗೆ ಚುನಾವಣೆಯನ್ನೂ ಬಹಿಷ್ಕರಿಸಲಾಗುವುದು ಎಂದು ಎಚ್ಚರಿಸಿದರು.

ಶಿರಸ್ತೇದಾರ್ ಶ್ರೀಪಾದು ಪ್ರತಿಭಟನಾ ಸ್ಥಳಕ್ಕೆ ಧಾವಿಸಿ ಮನವಿ ಸ್ವೀಕರಿಸಿದರು. ಕಾರ್ಖಾನೆ ಎಚ್.ಆರ್.ಜಯಚಂದ್ರ ಮಾತನಾಡಿ, ನಾಳೆಯಿಂದಲೇ ಕೆಲಸ ಪ್ರಾರಂಭಿಸಿ ಶಾಲಾ ಕಟ್ಟಡವನ್ನು ಸರಿಪಡಿಸಿ ಸಮಸ್ಯೆ ಬಗೆಹರಿಸಲಾಗುವುದು ಎಂದರು. ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಇಮ್ಮಾವುರಘು, ತಾಲೂಕು ಅಧ್ಯಕ್ಷ ಸತೀಶ್‌ರಾವ್, ಶಿವು, ಸ್ವಾಮಿ, ಭಾಗ್ಯಮ್ಮ, ದೇವರಾಜು, ರಂಗಸ್ವಾಮಿ, ಸಿದ್ದರಾಜು, ಮಹೇಶ್, ಸಣ್ಣಶೆಟ್ಟಿ, ಸಿದ್ದಮ್ಮ, ರತ್ನಮ್ಮ, ಸಾಕಮ್ಮ, ರಾಚಮ್ಮ, ಸೇರಿದಂತೆ ರೈತ ಸಂಘದ ಪದಾಧಿಕಾರಿಗಳು ಇದ್ದರು.

ವಿದ್ಯುತ್ ದರ ಪರಿಷ್ಕರಣೆ ಪ್ರಸ್ತಾಪಕ್ಕೆ ಗ್ರಾಹಕರ ತೀವ್ರ ವಿರೋಧ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದಿಂದ ಮೈಸೂರಲ್ಲಿ ಸಾರ್ವಜನಿಕರ ವಿಚಾರಣೆ, ಆಕ್ಷೇಪಣೆ ಸ್ವೀಕಾರ

ಮೈಸೂರು, ಫೆ. 15(ಆರ್‌ಕೆ)– 2023–24ನೇ ಸಾಲಿನಲ್ಲಿ ವಿದ್ಯುತ್ ದರ ಪರಿಷ್ಕರಿಸಬೇಕೆಂಬ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಪ್ರಸ್ತಾವನೆಗೆ ಗ್ರಾಹಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಬೀದಿದೀಪ, ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಗಳಿಂದ ಬರಬೇಕಾಗಿರುವ ನೂರಾರು ಕೋಟಿ ರೂ.ಗಳ ವಿದ್ಯುತ್ ಬಿಲ್ ವಸೂಲಿ ಮಾಡಿ, ವಿದ್ಯುತ್ ಸೋರಿಕೆ ತಡೆಗಟ್ಟುವ ಮೂಲಕ ವಿದ್ಯುತ್ ವಿತರಣಾ ನಷ್ಟವನ್ನು ಭರಿಸಿಕೊಳ್ಳಬೇಕೇ ಹೊರತು, ಆದಾಯ ಕೊರತೆ ಸರಿದೂಗಿಸಲು ವಿದ್ಯುತ್ ದರ ಏರಿಸಿ ಗ್ರಾಹಕರ ಮೇಲೆ ಬರೆ ಎಳೆಯುವುದು ಸರಿಯಲ್ಲ ಎಂಬ ಒಕ್ಕೊರಲ ಅಭಿಪ್ರಾಯ ಕೇಳಿಬಂದಿತು.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷ ಪಿ. ರವಿಕುಮಾರ್, ಸದಸ್ಯರಾದ ಹೆಚ್.ಎಂ. ಮಂಜುನಾಥ್ ಹಾಗೂ ಎಂಡಿ ರವಿ ಅವರು ಇಂದು ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ವಿದ್ಯುತ್ ದರ ಪರಿಷ್ಕರಣೆ ಸಂಬಂಧ ವಿಚಾರಣೆ ನಡೆಸಿದಾಗ ಗ್ರಾಹಕರಿಂದ ಅದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಯಿತು.

ಆರ್ಥಿಕ ವರ್ಷ 2023–24ನೇ ಸಾಲಿನ ಸೆಸ್ಕಾಂ ಒಟ್ಟು 1049.74 ಕೋಟಿ ರೂ.ಗಳ ಕಂದಾಯ ಭರಿಸಲು ಎಲ್ಲಾ ಜಕಾತಿಗಳನ್ನೊಳಗೊಂಡಂತೆ ಸರಾಸರಿ ಪ್ರತಿ ಯೂನಿಟ್‌ಗೆ 1.46 ರೂ. ವಿದ್ಯುತ್ ದರ ಹೆಚ್ಚಿಸಲು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ



ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು 2022ರ ನ.29 ರಂದು ಪ್ರಸ್ತಾಪ ಸಲ್ಲಿಸಿತ್ತು. ಇಂದು ನಡೆದ ವಿಚಾರಣೆ ವೇಳೆ ಸೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ ಜಯವಿಭವ ಸ್ವಾಮಿ ಸಹ ಈ ಸಂಬಂಧ ಆಯೋಗದ ಅಧ್ಯಕ್ಷರು, ಸದಸ್ಯರಿಗೆ ಪ್ರಸ್ತಾವನೆ ಸಲ್ಲಿಸಿದರು.

ಕೊರೊನಾ ಸಂದರ್ಭ 2 ವರ್ಷಗಳ ಕಾಲ ಸಬ್ಸಿಡಿ ದರದಲ್ಲಿ ವಿದ್ಯುತ್ ಪೂರೈಕೆ ಮಾಡಿರುವುದರಿಂದ ಹಾಗೂ ಅಗತ್ಯ ಮೂಲ ಸೌಲಭ್ಯ ಅಭಿವೃದ್ಧಿಗೆ ಹೆಚ್ಚು ಹಣ ತೊಡಗಿಸಿರುವುದರಿಂದಾಗಿ ಉಂಟಾಗಿರುವ ಆದಾಯ ಕೊರತೆ ಸರಿದೂಗಿಸಲು ಪ್ರತಿ ಯೂನಿಟ್‌ಗೆ 1.46 ರೂ. ವಿದ್ಯುತ್ ದರ ಹೆಚ್ಚಿಸಲು ಅನುಮತಿ ನೀಡುವಂತೆ ಮನವಿ ಮಾಡಿದರು.

2023–24ನೇ ಸಾಲಿನಲ್ಲಿ 8,245.68 ದಶಲಕ್ಷ ಯೂನಿಟ್ ವಿದ್ಯುತ್ ಖರೀದಿ ಮಾಡಿದಲ್ಲಿ, 7,167.89 ದಶಲಕ್ಷ ಯೂನಿಟ್ ಮಾರಾಟವಾಗುತ್ತದೆ. ಪ್ರಸಕ್ತ ಸಾಲಿನಲ್ಲಿ ವಿದ್ಯುತ್ ಖರೀದಿಗೆ 4,603.2 ಕೋಟಿ ರೂ. ಸವಕಳಿ 431.85 ಕೋಟಿ ರೂ., ಆರ್ಥಿಕ ವೆಚ್ಚಗಳಿಗೆ 505.14 ಕೋಟಿ ರೂ. ಸೇರಿದಂತೆ 6,522.48 ಕೋಟಿ ರೂ. ಖರ್ಚಾಗುತ್ತದೆ. ವಿದ್ಯುತ್ ಪೂರೈಕೆಯಿಂದ 5,572.74 ಕೋಟಿ ರೂ. ಆದಾಯ ಬರುತ್ತದೆ. ಇದರಿಂದ ಉಂಟಾಗುವ ಕೊರತೆ ನೀಗಿಸಲು ವಿದ್ಯುತ್ ದರ ಹೆಚ್ಚಿಸುವುದು ಅನಿವಾರ್ಯ ಎಂದು ಜಯವಿಭವಸ್ವಾಮಿ ವಾದ ಮಂಡಿಸಿದರು.

ಸರ್ಕಾರಿ ಯೋಜನೆಗಳನ್ನು ಕೊರೊನಾ ಸಂದರ್ಭದಲ್ಲೂ ಮುಂದುವರಿಸಿ, ಗ್ರಾಹಕರಿಗೆ ವಿದ್ಯುತ್ ಪೂರೈಸಿದ್ದೇವು. ಕೈಗಾರಿಕೆಗಳು ಬಂದ್ ಆಗಿದ್ದರಿಂದ ಬೇಡಿಕೆಯೂ ಇರಲಿಲ್ಲ. ವಿದ್ಯುತ್ ಮಾರಾಟವೂ ಆಗಲಿಲ್ಲವಾದ್ದರಿಂದ ನಮಗೆ ನಷ್ಟವಾಯಿತು. ಪರಿವರ್ತಕಗಳ ನಿರ್ವಹಣೆ, ಹೆಚ್‌ಡಿ ವೈರಿಂಗ್, ಗ್ರೌಂಡಿಂಗ್, ಫ್ಯೂಸ್, ಮಿಂಚು ನಿರೋಧಕ ಮುಂತಾದ ಬಾಬತ್ತುಗಳಿಗೆ ನಿಗಮವು ಹಣ ವ್ಯಯಿಸಿದೆ ಎಂಬುದನ್ನೂ ಅವರು ಆಯೋಗದ ಗಮನಕ್ಕೆ ತಂದರು.

ಅದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಮೈಸೂರು ಸಣ್ಣ ಕೈಗಾರಿಕೆಗಳ ಸಂಘದ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್, ಬೀದಿದೀಪಗಳು, ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಗಳಿಂದ ಬರಬೇಕಾದ ಬಾಕಿ ವಿದ್ಯುತ್ ಶುಲ್ಕ ವಸೂಲಿ ಮಾಡಿ, ವಿದ್ಯುತ್ ಸೋರಿಕೆ ಮತ್ತು ಕಳ್ಳತನ ತಡೆದಲ್ಲಿ ನಷ್ಟವಾಗುವುದಿಲ್ಲ ಎಂದರು.

ಈಗಾಗಲೇ ಕೊರೊನಾದಿಂದಾಗಿ ತೀವ್ರ ನಷ್ಟ ಅನುಭವಿಸಿ, ಈಗ ಚೇತರಿಸಿಕೊಳ್ಳುತ್ತಿರುವ ಸಣ್ಣ ಕೈಗಾರಿಕೋದ್ಯಮಿಗಳು, ಮತ್ತೆ ಈಗ ವಿದ್ಯುತ್ ದರ ಹೆಚ್ಚಿಸಿದಲ್ಲಿ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ. ಆದ್ದರಿಂದ ವಿದ್ಯುತ್ ದರ ಹಾಗೂ ಠೇವಣಿ ಹಣ ಹೆಚ್ಚಿಸಬೇಕೆಂಬ ಸೆಸ್ಕಾಂ ಪ್ರಸ್ತಾವನೆಯನ್ನು ಸಾರಾಸಗಟಾಗಿ ತಿರಸ್ಕರಿಸಬೇಕೆಂದು ಅವರು ಒತ್ತಾಯಿಸಿದರು.

ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಅಧ್ಯಕ್ಷ ಕೆ.ಬಿ. ಲಿಂಗರಾಜು, ಉಪಾಧ್ಯಕ್ಷ ಕೆ.ಆರ್. ರವೀಂದ್ರ ಪ್ರಭು ಸಹ, ವಿದ್ಯುತ್ ದರ ಹೆಚ್ಚಿಸಿದಲ್ಲಿ ಸಾವಿರಾರು ಮೈಕ್ರೋ ಕಾಟೇಜ್ ಇಂಡಸ್ಟ್ರಿಗಳು ಕಾರ್ಯಸ್ಥಗಿತಗೊಳ್ಳುತ್ತವೆ ಎಂದರು. ಅದೇ ರೀತಿ ವೆಂಕಟಾಚಲಂ, ಲಕ್ಷ್ಮೀಕಾಂತ, ಎಂ.ಎನ್. ಚಂದ್ರಶೇಖರ್, ಹೆಚ್.ಡಿ. ನವೀನ್ ರಾಜ್ ಅರಸ್, ಅಶ್ವತ್ಥನಾರಾಯಣ ಸೇರಿದಂತೆ 15ಕ್ಕೂ ಹೆಚ್ಚು ಮಂದಿ ವಿಚಾರಣೆ ವೇಳೆ ಆಯೋಗದ ಮುಂದೆ ಹಾಜರಾಗಿ ಯಾವುದೇ ಕಾರಣಕ್ಕೂ ವಿದ್ಯುತ್ ದರ ಪರಿಷ್ಕರಿಸಲು ಅನುಮತಿ ನೀಡಬಾರದೆಂದು ಒತ್ತಾಯಿಸಿದರು. ಚೆಸ್ಕಾಂ ನಿರ್ದೇಶಕ (ತಾಂತ್ರಿಕ) ಸಿ.ಉಮೇಶ್, ಮುಖ್ಯ ಹಣಕಾಸು ಅಧಿಕಾರಿ ಶೇಖ್ ಮಹಮದ್, ಮುಖ್ಯ ಪ್ರಧಾನ ವ್ಯವಸ್ಥಾಪಕ ಕೆ.ವಿ.ಶ್ರೀಧರ್, ಪ್ರಧಾನ ವ್ಯವಸ್ಥಾಪಕ ಸ್ವರೂಪ್ ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಚರ್ಚಾ ಸ್ಪರ್ಧೆ

ಮೈಸೂರು, ಫೆ.15– ಮೈಸೂರು ವಿವಿ ಮಾನಸಗಂಗೋತ್ರಿ ವಿದ್ಯಾರ್ಥಿ ಕ್ಷೇಮ ಪಾಲನಾ ನಿರ್ದೇಶನಾಲಯ ಹಾಗೂ ಬೆಂಗಳೂರು ಕರ್ನಾಟಕ ಸಹಕಾರ ಮಹಾಮಂಡಳ ನಿಯಮಿತ ಸಹಕಾರದೊಂದಿಗೆ 2022–23ನೇ ಶೈಕ್ಷಣಿಕ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 'ಸಹಕಾರ' ಕುರಿತು ಕನ್ನಡ ಚರ್ಚಾ ಸ್ಪರ್ಧೆಯನ್ನು ಫೆ.16ರಂದು ಬೆಳಗ್ಗೆ 10.30ಕ್ಕೆ ಇಎಂಆರ್‌ಸಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದು, ಈ ಕಾರ್ಯಕ್ರಮದ ಉದ್ಘಾಟನೆಯನ್ನು ಮೈಸೂರು ವಿಭಾಗದ ಸಹಕಾರ ಸಂಘಗಳ ಜಂಟಿ ನಿಬಂಧಕ ಡಾ.ಜಿ. ಉಮೇಶ್ ನೆರವೇರಿಸಲಿದ್ದು, ಇತರೆ ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗದ ಪ್ರಾಧ್ಯಾಪಕರು, ಇತರರು ಭಾಗವಹಿಸಲಿದ್ದಾರೆ.

ಫೆ.18ಕ್ಕೆ ಪ್ರವಚನ

ಮೈಸೂರು, ಫೆ.15– ಮೈಸೂರಿನ ಆರ್ಯ ಸಮಾಜದ ವತಿಯಿಂದ ಮಹರ್ಷಿ ದಯಾನಂದ ಸರಸ್ವತಿ ಅವರ 200ನೇ ಜಯಂತಿ ಹಾಗೂ ಋಷಿ ಬೋದೋತ್ಸವ ಕಾರ್ಯಕ್ರಮವನ್ನು ಫೆ.18ರಂದು ಸಂಜೆ 5ಕ್ಕೆ ಹಮ್ಮಿಕೊಳ್ಳಲಾಗಿದ್ದು, ವಿಶೇಷ ವೇದ ಮಂತ್ರಗಳ ಆಹುತಿ ಮತ್ತು ಮಹರ್ಷಿ ದಯಾನಂದರ ಜೀವನ ಸಾಧನೆ ಕುರಿತು ಪ್ರವಚನ ಏರ್ಪಡಿಸಲಾಗಿದೆ ಎಂದು ಆರ್ಯ ಸಮಾಜ ಪ್ರಕಟಣೆಯಲ್ಲಿ ತಿಳಿಸಿದೆ.

ರಾಜ್ಯದಲ್ಲಿ ಅತಂತ್ರ ಸ್ಥಿತಿ ಉಂಟಾಗದಂತೆ ಮತದಾರರು ಎಚ್ಚರ ವಹಿಸಬೇಕಿದೆ

ರಾಜಕೀಯ ವಿಮರ್ಶಕ ಸುಧೀಂದ್ರ ಕುಲಕರ್ಣಿ ಅಭಿಮತ

ಮೈಸೂರು, ಫೆ.15(ಎಂಟಿವೈ)– ಕರ್ನಾಟಕದ ರಾಜಕಾರಣದಲ್ಲಿ ಕೇವಲ ಕಾಂಗ್ರೆಸ್ ಪಕ್ಷದಿಂದ ಮಾತ್ರ ಬದಲಾವಣೆ ಸಾಧ್ಯವಿಲ್ಲ ಹೀಗಾಗಿ ರಾಜಕೀಯ ಸಿದ್ಧಾಂತದ ಆಧಾರದ ಮೇಲೆ ಒಕ್ಕೂಟವೊಂದು ಅಸ್ತಿತ್ವಕ್ಕೆ ಬರಬೇಕಾದ ಅಗತ್ಯವಿದೆ ಎಂದು ರಾಜಕೀಯ ವಿಮರ್ಶಕ ಸುಧೀಂದ್ರ ಕುಲಕರ್ಣಿ ಅಭಿಪ್ರಾಯಪಟ್ಟರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಈ ಬಾರಿಯ ಚುನಾವಣೆ ವೇಳೆ ಮತದಾರರು ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೌಲ್ಯಗಳನ್ನು ರಕ್ಷಿಸಬೇಕು. ಭ್ರಷ್ಟಾಚಾರ ನಿರ್ಮೂಲನೆ ಮಾಡಲು ಕಟಿಬದ್ಧವಾಗಿರುವ, ರೈತ, ಕಾರ್ಮಿಕ, ವಂಚಿತ ವರ್ಗಗಳ ಏಳಿಗೆಗೆ ಸಂವೇದನಾಶೀಲವಾಗಿ ಆಡಳಿತ ಕೊಡಬಲ್ಲವರಿಗೆ ಸುಭದ್ರ ಸರ್ಕಾರ ರಚನೆಗೆ ನೆರವಾಗಬೇಕು. ಯಾವುದೇ ಕಾರಣಕ್ಕೂ ಅತಂತ್ರ ಫಲಿತಾಂಶ ಬರದಂತೆ ಎಚ್ಚರವಹಿಸಬೇಕು ಎಂದು ಮನವಿ ಮಾಡಿದರು. ಮುಂಬರುವ ಚುನಾವಣೆಯಲ್ಲಿ ಬಿಜೆಪಿ ತನ್ನ ಆಡಳಿತದ ಸಾಧನೆ, ಈ ಹಿಂದೆ ನೀಡಿದ್ದ ಭರವಸೆ ಈಡೇರಿಕೆ ಕುರಿತ ವಿಷಯದ ಮೇಲೆ ಮತ ಕೇಳಬೇಕು. ಅದನ್ನು ಹೊರತುಪಡಿಸಿ ಸಮಾಜದಲ್ಲಿ ಧಾರ್ಮಿಕ ಧ್ರುವೀಕರಣ ವಿಷಯ ಮುಂದಿಟ್ಟು ಮತ ಯಾಚಿಸಬಾರದು. ಟಿಪ್ಪು ಸುಲ್ತಾನ್, ಲವ್ ಜಿಹಾದ್ ಇಂತಹ ಅಸಂಬದ್ಧ ವಿಷಯಗಳನ್ನೇ ಚುನಾವಣೆಯ ಮುಖ್ಯ ವಿಷಯಗಳನ್ನಾಗಿಸುವುದು ಪ್ರಜಾಪ್ರಭುತ್ವಕ್ಕೆ ಅಪಾಯ ತರಲಿದೆ. ಇಂತಹ ನಡವಳಿಕೆ ತಪ್ಪು ಎಂದು ನಂಬುವ ಅನೇಕರು ಆರ್‌ಎಸ್‌ಎಸ್, ಬಿಜೆಪಿಯಲ್ಲೂ ಇದ್ದು, ಇವರು ಇದರ ವಿರುದ್ಧ ಧನಿಯೆತ್ತಬೇಕು ಎಂದು ಕೋರಿದರು.

ಇಂದು ದೇಶದಾದ್ಯಂತ ಸರ್ವಪಂಥ ಸಮಾನವಾದ ಹಿಂದುತ್ವ, ನಿಜವಾದ ಭಾರತೀಯತೆ ಬಗೆಗಿನ ಚರ್ಚೆ ನಡೆಯುತ್ತಿದೆ. ಹೀಗಾಗಿ ಹಿಂದೂ ವಿರೋಧಿಯಲ್ಲದ ಜಾತ್ಯತೀತ, ಮುಸ್ಲಿಂ ವಿರೋಧಿಯಲ್ಲದ ಹಿಂದುತ್ವ, ಸ್ವ ಸುಧಾರಣೆ ಇರುವ ಇಸ್ಲಾಂ ತತ್ವ, ಎಲ್ಲರಿಗೂ ಸಮಾನ ನ್ಯಾಯದ, ಸರ್ವ ಸಮಾನವಾದ ರಾಷ್ಟ್ರೀಯತೆ ಬೇಕಾಗಿದೆ. ದೇಶದಲ್ಲಿ ಎಲ್ಲಾ ಪಕ್ಷಗಳು ಏಕ ಪರಿವಾರದ ಪಕ್ಷಗಳಾಗಿವೆ. ಆದ್ದರಿಂದ ಇದರ ವಿರುದ್ಧ ಜನರಲ್ಲಿ ಜಾಗೃತಿ ಬರಬೇಕು. ಕೇಂದ್ರ ಸರ್ಕಾರ ಉದ್ಯೋಗ ಸೃಷ್ಟಿ, ಬೆಲೆಯೇರಿಕೆ ನಿಯಂತ್ರಣದಲ್ಲಿ ವಿಫಲವಾಗಿದೆ. ಪಕ್ಷದಲ್ಲಿಯೂ ಆಂತರಿಕ ಪ್ರಜಾಪ್ರಭುತ್ವ ಕಾಯ್ದುಕೊಂಡಿಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರಕಾಶ್ ಕಮ್ಮರಡಿ, ಶ್ರೀಕಂಠಮೂರ್ತಿ ಇದ್ದರು.

ಫೆ.20 ರಂದು ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ

ಮೈಸೂರು,ಫೆ.15– ಸರ್ಕಾರದ ನಿರ್ದೇಶನದಂತೆ ಜಿಲ್ಲಾಧಿಕಾರಿಗಳು ಪ್ರತಿ ಮಾಹೆ 3ನೇ ಶನಿವಾರದಂದು ಜಿಲ್ಲಾಧಿಕಾರಿಗಳ ನಡೆ ಗ್ರಾಮಗಳ ಕಡೆಗೆ ಗ್ರಾಮ ಭೇಟಿ ಕಾರ್ಯಕ್ರಮವನ್ನು ನಡೆಸುತ್ತಿದ್ದು, ಆದರೆ ಸದರಿ ದಿನದಂದು 'ಮಹಾಶಿವರಾತ್ರಿ' ಸಾರ್ವತ್ರಿಕ ರಜೆಯಿರುವ ಕಾರಣ ಫೆ.20 ರಂದು ಟಿ.ನರಸೀಪುರ ತಾಲೂಕು ಬನ್ನೂರು ಹೋಬಳಿಯ ಕೊಡಗಳ್ಳಿ ಗ್ರಾಮದಲ್ಲಿ ನಿಗದಿಪಡಿಸಲಾಗಿದೆ. ಟಿ.ನರಸೀಪುರ ತಾಲೂಕು ಬನ್ನೂರು ಹೋಬಳಿಯ ಕೊಡಗಳ್ಳಿ ಗ್ರಾಮದ ಗ್ರಾಮಸ್ಥರು, ಸದರಿ ಗ್ರಾಮಕ್ಕೆ ಸಂಬಂಧಿಸಿದಂತೆ ಮೇಲ್ಕಂಡ ಸಮಸ್ಯೆಗಳ ಬಗ್ಗೆ ಮುಂಚಿತವಾಗಿಯೇ ಸಂಬಂಧಪಟ್ಟ ನಾಡಕಚೇರಿ, ಉಪತಹಶೀಲ್ದಾರ್, ರಾಜಸ್ವ ನಿರೀಕ್ಷಕರಿಗೆ ತಮ್ಮ ಮನವಿಗಳನ್ನು ಸಲ್ಲಿಸಿ ಪರಿಹಾರ, ಸಮಸ್ಯೆ ಇತ್ಯರ್ಥಪಡಿಸಿಕೊಳ್ಳಲು ತಿಳಿಸಲಾಗಿದೆ.

ಡಿಸಿ ಭೇಟಿ ನೀಡಲಿರುವ ತಾಲೂಕನ್ನು ಹೊರತುಪಡಿಸಿ ಉಪವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರು ಮೈಸೂರು ತಾಲೂಕಿನ ಜಯಪುರ ಹೋಬಳಿಯ ದೇವಗಳ್ಳಿ, ಕೆ.ಆರ್.ನಗರ ತಾಲೂಕು ಮತ್ತು ಸಾಲಿಗ್ರಾಮ ತಾಲೂಕಿನ ಹೊಸ ಅಗ್ರಹಾರ ಹೋಬಳಿಯ ಮುಂಜನಹಳ್ಳಿ, ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ಹೋಬಳಿಯ ನೂರಲಕುಪ್ಪೆ, ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹೋಬಳಿಯ ಕಿತ್ತೂರು, ಸರಗೂರು ತಾಲೂಕಿನ ಕಂದಲಿಕೆ ಹೋಬಳಿಯ ಆಲನಹಳ್ಳಿ ಹಾಡಿ, ನಂಜನಗೂಡು ತಾಲೂಕಿನ ದೊಡ್ಡಕವಲಂದೆ ಹೋಬಳಿಯ ಹಳೇಪುರ ಗ್ರಾಮಗಳಲ್ಲಿ ಕಾರ್ಯಕ್ರಮ ನಡೆಸಲಿದ್ದಾರೆ ಎಂದು ತಿಳಿಸಿದ್ದಾರೆ.

ಒಕ್ಕಲಿಗ ಸಮುದಾಯದ ಸಾಧಕರ ಜೀವನಚರಿತ್ರೆ ಯುವಕರಿಗೆ ಪರಿಚಯಿಸುವ ಅವಶ್ಯವಿದೆ

- ಹಿರಿಯ ನ್ಯಾಯವಾದಿ ಅಪ್ಪಾಜಿಗೌಡರ ಸಲಹೆ
- ಕೆಂಗಲ್ ಹನುಮಂತಯ್ಯ ಅವರ ಸಂಸ್ಮರಣೆ

ಮೈಸೂರು, ಫೆ.15(ಎಸ್‌ಪಿಎನ್)– ನಮ್ಮ ಯುವಕರಿಗೆ ಸಮುದಾಯದಲ್ಲಿ ಹುಟ್ಟಿ ಬೆಳೆದು ಬೇರೆ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಸಾಧಕರ ಜೀವನ ಚರಿತ್ರೆ ಪರಿಚಯಿಸುವ ಹೊಣೆ ಸಂಘ–ಸಂಸ್ಥೆಗಳ ಮೇಲಿದೆ ಎಂದು ಹಿರಿಯ ವಕೀಲ ಅಪ್ಪಾಜಿಗೌಡ ಅಭಿಪ್ರಾಯಪಟ್ಟರು.

ಮೈಸೂರು ಜಯನಗರದ ಹೊಸ ನ್ಯಾಯಾಲಯದ ಸಂಕೀರ್ಣದ ಎದುರು ನೇಗಿಲಯೋಗಿ ಮರುಳೇಶ್ವರ ಸೇವಾ ಭವನದಲ್ಲಿ ಕೆಂಗಲ್ ಹನುಮಂತಯ್ಯ ರೈಲ್ವೆ ಒಕ್ಕಲಿಗ ನೌಕರರ ಕ್ಷೇಮಾಭಿವೃದ್ಧಿ ಸಂಘ, ಮರುಳೇಶ್ವರ ಧರ್ಮದರ್ಶಿ ಟ್ರಸ್ಟ್, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಹಾಗೂ ಇತರೆ ಸಂಘ – ಸಂಸ್ಥೆಗಳೊಂದಿಗೆ ಕೆಂಗಲ್ ಹನುಮಂತಯ್ಯರವರ ಜಯಂತಿ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಕೆಂಗಲ್ ಹನುಮಂತಯ್ಯನವರು ಸ್ವತಂತ್ರ ಭಾರತದ ಪ್ರಮುಖ ರಾಜಕೀಯ ಮುತ್ಸದ್ದಿಯೂ ಧೀಮಂತ ರಾಜಕಾರಣಿ ಕೂಡ ಹೌದು. ರಾಮನಗರ ತಾಲೂಕಿನ ಲಕ್ಕಪ್ಪನಹಳ್ಳಿಯಲ್ಲಿ 1908ರಲ್ಲಿ ಜನಿಸಿದರು. 1930 ರಲ್ಲಿ ಮೈಸೂರು ಮಹಾರಾಜ ಕಾಲೇಜಿನ ಕಲಾ ವಿಭಾಗದಲ್ಲಿ ಪದವಿಯನ್ನು ಪಡೆದು, ನಂತರ ಪೂನಾ ಕಾನೂನು ಕಾಲೇಜಿನಿಂದ ಎಲ್‌ಎಲ್‌ಬಿಯನ್ನು ಮುಗಿಸಿದ ನಂತರ ವಕೀಲ ವೃತ್ತಿ ಆರಂಭಿಸಿ, ಮುಂದೆ ಕರ್ನಾಟಕ ರಾಜಕಾರಣದಲ್ಲಿ ಗುರುತಿಸಿಕೊಂಡು ಹಲವು ಹೋರಾಟಗಳಲ್ಲಿ ಭಾಗಿಯಾಗಿದ್ದಾರೆ ಎಂದು ತಿಳಿಸಿದರು. ನಂತರ ಮಹಾತ್ಮ



ಗಾಂಧಿ ಅವರಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಹೋರಾಟಕ್ಕಿಳಿದು ಅದಮ್ಯ ಶಕ್ತಿ ಬೆಳೆಸಿಕೊಂಡಿದ್ದರು. ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿ ಪದವಿಯಿಂದ ಕೆಳಗಿಳಿದು ಎಷ್ಟೋ ವರ್ಷಗಳ ನಂತರವೂ ಅವರ ಸಾಧನೆ ಸ್ಮರಿಸುತ್ತಿರುವುದು ಉತ್ತಮ ಸಂಗತಿ ಎಂದರು.

ಒಕ್ಕಲಿಗ ಸಮುದಾಯ ವ್ಯವಸಾಯದಲ್ಲಿ ತೊಡಗಿರುವ ಸಮುದಾಯ. ಈ ಸಮುದಾಯದ ಜನರಿಗೆ ಬಡತನವಿದ್ದರೂ ಇನ್ನೊಬ್ಬರ ಬಳಿ ಬೇಡಿ ಹಸಿವು ನೀಗಿಸಿಕೊಳ್ಳುವವರಲ್ಲ. ಬದಲಾಗಿ ಅವರೆಲ್ಲಾ ದುಡಿದು ಹಸಿವು ನೀಗಿಸಿಕೊಳ್ಳುವ ಸ್ವಾಭಿಮಾನ ರೂಪಿಸಿಕೊಂಡಿರುವುದು ಹೆಮ್ಮೆಯ ಸಂಗತಿ. ಆದರೆ, ಇತ್ತೀಚಿನ ದಿನಗಳಲ್ಲಿ ಒಕ್ಕಲಿಗ ಸಮುದಾಯದ ಅಸ್ಮಿತೆಯಾಗಿ 'ಗೌಡ' ಪದವನ್ನು ತಮ್ಮ ಹೆಸರಿನ ಮುಂದೆ ಇಟ್ಟುಕೊಳ್ಳಲು ಯುವಕರು ಅಂಜಿಕೆ ಪಟ್ಟುಕೊಳ್ಳುತ್ತಾರೆ. ಇದು ಸಲ್ಲದು ಎಂದು ಕಿವಿಮಾತು ಹೇಳಿದರು. ಈ ವೇಳೆ ಹಿರಿಯ ಪತ್ರಕರ್ತ ಸಿ.ಕೆ.ಮಹೇಂದ್ರ, ಇಎಸ್‌ಐ ಆಸ್ಪತ್ರೆಯ ಮೂಳೆ ಹಾಗೂ ಕೀಲು ರೋಗ ತಜ್ಞ ದೇಶ ಲಿಂಗೇಗೌಡ, ಹಿರಿಯ ವಕೀಲ ಅಪ್ಪಾಜಿಗೌಡ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಕೆಂಗಲ್ ಹನುಮಂತಯ್ಯ ರೈಲ್ವೆ ಒಕ್ಕಲಿಗ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ಬಿ.ಮಂಜೇಗೌಡ, ಶ್ರೀ ಮರುಳೇಶ್ವರ ಧರ್ಮದರ್ಶಿ ಪ್ರೊ. ಆರ್.ರಂಗಯ್ಯ, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ರವಿಕುಮಾರ್, ಮುಂದಾಳು ದ್ರಾವಿಡ ಕನ್ನಡಿಗರ ಬಳಗದ ಅಭಿಗೌಡ, ಪ್ರೊ. ಭೀಮರಾಜು, ಈರೇಗೌಡ, ಮಂಜುಳಾ ಭದ್ರೇಗೌಡ, ಆನಂದ, ಸುರೇಶ್, ಪ್ರವೀಣ್, ತ್ರಿಮೂರ್ತಿ ಸೇರಿದಂತೆ ಇತರರಿದ್ದರು.

ಮಾನ್ಯ ಗೌರವಾನ್ವಿತ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಮೈಸೂರು ಉಪವಿಭಾಗ, ಮೈಸೂರು

ಮೇಲ್ಮನವಿ ಸಂಖ್ಯೆ : 545/2021

ಮೇಲ್ಮನವಿದಾರರು: ತಹೇರುನ್ನೀಸ ಬೇಗಂ ಕೋಂ ಮಹಮ್ಮದ್ ಖಲೀಂ ಸಾಹೇಬ್ ಬನ್ನೂರು ಟೌನ್, ಟಿ.ನರಸೀಪುರ ತಾಲ್ಲೂಕು. ವಿರುದ್ಧ

ಎದುರುದಾರರು: 1. ತಹಶೀಲ್ದಾರ್ ರವರು, ಟಿ.ನರಸೀಪುರ ತಾ॥, 2. ಸಿ.ವಿ.ಸೌಂದರ್ಯ ರಾಜನ್ ಬಿನ್ ಸಿ.ವಿ ಜಾನಕವಲ್ಲೀ, 3. ಸಿ.ವಿ.ಕೃಷ್ಣ ಕುಮಾರ್ ಬಿನ್ ಸಿ.ವಿ ಜಾನಕವಲ್ಲೀ 2 ಮತ್ತು 3 ರವರ ವಾಸ: ರಾಮಾನುಜ ರಸ್ತೆ, ಫೋರ್ಟ್ ಮೊಹಲ್ಲಾ, ಮೈಸೂರು

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಮೇಲ್ಮನವಿದಾರನಾದ ನಾನು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ 1 ರಿಂದ 3ನೇ ಎದುರುದಾರರ ವಿರುದ್ಧ ಟಿ.ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ರಂಗನಾಥಪುರ ಗ್ರಾಮದ ಸರ್ವೆ.ನಂ. 27ರ ಪೈಕಿ ಒಟ್ಟು ವಿಸ್ತೀರ್ಣ 38 ಗುಂಟೆ ಜಮೀನಿಗೆ ಸಂಬಂಧಿಸಿದಂತೆ, ಪಹಣಿ ಕಾಲಂ 9 ಮತ್ತು 10ರಲ್ಲಿ ಖಾತಾ ಸಂಖ್ಯೆ 120 ಮತ್ತು ಒಟ್ಟುಗೂಡಿಸು ಎಂದು ನಮೂದಾಗಿರುವುದನ್ನು ಪ್ರಶ್ನಿಸಿ ಈ ಮೇಲ್ಮನವಿಯನ್ನು ಘನ ನ್ಯಾಯಾಲಯದ ಮುಂದೆ ತರಲಾಗಿದ್ದು, 2 ಮತ್ತು 3ನೇ ಎದುರುದಾರರ ಹಾಜರಾತಿಗಾಗಿ ಅಂಚೆ ತಲೋಪೋಲೆ ಮೂಲಕ ನೋಟಿಸನ್ನು ಜಾರಿ ಮಾಡಿದ್ದು, ಆದರೆ 2 ಮತ್ತು 3ನೇ ಎದುರುದಾರರು ವಿಳಾಸದಲ್ಲಿ ವಾಸವಿಲ್ಲವೆಂದು ಹಿಂಬರಹ ಬರೆದು ಅಂಚೆ ತಲೋಪೋಲೆಯನ್ನು ಅಂಚೆಯವರು ಹಿಂತಿರುಗಿಸಿರುತ್ತಾರೆ.

ಆದರೆ 2 ಮತ್ತು 3ನೇ ಎದುರುದಾರರ ಹಾಜರಾತಿ ಪಡೆದುಕೊಂಡು ಸದರಿ ಮೇಲ್ಮನವಿಯನ್ನು ಇತ್ಯಾರ್ಥ ಪಡಿಸಬೇಕಾಗಿರುವುದರಿಂದ 2ನೇ ಎದುರುದಾರರ ಹಾಜರಾತಿ ಈ ಮೇಲ್ಮನವಿಗೆ ಅತ್ಯವಶ್ಯಕವಾಗಿರುವುದರಿಂದ ಸದರಿಯವರ ಹಾಜರಾತಿಗಾಗಿ ಮೈಸೂರು ಮಿತ್ರ ಪತ್ರಿಕೆಯಲ್ಲಿ ಪ್ರಕಟಣೆ ಮಾಡಿ ಮೇಲ್ಕಂಡ ವಿಚಾರದ ಬಗ್ಗೆ 2 ಮತ್ತು 3ನೇ ಎದುರುದಾರರು ಏನಾದರೂ ತಕರಾರು ಇದ್ದಲ್ಲಿ ಸುನಾವಣಾ ದಿನಾಂಕ: 13.03.2023 ರಂದು ಮಧ್ಯಾಹ್ನ 3.00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗಿ ಸಲ್ಲಿಸಬಹುದು. ತಪ್ಪಿದಲ್ಲಿ ನಿಯಮಾನುಸಾರ ಮೇಲ್ಕಂಡ ಪ್ರಕರಣವನ್ನು ಇತ್ಯರ್ಥಪಡಿಸಲಾಗುವುದು ಎಂದು ಮೈಸೂರು ಮಿತ್ರ ಪತ್ರಿಕೆಯಲ್ಲಿ ಪ್ರಕಟಣೆ ಮಾಡಲು ಅನುವು ಮಾಡಿಕೊಡಬೇಕೆಂದು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ.

ನ್ಯಾಯಾಲಯದ ಆದೇಶ ಮೇರೆಗೆ
ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಉಪವಿಭಾಗ, ಮೈಸೂರು
ಸಹಿ/– ತಹಶೀಲ್ದಾರ್, ಉಪವಿಭಾಗಾಧಿಕಾರಿಗಳ ಕಛೇರಿ, ಮೈಸೂರು ಉಪವಿಭಾಗ, ಮೈಸೂರು

ಅರ್ಜಿದಾರರ ಪರ ವಕೀಲರು
ಸಹಿ/–ಎಸ್.ಕುಮಾರ್
ದಿನಾಂಕ: 14.02.2023, ಸ್ಥಳ: ಮೈಸೂರು

5ನೇ ವರ್ಷದ ಪುಣ್ಯಸ್ಮರಣೆ



ನಿಧನ: 16.02.2018
ಯಜಮಾನ್ ಪುಟ್ಟಸಿದ್ದಯ್ಯ
ಕುಕ್ಕರಹಳ್ಳಿ, ಮೈಸೂರು.
ದುಃಖತಪ್ತರು: ಪತ್ನಿ ಶ್ರೀಮತಿ ಪುಟ್ಟನಿಂಗಮ್ಮ, ಅಂದಾನಯ್ಯ.ಕೆ, ಮಕ್ಕಳು ಮತ್ತು ಅಳಿಯಂದಿರು ಹಾಗೂ ಬಂಧುಗಳು

ತಿದ್ದುಪಡಿ

ಈ ಮೂಲಕ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರರಿಗೆ / ಜಾಮೀನುದಾರರಿಗೆ ತಿಳಿಯಪಡಿಸುವುದೇನೆಂದರೆ ಈ ದಿನ ದಿನಾಂಕ 15.02.2023 ರಂದು **ಮೈಸೂರು ಮಿತ್ರ** ಪತ್ರಿಕೆಯಲ್ಲಿ ಕೆನರಾ ಬ್ಯಾಂಕ್, ಪ್ರಾದೇಶಿಕ ಕಛೇರಿಯಿಂದ ಹೊರಡಿಸಿರುವ ವಾಹನ ಹರಾಜು ಮಾರಾಟ ಪ್ರಕಟಣೆಯಲ್ಲಿ ಕ್ರ.ಸಂ 4 ರ ಇಲವಾಲ ಶಾಖೆಯ ಸಾಲಗಾರರಾದ ಶ್ರೀ ರಾಜಕುಮಾರ್ ಶರ್ಮಾರವರ ವಾಹನದ ಮೀಸಲು ಮೊತ್ತವು ರೂ.4,70,000/– ಮತ್ತು ಇಎಂಡಿ ಮೊತ್ತವು ರೂ. 47,000/– ಎಂದು ತಪ್ಪಾಗಿ ಪ್ರಕಟಿಸಲಾಗಿದೆ. ದಯವಿಟ್ಟು ಮೀಸಲು ಮೊತ್ತ ರೂ.5,18,000/– ಎಂದು ಇಎಂಡಿ ಮೊತ್ತವು ರೂ. 52,000/– ಎಂದು ಓದಿಕೊಳ್ಳತಕ್ಕದ್ದು. ಉಳಿದ ಎಲ್ಲಾ ಮಾಹಿತಿ, ನಿಯಮ ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಸಾರ್ವಜನಿಕ ಪ್ರಕಟಣೆ


ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಲೇಟ್. ದಾಕ್ಷಾಯಿಣಿರವರ ಮಗಳು ಮತ್ತು ಶ್ರೀ ಧ್ರುವ ಜ್ಯೋತಿ ಅರಸ್ ಎಂ.ಎನ್., ರವರ ಧರ್ಮಪತ್ನಿ ಶ್ರೀಮತಿ ಸುಷ್ಮಧ್ರುವರವರು, ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರು ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ, ಬ್ಯಾಂಕ್/ಹಣಕಾಸು ಸಂಸ್ಥೆ ಒಳಗೊಂಡಂತೆ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ, ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಭಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ನಗರ, ಸರಸ್ವತಿಪುರಂ ವೆಸ್ಟ್ ಆಫ್ ತೊಣಚಿಕೊಪ್ಪಲು 4ನೇ ಹಂತ (SWT ಕೊಪ್ಪಲು 4ನೇ ಹಂತ) ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ 1311/ಐ, ಉಳ್ಳ ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ: 24 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ: 15 ಮೀಟರ್‌ಗಳು, ಒಟ್ಟು ವಿಸ್ತೀರ್ಣ: 360.00 ಚದರ ಮೀಟರ್‌ಗಳುಳ್ಳ ಸ್ವತ್ತಿಗೆ ಚಕ್ಕುಬಂದಿ, ಪೂರ್ವಕ್ಕೆ 60 ಅಡಿ ಅಗಲದ ರಸ್ತೆ–ಪಡುವಣ ರಸ್ತೆ, ಪಶ್ಚಿಮಕ್ಕೆ: ದಟ್ಟಗಳ್ಳಿ ಗ್ರಾಮದ ಗಡಿ, ಉತ್ತರಕ್ಕೆ : ನಿವೇಶನ ಸಂಖ್ಯೆ, 1311/ಹೆಚ್ ಮತ್ತು ದಕ್ಷಿಣಕ್ಕೆ: ನಿವೇಶನ ಸಂಖ್ಯೆ: 1311/ಜೆ

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು,
ಎಸ್‌ಎಲ್‌ಡಿ ಲಾ ಫರ್ಮ್, ನಂ: 1485/ಎ,
ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ,
ಮೈಸೂರು, ಮೊ: 9844640641
Email: sldlawfirm2021@gmail.com

ಪುಣ್ಯಸ್ಮರಣೆ



ಶ್ರೀ ಎಸ್.ಬಿ.ಶಿವಣ್ಣನವರು (ಬಿಲ್ಡಿಂಗ್ ಕಂಟ್ರಾಕ್ಟರ್)

ಗೌರವಾಧ್ಯಕ್ಷರು	: ಶ್ರೀ ರಾಮಲಿಂಗೇಶ್ವರ ದೇವಸ್ಥಾನ, ಮೈಸೂರು,
ಸಂಸ್ಥಾಪಕ ನಿರ್ದೇಶಕರು	: ಒಕ್ಕಲಿಗರ ಸಂಘ, ಮೈಸೂರು ಜಿಲ್ಲೆ,
ಕೋಶಾಧ್ಯಕ್ಷರು	: ಶ್ರೀ ಗುರುದೇವಾಶ್ರಮ, ಸಾಧು ಸಮಾಜ, ಮೈಸೂರು
ಡೆವಲಪರ್ಸ್	: ಶ್ರೀ ಭೈರವೇಶ್ವರ ನಗರ, ನಂಜನಗೂಡು–ಊಟಿ ರಸ್ತೆ
ಸದಸ್ಯರು	: ಎನ್.ಸಿ.ಕರಿಯಪ್ಪ ಟ್ರಸ್ಟ್, ಮೈಸೂರು

ದುಃಖತಪ್ತರು

ಧರ್ಮಪತ್ನಿ: ಶ್ರೀಮತಿ ಡಿ.ಪಾರ್ವತಮ್ಮ, ಮಕ್ಕಳಾದ ಯಶಸ್ವಿನಿ ಎಸ್.ಸೋಮಶೇಖರ್ MUDA ಅಧ್ಯಕ್ಷರು, ಎಸ್.ಸೇತುರಾಂ, ಎಸ್.ಉಷಾದೇವಿ, ಎಸ್.ಚಂದ್ರಶೇಖರ್, ಎಸ್.ಆನಂದ್ ಹಾಗೂ ಅಳಿಯಂದಿರರಾದ, ಸಿ.ಅಪ್ಪಾಜಿಗೌಡರು, ವಕೀಲರು ಮತ್ತು ಸೊಸೆಯಂದಿರಾದ, ಕೆ.ಕಾಂತಮ್ಮ, ರಾಧ.ಎಸ್, ವೀಣಾ.ಪಿ ಮತ್ತು ಪಂಕಜಾ, ಮೊಮ್ಮಕ್ಕಳು ಹಾಗೂ ಮರಿಮಕ್ಕಳು

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ಭಾಗ್ಯಮ್ಮ

ಜನನ : 08.07.1953 ಮರಣ : 15.02.2023
ಇವರು ದಿನಾಂಕ 15.02.2023 ರಂದು ದೈವಾಧೀನರಾಗಿದ್ದು, ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 17.02.2023 ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಸ್ವಗ್ರಾಮ ಹೊಸಕುಂಡಿಯಲ್ಲಿ ನೆರವೇರಿಸಲಾಗುವುದು.
ಅಂತಿಮ ದರ್ಶನವನ್ನು ದಿನಾಂಕ 16.02.2023 ಗುರುವಾರ ಭಾನವಿ ಆಸ್ಪತ್ರೆಯಲ್ಲಿ ಏರ್ಪಡಿಸಲಾಗಿದೆ.
ದುಃಖತಪ್ತರು: **ನರಸೇಗೌಡ ಮತ್ತು ಕುಟುಂಬ,**
ಅಧ್ಯಕ್ಷರು, ಭಾನವಿ ಆಸ್ಪತ್ರೆ ಮತ್ತು ಭಾನವಿ ಚಾರಿಟಬಲ್ ಟ್ರಸ್ಟ್

ನೇರ ಸಂದರ್ಶನ
ಆರ್‌ಬಿಎಲ್ ಫಿನ್‌ಸರ್ವ್ ಲಿ., ನಲ್ಲಿ @ RBL Finserve Ltd.

- ಹುದ್ದೆ: ಗ್ರೂಪ್ ಲೋನ್ ಆಫೀಸರ್ಸ್
- ವಿದ್ಯಾರ್ಹತೆ: ಕನಿಷ್ಠ ಪಿಯುಸಿ ಪಾಸ್, ಹೊಸಬರೂ ಕೂಡ ಅರ್ಜಿ ಸಲ್ಲಿಸಬಹುದು.
- ವಯೋಮಿತಿ: 18 ರಿಂದ 30 ವರ್ಷದೊಳಗಿರಬೇಕು
- ಸಲ್ಲಿಸಬೇಕಾದ ದಾಖಲಾತಿಗಳು: ಸ್ವವಿರ, ಆಧಾರ್, ಪ್ಯಾನ್, ವಿದ್ಯಾರ್ಹತೆ ದಾಖಲಾತಿಗಳು, ಕೊನೆಯ 3 ತಿಂಗಳ ವೇತನ ರಶೀದಿ. (ಅನುಭವಿಗಳಿಗೆ), ಬಿಡುಗಡೆ ಪತ್ರ, ಬೈಕ್, ಡ್ರೈವಿಂಗ್ ಲೈಸೆನ್ಸ್ ಹೊಂದಿರಬೇಕು (ಕಡ್ಡಾಯ)-ಮೂಲ ದಾಖಲೆಗಳು ಮತ್ತು ಜೆರಾಕ್ಸ್ ಪ್ರತಿಗಳು ಕಡ್ಡಾಯ.
- ಸೌಲಭ್ಯಗಳು: ಕಾರ್ಯಕ್ಷಮತೆಗಳಿಗನುಗುಣವಾಗಿ ಇನ್ಸೆಂಟೀವ್ಸ್, ಪಿಎಫ್, ಇಎಸ್‌ಐ, ಇನ್ಶೂರೆನ್ಸ್ ಮತ್ತು ವೃತ್ತಿ ಬೆಳವಣಿಗೆ
- ವೇತನ: ಉದ್ಯಮದಲ್ಲಿ ಅತ್ಯುತ್ತಮ+ ಆಕರ್ಷಕ ಇನ್ಸೆಂಟೀವ್ಸ್

ಸಂದರ್ಶನ ಸ್ಥಳ	ಸಂದರ್ಶನ ದಿನಾಂಕ	ವಿಳಾಸ	ಸಂಪರ್ಕಿಸುವ ಮೊ. ಸಂಖ್ಯೆ
ಚಾಮರಾಜನಗರ	17.02.2023 20.02.2023 21.02.2023	9ನೇ ಕ್ರಾಸ್, 1ನೇ ಅಂತಸ್ತು, ಎಲ್‌ಐಸಿ ರಸ್ತೆ, ನಂದಿ ಭವನದ ಎದುರು, ಚಾಮರಾಜನಗರ	7676263300 7975155873
ಮಂಡ್ಯ	17.02.2023 20.02.2023 21.02.2023	1ನೇ ಅಂತಸ್ತು, 2212/ಬಿ, ಶ್ರೀ ಆರ್ಕೇಡ್ ಬಿಲ್ಡಿಂಗ್, 100 ಅಡಿ ರಸ್ತೆ, ಗಾಂಧಿ ನಗರ, ಮಂಡ್ಯ, ಕರ್ನಾಟಕ - 571404	9972727679 9060423820

ಕರ್ನಾಟಕ ಸರ್ಕಾರ

ಕಾರ್ಯದರ್ಶಿಗಳ ಕಾರ್ಯಾಲಯ, ಶ್ರೀ ಮಲೈಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ದೂರವಾಣಿ ಸಂಖ್ಯೆ: 08225–272128 ಫ್ಯಾಕ್ಸ್ ಸಂಖ್ಯೆ : 08225–272123 ಇಮೇಲ್: sec.mmtemple@gmail.com

ಸಂಖ್ಯೆ ಶ್ರೀ ಮ.ಮ.ಕ್ಷೇ.ಅ.ಪ್ರಾ/ದಾಸೋಹ/3ಪಿಆರ್/4/2022–23 ದಿನಾಂಕ: 07.02.2023

ಇ–ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಶ್ರೀ ಮಲೈ ಮಹದೇಶ್ವರಸ್ವಾಮಿ ಕೇತ್ರ ಅಭಿವೃದ್ಧಿ ಪ್ರಾಧಿಕಾರದ ನಿತ್ಯ ಅನ್ನದಾಸೋಹ ಭವನದಲ್ಲಿ ಭಕ್ತಾದಿಗಳಿಂದ ಕಾಣಿಕೆಯಾಗಿ ಬಂದಿರುವ ಅಂದಾಜು 50ಟನ್ (ಐವತ್ತು ಸಾವಿರ ಕೆ.ಜಿ) ಅಕ್ಕಿಯನ್ನು ಇ–ಟೆಂಡರ್ ಕರೆಯಲಾಗಿದೆ. ಅಕ್ಕಿಯನ್ನು ಪಡೆಯಲು ಇಚ್ಛಿಸುವವರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಭಾಗವಹಿಸಬಹುದು ಮತ್ತು ಹೆಚ್ಚಿನ ವಿವರಗಳಿಗೆ ಈ ಕಛೇರಿಯ ಅವಧಿಯಲ್ಲಿ ದಿನಾಂಕ: 21.02.023ರ ಸಂಜೆ 4.00 ಗಂಟೆ ಒಳಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08225–272128 ಮತ್ತು ಮೊಬೈಲ್ ನಂ: 9481092147 ಶ್ರೀ ಎಂ.ಮಲ್ಲಿಕಾರ್ಜುನಸ್ವಾಮಿ, ದಾಸೋಹ ವ್ಯವಸ್ಥಾಪಕರಿಂದ ಮಾಹಿತಿ ಪಡೆಯಬಹುದು.

ಕ್ರ.ಸಂ	ಟೆಂಡರ್ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1.	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ನಿತ್ಯ ಅನ್ನದಾಸೋಹದಲ್ಲಿ ದಾಸ್ತಾನು ಇರುವ ಸುಮಾರು 50 ಟನ್ ಹೆಚ್ಚುವರಿ ಅಕ್ಕಿಯನ್ನು ವಿಲೇ ಮಾಡುವುದು.	10.00	25,000–00

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ

1	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	ದಿನಾಂಕ: 08.02.2023	ರ ನಂತರ
2.	ಟೆಂಡರ್ ವಿಚಾರಣೆಗಾಗಿ ಕೊನೆ ದಿನಾಂಕ ಮತ್ತು ಕಾಲ	ದಿನಾಂಕ: 21.02.2023	ಸಂಜೆ 4.00 ಗಂಟೆಯವರೆಗೆ
3	ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಕಾಲ	ದಿನಾಂಕ: 22.02.2023	ಸಂಜೆ 4.00 ಗಂಟೆಯವರೆಗೆ
4	ಟೆಂಡರ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	ದಿನಾಂಕ: 24.02.2023	

ಸಹಿ/– ಕಾರ್ಯದರ್ಶಿ, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರಬೆಟ್ಟ
ವಾ.ಸಾ.ಸಂ.ಇ/ಚಾ.ನಗರ.582/2022–23